ಕೋಶಾ ದ್ಗಜ ಪತೇ ಸ್ತಸ್ಯೈ ನಮೋ ನೃಹರಿ ಭಿಕ್ಷವೇ ॥ ೪ ॥
ಕಾಮಾದಿ ದೋಷ ರಹಿತಂ ಕವಿ ಕಲ್ಪ ಮಹೀರುಹಂ ।
ಮಧ್ವ ಲೀಲಾ ಶುಕಂ ವಂದೇ ಮಾಧವಾಖ್ಯಂ ಗುರುಂ ವರಂ ॥ ೬ ॥
ಜಿತೋ ವಿದ್ಯಾರಣ್ಯ ಪಾದೀ ಜಯ ಸ್ತಂಭಃ ಪ್ರತಿಷ್ಠಿ ತಃ ।
ಪೂರ್ವ ದ್ವಾರ ಪುರೀ ಯೇನ ತ ಮಕ್ಷೋಭ್ಯ ಗುರುಂ ಭಜೇ ॥ ೫ ॥



ಜಯಾ ಜಿತಾತ್ಮಾ ಪ್ರಥಿಕಾಖ್ಯ ಸ್ಥಾಂ ಜಜ್ಞೇ ಶಾಂಖೌತ್ರಿಯು ಆರ್ಯವತ್ಯಾಂ ।
ಜಯು ದ್ವಾದ ದ್ವಜೋ ದೀಜೆ ಭಜೇ ಹಂ ಜಯೆದ್ವಜಂ ॥ ೯ ॥
ಪ್ರವಿವೇಶ ಗುಹಾಂ ಯಂದ್ರತ್ ಸ್ಯ ಪರಂಪ್ರಕ್ಷಿತ ವಂ ರವಃ ।
ವಿಶೇತ್ತ್ವದ್ವಾದ್ ಪೃಸ್ಥಾಂ ಪೆ ೀಪ್ರುಷೋತ್ತಮಯೋಗಿರಾಟ್ ॥ ೧೦
ಯೋ[ಅ]ಜೀವಯ ನ್ಮೃತಂ ವಿಪ್ರಂ ವರಾತ್ ಜಾತಂಚ ತತ್ಸುತಂ ।
ಚಕ್ರೇಬ್ಯಾಸಮುನಿಂ ಯ ಸ್ತಂ ಭಜೇ ಬ್ರಾಹ್ಮಣ್ಯ ಭಾಸ್ಕರಂ ೧೧

೧೫	ಶ್ರೀಧರ ತೀರ್ಥರು	ಆಷಾಢ ಕೃಷ್ಣ ೩	ಹಳೇಸೋದೆ
೧೬	ರಘುಪತಿ ತೀರ್ಥರು	ಶ್ರಾವಣ ಶುಕ್ಲ ೪	ಹಳೇಸೋದೆ
೧೭	ಹಯಗ್ರೀವ ತೀರ್ಥರು	ಜ್ಯೇಷ್ಠ ಶುಕ್ಲ ೧೨	ಕುಂದಾಪುರ

ಸಾಧಿತಾ ಗಮ ಜಾಲಂ ಚಾ ಮೋದಿತಾ ಖಿಲ ಸಜ್ಜನಂ ।
ಮೇಧಾ ತಪೋನಿಧಿಂ ಕಾಂತಂ ಶ್ರೀಧರಾ ಖ್ಯಂ ಗುರುಂಭಜೇ ॥ ೧೫ ॥

ಜಗದ್ವಿನುತ ಸತ್ಕೀರ್ತಿ ರ್ರಘು ಸಿಂಧು ಶುಭೋದ್ಭವಃ ।
ಸುಗುಣಾ ಭರಣಃ ಪಾಯೂತ್ ರಘುಪತ್ಯಾ ಹ್ವಯೋಗುರುಃ ॥ ೧೬ ॥

ಸಂಸ್ಥಾನಮೂಲಾಂ ಸದ್ಯೋ ಗಾ ನ್ಮಸಿಂಹಪ್ರತಿಮೊಂ ತು ಯಃ ।
ವರೆ ರ್ಹ್ಯತಾಂ ಪ್ರಾಪ ಕಳ್ಯಾತ್ ತಂ ಹಯಗ್ರೀವ ಮೂಭಜೇ ॥ ೧೭ ॥

೧೪	ಅಬ್ಬಲಿಗೆ ಪುಷ್ಪಗಳಿಂದ	ಶ್ರೀ ಲಕ್ಷ್ಮೀನಾರಾಯಣ
೧೫	ಅಬ್ಬಲಿಗೆ ಪುಷ್ಪಗಳಿಂದ	ಶ್ರೀ ಲಕ್ಷ್ಮೀನಾರಾಯಣ
೧೬	ಅಬ್ಬಲಿಗೆ ಪುಷ್ಪಗಳಿಂದ	ಶ್ರೀ ಲಕ್ಷ್ಮೀನಾರಾಯಣ

ಲಕ್ಷ್ಮೀಪತಿಂ ನಿರ್ಮಲಚಿತ್ತಸದ್ಮನಿ ಸ್ಥಾಪ್ಯ ಪೂಜಯೇತ್ ।
ರೂಪಶ್ರೀಂ ಹರಿಂ ಲಕ್ಷ್ಮೀಂ ಲೋಕಮಾತರಮೀಶ್ವರೀಂ ॥ ೧೪ ॥
ಶ್ರೀಮಾಧವಂ ಮಹಾಲಕ್ಷ್ಮೀಂ ಭೂಮಿಂ ಸಾಕ್ಷಾತ್ಸ್ವಯಂ ನಿಧಿಂ ।
ಶ್ರೀರಾಮಂ ಪದ್ಮಹಸ್ತಾಯೀಂ ಲಕ್ಷ್ಮೀನಾರಾಯಣೌ ಯಜೇತ್ಸದಾ ॥ ೧೫ ॥
ಸರ್ವಂ ಸಕಲ ರಿಜಂ ಧೀರ ಸ್ಥೂಲ ಸಂಪದಪಿ ಯಂ ।
ಸಂಪೀಡಂ ರಕ್ಷಸಾಧ್ಯಾ ಯಾಂ ಸಂಪಾದಯತಿ ಸಜ್ಜನಾನಂ ॥ ೧೬ ॥

೨೧	ರಾಮಚಂದ್ರ ತೀರ್ಥರು	ಆಷಾಢ ಕೃಷ್ಣ ೧೨	ಕುಂದಾಪುರ
೨೨	ಲಕ್ಷ್ಮೀಮನೋಹರ ತೀರ್ಥರು	ಫಾತೀರ್ಣ ಶುಕ್ಲ ೧೪	ಅಬ್ಬೂರು
೨೪	ಲಕ್ಷ್ಮೀವರ ತೀರ್ಥರು	ಮಾಘ ಕೃಷ್ಣ ೧೨	ಅಬೂರು

ಶ್ರೀಮಧ್ವ ಸಮಯ ವ್ಯವಸ್ಥಾ ಸಂಪೋದಾ ಮೃತ ವಾರ್ಧಿಗಃ ।
ಶಾಮಿತಾರ್ಥ ಪ್ರದೋ ಭೂಯೊ ದ್ರಾಚುಚಂದ್ರ ಯತೀಶ್ವರಃ ॥ ೨೧ ॥

ಧನೋತು ಹೃದಯಂ ಧ್ವಾಂತಂ ತನೋತು ಸುಮತಿ ಶ್ರಿಯಂ ।
ಮನೋಗತಂ ವಿಶೇ ಲ್ಲಕ್ಷ್ಮೀ ಮನೋಹರ ದಿವಾಕರಃ ॥ ೨೨ ॥

ಪರೈ ರ್ದುಷ್ಕರ ವೈರಾಜ ಸಂಸ್ಥಾನಂ ಯೋಧ್ಯ ಸಾಧಯತ್ ।
ಪುನ ಶ್ಚಕ್ರೇ ಮನೋ ಲಕ್ಷ್ಮೀಧರ ತೀರ್ಥ ಕ್ಷೆಮಾಕರ ॥ ೨೪ ॥

೧	೨	೩	೪
ಲಘ್ವಕ್ಷರ ಪೂರ್ವ	ಲಘ್ವಕ್ಷರ ಪರ	ಸಂಖ್ಯೆಗಳು	೧ ಉದಾಹರಣೆ
ಲಘ್ವಕ್ಷರ ಪೂರ್ವ	ಗುರ್ವಕ್ಷರ ಪರ	ನವಚಿಂತ್ಯಾಭೂ	೨ ಉದಾಹರಣೆ
ಲಘ್ವಕ್ಷರ ಪೂರ್ವ	ಲಘ್ವಕ್ಷರ ಪರ	ಖಗೇಂದ್ರಾಗ್ನಿ	೩ ಉದಾಹರಣೆ

೧೪

ಲಘ್ವಕ್ಷರ ಪೂರ್ವದಲ್ಲಿ ಲಘ್ವಕ್ಷರವು ಪರವಾಗಿ ಸುಮಂತನನ ।
ರಕ್ಷ ರಕ್ಷ ಪ್ರಭನ್ನಂ ನೂಂ ಲಘ್ವಕ್ಷರವಿದ್ದು ಸುಂಗಳ್ ॥ ೧೪ ॥

ಘೂಂತೆ ಪೂಣ ತ್ರಯಂ ಮುಂಲಂ ಭೀತಿಯಿನಾಕಾನ ನಾಕಾಂ ।
ಬುಧಜನಂಗಳಾ ನುಡಿಂ ಲಘ್ವಕ್ಷರ ತೀರ್ಪ ಬುಧಂ ಭಜಿಕ್ಕೇ ॥ ೧೫ ॥

ಸೊಂಕಿಕ್ಕಾಸ-ಲ್ಪಿಕ ನಿಷ್ಠೆನಂ ದಾಕ್ಷಿಂ ಸಸಜ್ಜನಗಂ ।
ದೀಕ್ಷಾಂ ನೆಲ್ಲಿಂ ನೆಲ್ಲಿಂ ದೀಯಂ ಲಘ್ವಕ್ಷರಂ ಪರವಿರೆ ಪದ್ಯಂ ॥ ೧೬ ॥

೧೪/MHD

೨೬	ಲಕ್ಷ್ಮೀಕಾಂತ ತೀರ್ಥರು	ಶ್ರಾವಣ ಶುಕ್ಲ ೧೨	ಕೂಡ್ಲೀ	1837	
೨೪	ಲಕ್ಷ್ಮೀನಿವಾಸ ತೀರ್ಥರು	ಆಷಾಢ ಶುಕ್ಲ ೩	ಹುಲೇಕಲ್		
೨೯	ಲಕ್ಷ್ಮೀವರ ತೀರ್ಥರು	ಜ್ಯೇಷ್ಠ ಕೃ ೯	ತೀರ್ಥಹಳ್ಳಿ	1869AD	

ದಾಂತ ಸ್ಸರ್ವೇಂದ್ರಿಯಜಯಂ ಕಾಂತೋ ಭಕ್ತಿಂ ಹರೌಗುರೌ ।
ಸದಾಗಮೈಕ ವಿಜ್ಞಾನಂ ಲಕ್ಷ್ಮೀಕಾಂತ ಕವಿ ರ್ದಿಶೇತ್ ॥ ೨೭ ॥
ಬ್ರಹ್ಮಣ್ಯೋ ಭಾಸ್ಕರ ವ್ಯಾಸ ರಾಜಯೋ ರ್ವಂಶ ಸಂಭವಂ ।
ದುಶ್ಚಾಸ್ತ್ರದೂಷಕಂ ಲಕ್ಷ್ಮೀನಿವಾಸ ಕನಿ ಮಾಶ್ರಯೇ ॥ ೨೮ ॥
ಭಿನ್ನೋಸದಾ ಗುರು ಕವೀ ಸುರಲೋಕೇ ಶ್ರುತೌಭುವಿ ।
ಗುರುಃ ಕವಿ ಸ್ಸ್ವಯಂ ಲಕ್ಷ್ಮೀವರ ಸ್ಸ್ವೀಕೋ ಬಭೂವ ಹ ॥ ೨೯ ॥

Encl. D

REGISTERd no. M. 1259.

ಶ್ರೀ

ಶ್ರೀ ಪು ರ್

ಮಧ್ವಸಿದ್ಧಾಂತ ಪ್ರಕಾಶಿನೀ

ಮಾಸಪತ್ರಿಕೆ.

ಸಂಪುಟ ೭.] ಜೂರ್-ಜುಲೈ-೧೯೨೩. [ಸಂಚಿಕೆ ೬-೭.

ರುಧಿರೋದ್ಗಾರಿ—ಅಧಿಕಜ್ಯೇಷ್ಟ, ಜ್ಯೇಷ್ಟ.

ಮೈಸೂರು

ಶ್ರೀ ಜಯಾಲಯ ಯಂತ್ರದಲ್ಲಿ ಎಡಿಟರಾದ

ಮು|| ರಾ|| ಎಚ್. ನರಸಿಂಗರಾಯರಿಗೋಸ್ಕರ

ಮುದ್ರಿಸಲ್ಪಟ್ಟಿತು.

ವ್ಯಾಸರಾಜ ಶ್ರೀಪಾದಂಗಳವರ ಕನಕಸಿಂಹ ವಿಷಯ ಗಾಯನಕ್ಕೆ ಸಂಬಂಧ

ವಿಷಯ ಸೂಚಿಕೆ.

ವಿಷಯ.	ಪುಟ.	ಲೇಖಕರು.
ಗ್ರಾಹಕರಲ್ಲಿ ವಿಜ್ಞಾಪನೆ	೧—೨	ಸಂಪಾದಕರು.
ಗ್ರಂಥವಿಮರ್ಶೆ.	...	....
ಶ್ರೀ ವ್ಯಾಸರಾಜರವರ ಚರಿತ್ರೆ	೧—೬	ಕೆ. ರಾಮಚಂದ್ರಾಚಾರ್ಯ.
ಪೃದುಚಕ್ರವರ್ತಿ	೧೬—೩೦	,,
ಮಾಂಡೂಕೋಪನಿಷತ್	೯—೧೬	ಆ ಶ್ರೀನಿವಾಸಾಚಾರ್ಯರು.
ಗೀತಾರ್ಥನಿರ್ಣಯ	೨೫-೨೬ಎ	ಕೆ. ಆನಂದತೀರ್ಥಾಚಾರ್ಯ.
ನೃಗಚಕ್ರವರ್ತಿ	೧—೬	,,
ಈ ಪ್ರಕರಣದ ತಕ್ಕ ಸಂಚಿಕೆಯ ೧-೬ ಧ. ರಾ. ರಾಘವೇಂದ್ರಾಚಾರ್ಯರು.		

ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಮುದ್ರಿತ ಪುಸ್ತಕಗಳು.

— ಬಾಲಬೋಧಾಕ್ಷರದಲ್ಲಿ —

೧.	ಶ್ರೀಜಯತೀರ್ಥವಿಜಯ	....	೦—೬—೦
೨.	ಶ್ರೀವ್ಯಾಸಗದ್ಯ	....	೦—೧—೦
೩.	ಪುರುಷಸೂಕ್ತ, ವ್ಯಾಖ್ಯಾನದ್ವಯ ಸಹಿತ		೦—೬—೦
೪.	ತಾರಸ್ವರೂಪಪ್ರಕಾಶ	....	೦—೧೨—೦
೫.	ರಾಮಸಂದೇಶ ಸವ್ಯಾಖ್ಯ	....	೦—೨—೦
೬.	ಶ್ರೀ ನ್ಯಾಯವಿವರಣ-ಶ್ರೀಮದಾನಂದ ತೀರ್ಥ ಭಗವತ್ಪಾದರಿಂದ ಕೃತವಾದುದು.		೧—೮—೦
೭.	ಶೈವಲಿನೀ-ನಾವೆಲ್ ಅಪ್ಪರ್ ಸೆಕೆಂಡರಿ ಟಿಕ್ಸ್‌ಟ್		೦—೧೦—೦

— ತೆಲುಗಕ್ಷರದಲ್ಲಿ —

೧.	ಶ್ರೀ ಹರಿವಾಯುಸ್ತುತಿ ಕನ್ನಡವಾಖ್ಯಾನ ಸಹಿತ.		೦—೧೪—೦
೨.	ಸಿದ್ಧಾಂತಮುಕ್ತಾವಳಿ, ಪ್ರಮೇಯಸಂಗ್ರಹ-ತರ್ಕತಾಂಡವ ಪದಾವಳೀ, ೧-ಪಿನೇಯ ಸಂಜಿಕೆಗಳು.		೦—೮—೦
೩.	ಮಣಿಮಂಜರೀ-ಸಂಸ್ಕೃತ ಕನ್ನಡವ್ಯಾಖ್ಯಾನ ಸಹಿತ.		೧—೨—೦
೪.	ಪ್ರಯೋಗಸಾರಿಜಾತಷೋಡಶಕರ್ಮ ಪ್ರಮಾಣ ಸಹಿತ.		೨—೦—೦

— ಕನ್ನಡ ಲಿಪಿ ಮತ್ತು ಭಾಷೆಯಲ್ಲಿ —

೧	ವಿಷ್ಣು ಸರ್ವೋತ್ತಮತ್ವ ಸಮರ್ಥನ.	....	೦—೪—೦
೨.	ಈಶಾವಾಸ್ಯೋಪನಿಷತ್ಸಾರ	....	೦—೮—೦
೩.	ಷಟ್‌ಪ್ರಶ್ನೋಪನಿಷತ್ಸಾರ	....	೦—೬—೦
೪.	ಬದರಿಕಾಶ್ರಮ ಪ್ರವೇಶ	....	೦—೧—೬
೫.	ಆಶ್ವಲಾಯನ ಸಂಧ್ಯಾವಂದನ	....	೦—೧೦
೬.	ಆಪಸ್ತಂಭ ,,	....	೦—೧—೦

ನಮ್ಮಲ್ಲಿ ಎಲ್ಲಾ ವ್ರತಪೂಜಾಪುಸ್ತಕಗಳು ಸಿಕ್ಕುತ್ತವೆ.

ಪ್ರೊಪ್ರೈಟರ್, ಜಯಾಲಯ ಪ್ರೆಸ್, ಮೈಸೂರು.

॥ಶ್ರೀರಾಮ ಪ್ರಸೀದ॥

ಶ್ರೀಮ್ಮಧ್ವಸಿದ್ಧಾಂತಪ್ರಕಾಶಿನೀ

ಎಂಬ

ಮಾಸಪತ್ರಿಕೆ

ಶ್ರೀಮನ್ಮಧ್ವಮತೇ ಹರಿಃ ಪರತರಸ್ಸತ್ಯಂ ಜಗತ್ತತ್ತ್ವಂ ತೋ
ಭೇದೋ ಜೀವಗಣಾಃ ಹರೇರನುಚರಾಃ ನೀಚೋಚ್ಚ ಭಾವಂಗತಾಃ।
ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಮ್
ಹ್ಯಕ್ಷತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ॥

ಸಂಪುಟ ೭.] ಜೂಲೈ—ಜೂಲೈ—೧೯೨೩. [ಸಂಚಿಕೆ ೬-೭.
ರುಧಿರೋದ್ಗಾರಿ—ಅಧಿಕಜ್ಯೇಷ್ಠ, ಜ್ಯೇಷ್ಠ.

ಗ್ರಾಹಕರಲ್ಲಿ ವಿಜ್ಞಾಪನೆ.

ಈ ಸಂಪುಟದ ಕೆಲವು ಸಂಚಿಕೆಗಳು ಪ್ರಾರಂಭವಾದಮೇಲೆ ಈ ಪತ್ರಿಕೆಯ ಮುಖ್ಯಕಾರ್ಯದರ್ಶಿಗಳಾದ ಮು॥ ರಾ॥ ಕೆ. ವ್ಯಾಸಾಚಾರ್ಯರಿಗೂ, ಮುದ್ರಣಕಾರ್ಯ ಮತ್ತು ಲೇಖನಗಳ ಶೋಧನಾದಿ ಮುಖ್ಯಭಾರವನ್ನು ವಹಿಸಿರುವ ಶ್ರೀಮ॥ ಧರ್ಮಾಧಿಕಾರಿ ರಾಘವೇಂದ್ರಾಚಾರ್ಯರಿಗೂ ಕೆಲವುಕಾಲ ದೇಹಾಲಸ್ಯವು ತ್ವರೆಯಾಗಿ ಕಾರ್ಯನಡೆಯುವುದಕ್ಕೆ ಪ್ರತಿಬಂಧಕವಾಯಿತು. ಕಾಲಕ್ಕೆ ಸರಿಯಾಗಿ ಈ ಒಂದೆರಡು ಸಂಚಿಕೆಗಳನ್ನು ಕೂಡ ಹೊರಡಿಸಲಾಗಲಿಲ್ಲ. ಅಸಮಾಧಾನವನ್ನು ತಾವುಗಳು ಪಡಲಾರರಿ ಎಂದು ನಂಬುತ್ತೇವೆ. ಮೇಲೆ ಹೇಳಿದ ಉಭಯರೂ ಈಗ ಆರೋಗ್ಯವನ್ನು ಹೊಂದಿರುತ್ತಾರೆಂಬ ವಿಷಯಕ್ಕಾಗಿ ನಾವೆಲ್ಲರೂ ಸಂತೋಷಪಡಬೇಕಾಗಿದೆ. ಮುಂದಿನ ಕಾರ್ಯಗಳು ಕ್ರಮವಾಗಿ ನಡೆಯುವುವು.

ವ್ಯಾಸರಾಯ ಗ್ರಂಥಕರ್ತೃ ಕನಕದಾಸ ವಿಜಯದಾಸರ ಹೊಸ

ಗ್ರಂಥವಿಮರ್ಶೆ.

(1) ಆರೋಗ್ಯಚಂದ್ರಿಕೆ—ಈ ಹೆಸರಿನಿಂದ ಮದರಾಸಿನಲ್ಲಿ ಮಹಾಪ್ರಸಿದ್ಧರಾದ ಡಾಕ್ಟರ್ ಎಂ|| ಯು. ರಾಮರಾವ್ ಎಂ. ಎಲ್. ಸಿ. ಯವರು ಪ್ರಚುರಿಸಲಾರಂಭಿಸಿರುವ ಕನ್ನಡಭಾಷೆಯ ಮಾಸಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಕಾರ್ಯಸ್ಥಾನಕ್ಕೆ ಸೇರಿ ನಮ್ಮಗಳಿಗೆ ಪರಮಾನಂದವನ್ನುಂಟುಮಾಡಿದೆ. ಇದರಲ್ಲಿ ಅನೇಕವಾಗಿ ಮನುಷ್ಯವರ್ಗಕ್ಕೆ ಆರೋಗ್ಯಕ್ಕೆ ಅತ್ಯಾವಶ್ಯಕವಾದ ವಿಷಯಗಳು ಬರಿಯಲ್ಪಟ್ಟಿವೆ. ಬರವಣಿಗೆಯು ಸುಲಭವಾಗಿ ತಿಳಿಯತಕ್ಕುದಾಗಿಯೂ ಸುಂದರವಾಗಿಯೂ ಇದೆ. ಆದುದರಿಂದ ಈ ಮಾಸಪತ್ರಿಕೆಯು ಪ್ರತಿಯೊಂದು ಕುಟುಂಬದಲ್ಲಿಯೂ ಇರುವುದಾವಶ್ಯಕವು. ಉಪೇಕ್ಷಿಸದೆ ಇದರ ಪ್ರಯೋಜನವನ್ನು ಒಲ್ಲವರೆಲ್ಲರೂ ಅನೇಕ ವಿಧದಲ್ಲಿ ಈ ಪತ್ರಿಕೆಗೆ ಸಾಧ್ಯವಾದ ಪೋಷಣವನ್ನು ಮಾಡುವುದರಲ್ಲಿ ಹಿಂದೆಗೆಯಲಾರರೆಂದು ನಾವು ನಂಬುತ್ತೇವೆ.

(2) ಹೆಲ್ತ್—(Health) ಈ ಹೆಸರಿನಿಂದ ಮೇಲೆ ಉದಹರಿಸಿದ ಆರೋಗ್ಯಚಂದ್ರಿಕೆಯಕಿಂತಲೂ ಪೂರ್ವದಿಂದಲೂ ಪ್ರಚುರವಾಗುತ್ತಿರುವ ಇಂಗ್ಲೀಷು ಮಾಸಪತ್ರಿಕೆಯು ಇದೇರೀತಿಯಾಗಿ ಇಂಗ್ಲೀಷು ಭಾಷೆಯನ್ನು ತಿಳಿದ ಸರ್ವರಿಗೂ ಅವಶ್ಯವಾಗಿ ಗ್ರಾಹ್ಯವಾಗಿದೆಯಾದಕಾರಣ ಆಯಾ ಭಾಷೆಗಳಲ್ಲಿ ಪ್ರೀತಿಯುಳ್ಳ ಜನರು ಈ ಎರಡು ಪತ್ರಿಕೆಗಳನ್ನು ಅಥವಾ ಒಂದನ್ನಾದರೂ ತಮ್ಮ ಕುಟುಂಬದ ಆರೋಗ್ಯಕ್ಕಾಗಿ ಸಂಗ್ರಹಿಸುವುದಾವಶ್ಯಕವೆಂದು ನಾವು ಅಭಿಪ್ರಾಯಪಡುತ್ತೇವೆ.

(3) ಸಾರ್ಥ ವ್ರತಕಥಾ ಪುಸ್ತಕಗಳು—ಮಧ್ವಮತಸ್ಥರ ಆಚರಣೆಯಲ್ಲಿರುವ (೧) ಅನಂತವ್ರತ, (೨) ಕೃಷ್ಣಾಷ್ಟಮಿವ್ರತ, (೩) ವರಲಕ್ಷ್ಮೀವ್ರತ, (೪) ಸ್ವರ್ಣಗೌರೀವ್ರತ, (೫) ವಿನಾಯಕವ್ರತ ಇವುಗಳ ಪೂಜಾಕಥಾ ಪುಸ್ತಕಗಳನ್ನು ಅನೇಕ ಮಾತೃಕೆಗಳ ಸಹಾಯದಿಂದ ಜಿನ್ನಾಗಿ ಶೋಧಿಸಿ ಸಂಪ್ರದಾಯಕ್ಕೆ ತಕ್ಕಹಾಗೆ ಶ್ರೀಮ|| ಧರ್ಮಾಧಿಕಾರಿ ರಾಘವೇಂದ್ರಾಚಾರ್ಯರವರು ಪ್ರಚುರಿಸಿದಾರೆ. ಅಲ್ಲದೆ ಪ್ರತಿಯೊಂದು ಪುಸ್ತಕದ ಕೊನೆಯಲ್ಲಿಯೂ ಪುರಾಣೋಕ್ತವಾದ ಆಯಾ ಕಥೆಗೆ ಕನ್ನಡಭಾಷೆಯಲ್ಲಿ ಅರ್ಥವನ್ನೂ ಪ್ರಚುರಪಡಿಸಿರುತ್ತಾರೆ. ಈ ಪುಸ್ತಕಗಳನ್ನು ಜಯಾಲಯಪ್ರೆಸ್ಸಿನಲ್ಲಿ ಪಡೆಯಬಹುದು.

ಶ್ರೀ ವ್ಯಾಸರಾಜರವರ ಚರಿತ್ರೆ.

ಯಾವಾಗಲೂ ಪರೋಪಕಾರಕ್ಕಾಗಿಯೇ ಪ್ರಯತ್ನಪಡುವ ನರಸ ಸುಕು ಮಾರವಾಡ ಮನಸ್ಸುಳ್ಳ ಮಹನೀಯರು ಈ ಪ್ರಪಂಚದಲ್ಲೇ ಅತಿ ವಿರಳರು. ಅದರಲ್ಲಿ ವಿಶೇಷವಾಗಿ ಯಾರು ವಾಙ್ಮಯವೆಂಬ ದೀಪದಿಂದ ಪಾಶ್ಚಾತ್ಯ ಜನರ ಮನೋಂಧಕಾರವನ್ನು ಹೋಗಲೊಸುವರೊ ಅಂತಹವರು ಮತ್ತೂ ವಿರಳರು. ಅದರಲ್ಲಿಯೂ ದುರ್ಲಭತರವಾದ ನರ್ವ ಭಾಷಾ ಮಾತೃಸ್ಥಾನವಾದ ಅಮೃತಮಯವಾದ ಗೀರ್ವಾಣವಾಣಿಯಲ್ಲಿ ಅಸಾಧಾರಣ ಪ್ರೀತಿಯಿಂದ ಗ್ರಂಥರಚನೆಮಾಡಿ ಜನೋಪಕಾರ ಮಾಡುವವರು ಇನ್ನೂ ದುರ್ಲಭ. ಅದರಲ್ಲಿಯೂ ವೇದಾಂತಮಾರ್ಗದಲ್ಲಿ ಮೋಕ್ಷಸಾಧನೆ ಬ್ರಹ್ಮಜ್ಞಾನವನ್ನು ಪ್ರಾವತಾಣಿಕ ರೀತಿಯಿಂದ ನಿರ್ಣಯಿಸುವ ಗ್ರಂಥಗಳನ್ನು ರಚಿಸಿದ ಮಹಾನುಭಾವರು ಎಷ್ಟು ದುರ್ಲಭರೋ ಹೇಳಲು ಸಾಧ್ಯವಲ್ಲ. ಇಂತಹ ದುಷ್ಕರವಾದ ಉಪಕಾರವನ್ನು ಮಾಡಿದ ಮಹನೀಯರಲ್ಲ ವ್ಯಾಸರಾಜರವರು ಮೇಲ್ತರದ ಗುಂಪಿಗೆ ಸೇರಿದವರು.

ವ್ಯಾಸರಾಜರವರು ಕರ್ನಾಟದಲ್ಲೇ ಜನ್ಮಗ್ರಹಣಮಾಡಿದೆ ಕನ್ನಡಿಗರು. ಇವರು ಮೈಸೂರು ಡಿಸ್ಟ್ರಿಕ್ಟು ತಿರುಮಕೂಡಲು ನರಸಿಂಹಪುರದ ತಾಲ್ಲೂಕು ಬನ್ನೂರಲ್ಲಿ ಹುಟ್ಟಿದವರು. ಇವರ ತಂದೆಗಳ ಹೆಸರು ರಾಮಾಚಾರ್ಯರು. ಇವರು ಪ್ರೈಣವ ಬ್ರಾಹ್ಮಣರು. ಇವರ ಸ್ಥಳವು ಬನ್ನೂರು. ರಾಮಾಚಾರ್ಯರವರಿಗೆ ಪತಿವ್ರತಾ ಶಿರೋಮಣಿಯಾದ ಒಬ್ಬ ಹಂಡತಿ ಇದ್ದಳು. ಈಕೆಯು ಬಹು ಗುಣಾಢ್ಯಳು. ಇವರಿಗೆ ಬಹುದಿನಗಳವರಿಗೂ ಮಕ್ಕಳಿರಲಿಲ್ಲ. ಈ ದಂಪತಿಗಳು ಎಲ್ಲರಿಗೂ ಹಿತವಾದುದನ್ನು ಮಾಡುತ್ತ ಸತ್ಕಾಲಕ್ಷೇಪದಿಂದ ಇದ್ದರು. ಇವರಿಗೆ ತೀರ್ಥಯಾತ್ರೆ ಮಾಡಬೇಕೆಂಬ ಇಚ್ಛೆಯುಂಟಾಯಿತು. ಆ ದಂಪತಿಗಳು ಪಾದಚಾರಿಗಳಾಗಿ ಪ್ರಯಾಣಮಾಡುತ್ತಾ ಹೊರಟು ಮಾರ್ಗವಶದಿಂದ ಅಬ್ಬೂರಿಗೆ ಬಂದು ಸೇರಿದರು. ಒಂದು ದಿನ ಅಲ್ಲಿದ್ದು ಮಾರ್ಗಾಯಾಸವನ್ನು ಪರಿಹಾರಮಾಡಿಕೊಂಡು ಮುಂದಕ್ಕೆ ಪ್ರಯಾಣಮಾಡಬೇಕೆಂದು ಅವರ ಆಶೆ. ಅದರಂತೆಯೆ ಅಲ್ಲಿ ನಿಂತರು. ಆಗ ಅಲ್ಲಿ ಈ ರಾಮಾಚಾರ್ಯರೆಂಬ ಬ್ರಾಹ್ಮಣರು

ವ್ಯಾಸರಾಜ ಮಠ ಗಂಗಾವತಿ ಕ್ಷೇತ್ರದ ವಿಜಯನಗರ ಜಿಲ್ಲೆ

Hayagriva Vijaya-61

ಶ್ರೀಮನ್ಮಧ್ವಸಿದ್ಧಾಂತಪ್ರಕಾಶಿನೀ

ಏನ್ನೋ ಒಂದು ರೋಗವಿಶೇಷದಿಂದ ಮೃತರಾದರು. ಪಾಪ ! ಅವರ ಹೆಂಡತಿಯು ಅಸಹಾಯೆಯಾದಳು. ಆಕೆಯು ತನ್ನ ಪತಿಯೊಡನೆ ಸಹಗಮನ ಮಾಡಲು ಸಿದ್ಧಳಾದಳು. ಕೆಲವರು ಕೂಡದೆಂದು ತಡೆದರು. ಆಕೆಯು ಅಲ್ಲೇ ವಾಸವಾಗಿದ್ದ ಶ್ರೀಮದ್ಬ್ರಹ್ಮಣ್ಯತೀರ್ಥರವರಿಂದ ಹೇಗೆ ಅಪ್ಪಣೆಯಾದರೆ ಹಾಗೆ ಮಾಡಬೇಕೆಂದು ಅವರಿದ್ದಲ್ಲಿಗೆ ಬಂದಳು. ಆ ಸಾಧ್ವಿಯು ಶ್ರೀ ಸ್ವಾಮಿಗಳವರಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಲಾಗಿ ಅವರು ಆಕೆಯನ್ನು ದೀರ್ಘಸುಮಂಗಲಿಯಾಗಿರೆಂದು ಹರಿಸಿದರು. ಇಬ್ಬರು ಗಂಡುಮಕ್ಕಳಾಗುವುರೆಂದೂ ಅವರಲ್ಲಿ ಮೊದಲನೆಯ ಹುಡುಗನನ್ನು ತಮಗೆ ಕೊಡಬೇಕೆಂದೂ ಹೇಳಿದರು. ಆಕೆಯು ತನಗೆ ಸಂಭವಿಸಿದ್ದ ವಿಪತ್ತನ್ನು ಯತಿಗಳಲ್ಲಿ ಹೇಳಿಕೊಂಡಳು. ಅದಕ್ಕೆ ಬ್ರಹ್ಮಣ್ಯತೀರ್ಥರವರು ನಾವು ಹೇಳಿದ ಮಾತು ಸುಳ್ಳಾಗಲಾರದು. ನೀನು ಯೋಚಿಸಬೇಡ. ನಿನ್ನ ಪತಿಯಿರುವ ಸ್ಥಳಕ್ಕೆ ಹೋಗೆಂದು ಆಜ್ಞೆ ಮಾಡಿದರು. ಆಕೆಯು ತಾನಿಳಿದುಕೊಂಡಿದ್ದ ಸ್ಥಳಕ್ಕೆ ಹೋಗಿ ಪತಿಯು ಜೀವಿತನಾಗಿರುವುದನ್ನು ನೋಡಿ ಆಶ್ಚರ್ಯಪಟ್ಟಳು. ತನ್ನ ಪತಿಯೊಂದಿಗೆ ಯತಿವರರ ಶುಭಶಂಸನವನ್ನು ಹೇಳಿದಳು. ಅವರ ಆನಂದಕ್ಕೆ ಆಗ ಪಾರವೇ ಇರಲಿಲ್ಲ.

ಅನಂತರ ಆ ವಿಪ್ರವರನು ಯೋಚಿಸಿದನು. " ಈ ವೃದ್ಧಾಪ್ಯ ದೆಶೆಯಲ್ಲಿ ನಮಗೆ ಮಕ್ಕಳಾಗುವುದು ಆಶ್ಚರ್ಯಕರವಾದುದು. ಆದರೂ ತಪೋನಿಧಿಗಳ ಮಾತು ಎಂದಿಗೂ ಸುಳ್ಳಾಗದು; ಶ್ರೀಹರಿಯ ಸಂಕಲ್ಪವಿದ್ದಂತೆ ಆಗಲಿ " ಎಂದು ಆತನ್ನು ಪುನಃ ತನ್ನ ಪತ್ನಿಯೊಡನೆ ತನ್ನ ಗ್ರಾಮವನ್ನು ಸೇರಿದನು. ಅತನ ಪತ್ನಿಯು ತಪಸ್ವಿಗಳ ಮಾತಿನಂತೆ ಗರ್ಭಣಿಯಾದಳು. ಪ್ರಸವಿಸುವ ಕಾಲವೂ ಸಮೀಪಿಸಿತು. ಬ್ರಹ್ಮಣ್ಯತೀರ್ಥರವರು ಇದನ್ನು ತಮ್ಮ ಜ್ಞಾನದೃಷ್ಟಿಯಿಂದ ತಿಳಿದು ತಮ್ಮ ಶಿಷ್ಯರಿಗೆ ಆಜ್ಞೆಮಾಡಿ ಬಲಮಂತ್ರಾಕ್ಷತೆ ಚಿನ್ನದ ಸಾತ್ಕೆಯೊಡನೆ ಆ ವಹ್ನಿಪುರಕ್ಕೆ ಕಳುಹಿಸಿಕೊಟ್ಟರು. ಶಿಷ್ಯರು ಶ್ರೀ ಸ್ವಾಮಿಗಳವರ ಆಜ್ಞೆಯನ್ನು ಶ್ರೀರಾಮಾಚಾರ್ಯರಿಗೆ ತಿಳಿಸಿದರು. ಆತನು ಬಂದಿದ್ದ ಆ ಅತಿಥಿಗಳನ್ನು ಭಕ್ತಿಯಿಂದ ನಮಸ್ಕರಿಸಿ ಶ್ರೀಗಳವರ ಆಜ್ಞೆಯನ್ನು ಶಿರಸಾ ಧರಿಸಿರುವೆನು ಎಂದು ಹೇಳಿದನು. ಅದೇ ಮೇರೆಗೆ ಬಂಗಾರದ ಹರಿವಾಣದಲ್ಲಿ ಆಗ ಉದ್ಭವಿಸಿದ ದಿವ್ಯ ತೇಜಃ ಪುಂಜವಾದ ಮುಗುವನ್ನು ತಂದು ಅವರ ಕೈಗೊಪ್ಪಿಸಿದನು. ಸ್ವಾಮಿಗಳವರ ಆಜ್ಞೆಯ ಮೇರೆಗೆ ಶಿಶುವಿಗೆ ಭೂಸ್ಪರ್ಶವಾಗದಂತೆ ಈ ತೊಟ್ಟಲಲ್ಲೆ ಇರಿಸಿರುವೆವು ಎಂಬ ವಿಷಯವನ್ನೂ ಅವರೊಡನೆ ಹೇಳಿದನು. ಆ

ಶಿಷ್ಯರು ಅಲ್ಲಿ ಆಲಸ್ಯ ಮಾಡದೆ ಅಬ್ಬೂರಿಗೆ ಬಂದು ಸೇರಿದರು. ಮಠಕ್ಕೆ ಹೋಗಿ ಯತಿಗಳ ~~ಸನ್ನಿಧಾನದಲ್ಲಿ~~ ತೊಟ್ಟಿಲ ಸಹಿತವಾಗಿ ಮಗುವನ್ನು ಇಟ್ಟು ನಮಸ್ಕರಿಸಿ ನಿಂತುಕೊಂಡರು.

~~ಶ್ರೀ~~ ಬ್ರಹ್ಮಣ್ಯತೀರ್ಥರು ಆ ಕೂಸನ್ನು ತಮ್ಮ ಕೈಯಿಂದಲೇ ಕಣ್ಣ ನೀರಿಯಲ್ಲಿ ತೊಳೆದು ಪುರುಷೊತ್ತಮ ಗುಹೆಯಲ್ಲಿ ತಂದಿಟ್ಟು ಕಾಪಾಡುತ್ತಾ ತಮ್ಮ ನಿತ್ಯಾಹ್ನಿಕಗಳನ್ನು ಮಾಡಿಕೊಳ್ಳುತ್ತಾ ಇದ್ದರು. ಬ್ರಹ್ಮಣ್ಯತೀರ್ಥರು ನಿತ್ಯವೂ ಆ ಕೂಸಿಗೆ ದೇವರಿಗೆಅಭಿಷೇಕ ಮಾಡಿದ ಹಾಲಿನಿಂದಲೇ ಪೋಷಿಸುತ್ತಿದ್ದರೇ ಹೊರತು ಮಾತೃಸ್ತನ್ಯಪಾನಕ್ಕೆ ಅವಕಾಶಕೊಡಲಿಲ್ಲ. ಅಲ್ಲಿದ್ದ ಒಸಗೆಗಳು ಬಹು ವಿಶ್ವಾಸದಿಂದ ಆ ಮಗುವನ್ನು ನೋಡಿಕೊಳ್ಳುತ್ತಿದ್ದರು.

ಬ್ರಹ್ಮಣ್ಯತೀರ್ಥರು ಎಲ್ಲಿಯಾದರೂ ಸಂಚಾರಕ್ಕೆ ಹೋಗಿರುವ ಕಾಲದಲ್ಲಿ ಆ ಗುಹೆಯ ಖಂಡಿಯಿಂದ ಒಂದು ಹೆಸುವು ನಿತ್ಯವೂ ಹಾಲಿನಿಂದ ಮಗುವನ್ನು ತೃಪ್ತಿಪಡಿಸಿ ಹೋಗುತ್ತಿತ್ತು. ಗರುಡನು ಈ ಮಗುವಿಗೆ ಜೇನುತುಪ್ಪವನ್ನು ತಂದು ಕೊಡುತ್ತಿದ್ದನು. ಆದಿಶೇಷನು ತನ್ನ ಹೆಡೆಯಿಂದ ಕೂಸಿನ ಮೇಲೆ ಬೀಳುತ್ತಿದ್ದ ಬಿಸಿಲನ್ನು ತಡೆಯುತ್ತಿದ್ದನು. ಈ ವಿಷಯಗಳನ್ನು ತತ್ತತ್ಕಾಲಗಳಲ್ಲಿ ನಾವು ಕಂಡೆವೆಂದು ಹೇಳುತ್ತಿದ ಕೆಲವು ಜ್ಞಾನಿಜನರ ಬಾಯಿನುಡಿಯು ಇತಿಹಾಸರೂಪವಾಗಿ ಹರಡಿಕೊಂಡಿದೆ. ಹೀಗೆ ಆ ಮಗುವಿಗೆ ಐದುವರ್ಷಗಳು ತುಂಬಿದವು. ಸುತ್ತಲಿದ್ದ ಜನರು ಪ್ರಕಾಶಮಾನವಾದ ಆ ಕೂಸಿನ ಆಟ್ಟ ತೊದಲು ನುಡಿಗಳನ್ನು ಕೇಳುವದು ಇವುಗಳಿಂದ ಆನಂದಿತರಾಗಿದ್ದರು. ಯತಿಗಳು ಬ್ರಾಹ್ಮಣರ ಕಡೆಯಿಂದ ಆ ಬಾಲಕನಿಗೆ ಐದನೆಯ ವರ್ಷದಲ್ಲಿ ~~ಚೌಲಾದಿ~~ ~~ಕರ್ಮಗಳನ್ನು ಆರನೆಯ ವರ್ಷದಲ್ಲಿ ಉಪನಯನವನ್ನೂ ಮಾಡಿಸಿದರು~~ ಏಳನೆ ವರ್ಷದಲ್ಲಿ ಯತ್ಯಾಶ್ರಮವನ್ನು ತಾವೇ ಕೊಟ್ಟು ಪ್ರಣವಾದಿಗಳನ್ನು ಉಪದೇಶ ಮಾಡಿದರು. ಈ ಬಾಲಕನು ಮುಂದಕ್ಕೆ ದೊಡ್ಡ ಶಾಸ್ತ್ರಜ್ಞನಾಗುತ್ತಾನೆಂಬ ಸೂಚನೆಯೋ ಎಂಬಂತೆ ವ್ಯಾಸತೀರ್ಥರೆಂಬ ಹೆಸರನ್ನೂ ಇಟ್ಟರು. ಬ್ರಹ್ಮಣ್ಯತೀರ್ಥರು ಕೆಲವು ದಿನ ವ್ಯಾಸತೀರ್ಥರನ್ನು ತಮ್ಮ ಸಮೀಪದಲ್ಲೆ ಇಟ್ಟುಕೊಂಡಿದ್ದರು. ಅನಂತರ ಶ್ರೀಮುಖಸಂವತ್ಸರದಲ್ಲಿ ಮುಳಬಾಗಲಿಗೆ ಇವರನ್ನು ವಿದ್ಯಾಭ್ಯಾಸಕ್ಕಾಗಿ ಕಳುಹಿಸಿಕೊಟ್ಟರು. ಆಗ ಮುಳಬಾಗಲಲ್ಲಿ ಪದ್ಮನಾಭತೀರ್ಥರ ಮಠದವರಾದ ಶ್ರೀಲಕ್ಷ್ಮೀನಾರಾಯಣತೀರ್ಥರೆಂದು ನಾಮಾಂತರವುಳ್ಳ ಶ್ರೀಪಾದರಾಜರವರು ದೇದೀಪ್ಯಮಾನರಾಗಿದ್ದರು. ಶ್ರೀ ವ್ಯಾಸತೀರ್ಥ

ಇವರು ಆ ಪರಮಪಾವನವಾದ ನರಸಿಂಹ ಕ್ಷೇತ್ರದಲ್ಲಿ ಶ್ರೀಪಾದರಾಜರವರಿ
ಸ್ನಿದಿಯಲ್ಲಿ ಸಮಸ್ತ ಶಾಸ್ತ್ರಗಳನ್ನೂ ಅಭ್ಯಾಸಮಾಡಿದರು. ಅವರು ಕೂತು
ವ್ಯಾಸರಿಗಮಾಡುತ್ತಿದ್ದುದು ಒಂದು ಗುಂಡಿನ ಕೆಳಭಾಗದಲ್ಲಿ. ಅಲ್ಲಿ ವ್ಯಾಸ
ತೀರ್ಥರವರ ಒಂದು ಪ್ರತಿಮೆಯು ಇದೆ. ನಿತ್ಯವೂ ಅದಕ್ಕೆ ಪೂಜೆಯು ನಡೆಯು
ವುದು. ವ್ಯಾಸತೀರ್ಥರು ಅಲ್ಲಿದ್ದ ಶಿಷ್ಯತ್ರಾರಗಳಿಗೆ ಚಂದ್ರಸ್ಥಿತಿದ್ದರು. ಹೀಗೆ
ಅವರು ಹನ್ನೆರಡುವರುಷ ವಿದ್ಯಾಭ್ಯಾಸವನ್ನು ಮಾಡಿಕೊಂಡು ಆವ ಸ್ವಭಾವ
ಸುಂದರವಾದ ಕ್ಷೇತ್ರದಲ್ಲಿ ಶ್ರೀ ಲಕ್ಷ್ಮೀನರಸಿಂಹಮೂರ್ತಿಯು ತನ್ನ ಭಕ್ತರಿ
ಗಾಗಿ ಸ್ವಯಂ ಅಭಿವ್ಯಕ್ತನಾಗಿರುವನೋ, ಎಲ್ಲಿ ತ್ರಿಲೋಕ ಪಾವನೆಯಾದ
ಭಾಗೀರಥಿಯು ಶ್ರೀಪಾದರಾಜ ಯತಿವರರಿಗಾಗಿ ಲಲ್ಲಿರುವ ಸರೋವರದಲ್ಲಿ
ಆವಿರ್ಭವಿಸಿದಳೊ, ಯಾವ ಕ್ಷೇತ್ರದ ಸಮೀಪದಲ್ಲಿ ವಾಸಮಾಡಿದ ಜನರು
ಆಸ್ತಿಕರಿಗೆ ಆದರ್ಶಪ್ರಾಯರಾಗಿದ್ದರೂ, ಅಂತಹ ಕ್ಷೇತ್ರವೇ ಭಗವಂತನ ಲೀಲೆ
ಗಳಿಗೂ, ಅತನೆ ಭಕ್ತರ ಲೀಲೆಗಳಿಗೂ, ಸ್ಥಾನವಾಗಬೇಕಲ್ಲದೆ ಮತ್ತಾವ
ಸ್ಥಾನವಾಗಿತ್ತು ?

ಅನಂತರ ವ್ಯಾಸತೀರ್ಥರು ತಮ್ಮ ವಿದ್ಯಾಗುರುಗಳಾದ ಶ್ರೀಪಾದರಾಜ
ರೊಡನೆ ಹೊರಟು ಬ್ರಹ್ಮಣ್ಯತೀರ್ಥರಿದ್ದ ಸ್ಥಳಕ್ಕೆ ಬಂದರು. ಬ್ರಹ್ಮಣ್ಯತೀರ್ಥರ
ಕ್ಷೇತ್ರದಲ್ಲಿ ಮೊದಲು ಪ್ರಾಣದೇವರ ಪ್ರತಿಷ್ಠೆಯನ್ನು ಮಾಡಿದರು. ಆಮೇಲೆ
ಪಾಂಡುರಂಗನ ಕ್ಷೇತ್ರಕ್ಕೆ ಆ ಇಬ್ಬರು ಗುರುಗಳೊಡನೆ ದಯಮಾಡಿಸಿದರು.
ಅಲ್ಲಿ ಪ್ರತಿನಿತ್ಯವೂ ಚಂದ್ರಭಾಗಾ ಎಂದು ನಾಮಾಂತರವುಳ್ಳ ಭೀಮರಥೀ ನದಿ
ಯಲ್ಲಿ ಸ್ನಾನಾಹ್ನಿಕಗಳನ್ನು ನೆರವೇರಿಸಿಕೊಂಡು ಶ್ರೀ ಪಾಂಡುರಂಗನ ಆಲಯ
ಕ್ಕೆ ಆ ಇಬ್ಬರು ಗುರುಗಳೊಡನೆ ಪ್ರತಿದಿನವೂ ಬರುತ್ತಿದ್ದರು. ಆಗ ಪಾಂಡವರ
ಸಂತತಿಯಲ್ಲಿ ಕೊನೆಯವನಾದ ಶ್ರೀ ಕ್ಷೇಮಕರಾಜನು ಭೂಮಿಯಲ್ಲಿ ಸ್ಥಾಪಿಸಿದ್ದ
ಶ್ರೀ ರುಕ್ಮಿಣೀ ಸತ್ಯಭಾಮಾ ಸಹಿತ ಗೋಪಾಲಕೃಷ್ಣ ಪ್ರತಿಮೆಯನ್ನು ತಾವೇ
ಭೂಮಿಯನ್ನಗೆದು ತೆಗೆದು ವಿದ್ಯಾ ಗುರುಗಳಿಗೆ ಒಪ್ಪಿಸಿದರು.

ಶ್ರೀಪಾದರಾಜರವರು ಸುಖಪ್ರಾರಬ್ಧದವರು. ಅವರೊಂದು ದಿನ ತೈಲಾ
ಭ್ಯಂಗವನ್ನು ಮಾಡಿಕೊಳ್ಳುತ್ತಿದ್ದರು. ಆಗ ಶ್ರೀ ವ್ಯಾಸತೀರ್ಥರವರು ಅವರ ಮ
ರೆದ ದೇವರ ಪೂಜೆಯನ್ನು ಮಾಡುವ ಸಂಪ್ರದಾಯವಿತ್ತು. ಆದರಂತೆಯೇ ಆ ದಿನ
ಶ್ರೀ ವ್ಯಾಸತೀರ್ಥರು ದೇವರಪೂಜೆಗೆ ಕುಳಿತುಕೊಂಡರು. ಪ್ರಣವಜಪವಾದ
ಮೇಲೆ ಸಮಾಧಿಯಲ್ಲಿ ಕುಳಿತು ಶ್ರೀ ಗೋಪಾಲಕೃಷ್ಣನನ್ನು ಧ್ಯಾನಿಸಲಾರಂಭಿ

ನಲು ಕುಳಿತರು. ಆ ಕೂಡಲೆ ರತ್ನಖಚಿತವಾದ ಭಂಗಾರದ ಪೆಟ್ಟಿಗೆಯಲ್ಲಿದ್ದ ಗೋಪಾಲಕೃಷ್ಣ ಪ್ರತಿಮೆಯಲ್ಲಿ ಸನ್ನಿಹಿತನಾದ ಪರಮಾತ್ಮನು ಎದ್ದು ಕೊಳಲನ್ನೂದುತ್ತಾ ವ್ಯಾಸತೀರ್ಥರ ಮುಂದೆ ನರ್ತನಮಾಡಲಾರಂಭಿಸಿದನು. ವ್ಯಾಸತೀರ್ಥರಿಗೆ ಆನಂದಬಾಷ್ಪಗಳು ಕೋಮುಂಜವು ಉಂಟಾದುವು. ಅವರು ಕಣ್ಣು ತೆರದು ಶ್ರೀಕೃಷ್ಣನರ್ತನವನ್ನು ಮಾಡಿಕೊಂಡರು. ವ್ಯಾಸತೀರ್ಥರು ಸಾಲಿಗ್ರಾಮಗಳನ್ನು ತೆಗೆದುಕೊಂಡು, ವೀಣೆಯ ಸ್ವರಕ್ಕನುಸಾರವಾದ ಲಯಬದ್ಧವಾಗಿ ತಾಳವನ್ನು ಹಾಕುತ್ತಾ ಪರಮಾತ್ಮನ ಗುಣಗಳನ್ನು ತಮ್ಮ ಸುಸ್ವರದಿಂದ ಗಾನ ಮಾಡಿದರು.

ಸದ್ಯದ ಸ್ಥಿತಿಯನ್ನು ಶಿಷ್ಯರು ಶ್ರೀಪಾದರಾಜರವರಿಗೆ ತಿಳಿಸಿದರು. ಅವರು ಕೂಡಲೆ ಬಂದು ನೋಡಲಾಗಿ ಶ್ರೀ ಗೋಪಾಲಕೃಷ್ಣದೇವನು ನರ್ತನಮಾಡುತ್ತಿದ್ದುದು ಅವರಿಗೂ ಕಾಣಿಸಿತು. ನರ್ತನವು ಅಲ್ಲಿಗೆ ನಿಂತಿತು. ಆ ಮೂರ್ತಿಯು ಈಗಲೂ ಶಿಲ್ಪಿ ಶಾಸ್ತ್ರಕ್ಕೆ ಎರುದ್ದವಾಗಿ ನಿಂತಿರುವುದನ್ನು ವ್ಯಾಸರಾಯರವರ ಮುಖದಲ್ಲಿ ಕಾಣಬಹುದು. ಶ್ರೀಪಾದರಾಜರವರಿಗೆ ಈ ಶಿಷ್ಯತಲ್ಲಿ ಬಹು ವಿಶ್ವಾಸವುಟಾಯಿತು. ಅವರು ರುಕ್ಮಿಣೀ ಸತ್ಯಭಾಮಾ ಸಹಿತವಾದ ಶ್ರೀಕೃಷ್ಣ ಪ್ರತಿಮೆಯನ್ನು ವ್ಯಾಸತೀರ್ಥರವರಿಗೇ ಕೊಟ್ಟುಬಿಟ್ಟರು. ಶ್ರೀ ಬ್ರಹ್ಮಣ್ಯತೀರ್ಥರವರು ತಮ್ಮ ಸಂಸ್ಥಾನ ಪೂಜೆಯಲ್ಲಿದ್ದ ಯೋಗಾಸ್ಯಸಿಂಹ ದೇವರನ್ನೂ, ತಮಗೆ ಸದಾ ತೋಚದಿಂದ ಬಂದಿದ್ದ ಶ್ರೀಪಲ್ಲಲಮೂರ್ತಿಯನ್ನೂ ವ್ಯಾಸತೀರ್ಥರವರಿಗೆ ನಿರಂತರ ಪೂಜೆಗಾಗಿ ಕೊಟ್ಟರು. ವ್ಯಾಸತೀರ್ಥರು ಪ್ರತಿನಿತ್ಯವೂ ಈ ಎಲ್ಲಾ ದೇವರುಗಳನ್ನೂ ಪೂಜಿಸುತ್ತಿದ್ದರು. ಇನ್ನು ಕೆಲವು ಬೆಳ್ಳಿಯ ಪ್ರತಿಮೆಗಳನ್ನೂ ಪ್ರತಿಷ್ಠೆ ಮಾಡಿದರು. ಈ ಪ್ರತಿಮೆಗಳೂ ಮೇರದ ಪರಂಪರೆಯ ಯತಿಗಳಲ್ಲಿವೆ. ಅನಂತರ ವ್ಯಾಸತೀರ್ಥರು ಶ್ರೀಸರ್ವಜ್ಞರ ಶಾಸ್ತ್ರಪ್ರವಚನ ಮಾಡುತ್ತಾ ಕುಮಾದಿಗಳನ್ನು ವಾದದಲ್ಲಿ ಜಯಿಸುತ್ತಾ ಸಂಚರಿಸಿದರು. ಕೆಲವುಕಾಲದ ಮೇಲೆ ತಮ್ಮ ಗುರುಗಳಾದ ಬ್ರಹ್ಮಣ್ಯತೀರ್ಥರವರ ಸಮೀಪಕ್ಕೆ ಪುನಃ ಬಂದರು. ಆಗ ಬ್ರಹ್ಮಣ್ಯತೀರ್ಥರು ವ್ಯಾಸತೀರ್ಥರವರಿಗೆ ವೇದಾಂತವಿದ್ಯಾ ಸಾಮ್ರಾಜ್ಯಾಭಿಷೇಕವನ್ನು ಮಾಡಿ, ತಾವು ಪರಿಪಾಲಿಸುತ್ತಿದ್ದ ಶ್ರೀಮದಾನಂದತೀರ್ಥ ಭಗವತ್ಪಾದರವರ ಶಿಷ್ಯ ಪರಂಪರೆಯಿಂದ ಪ್ರಾಪ್ತವಾಗಿ ಮಧ್ಯಕಾಲದಲ್ಲಿ ವಿಚ್ಛಿನ್ನವಾಗಿ ತಮಗೆ ಲಭಿಸಿರುವ ಸಂಸ್ಥಾನದ ಸಕಲಾಧಿಕಾರವನ್ನು ಅವರಿಗೆ ಒಪ್ಪಿಸಿದರು. ವ್ಯಾಸತೀರ್ಥರು ಚಿನ್ನಪಟ್ಟಣದ ಸಮೀಪದಲ್ಲಿರುವ ಮಳೂರು ಗ್ರಾಮದ ಅಪ್ರಮೇ

ಯ ದೇವರ ಸನ್ನಿಧಾನದಲ್ಲಿದ್ದು ಗ್ರಂಥಗಳನ್ನು ಬರೆದರು. ಈ ವಿಷಯ ಕೆಳಗೆ ಬರಿಯುವ ಇವರ ಶ್ಲೋಕದಿಂದ ತಿಳಿದು ಬರುತ್ತದೆ.

"ಅನಂತಕಲ್ಯಾಣಗುಣೈಕರಾಶಿಮಶೇಷದೋಷೋಜ್ಝಿತಮಪ್ರಮೇಯಂ।
ಮುಮುಕ್ಷುಭಿಸ್ಸೇವ್ಯಮನಂತಸೌಖ್ಯಪ್ರದಂ ರಮೇಶಂ ಪ್ರಣಮಾಮಿನಿತ್ಯಂ॥"

ಎಂದು ಶ್ರೀ ವ್ಯಾಸತೀರ್ಥರಿಂದ ರಚಿತವಾದ ತರ್ಕ ತಾಂಡವದ ಆದ್ಯ ಶ್ಲೋಕವಿರುತ್ತದೆ. ಈ ಶ್ಲೋಕದಲ್ಲಿ ಅಪ್ರಮೇಯಪದವಿರುವುದರಿಂದ ಆ ಸ್ಥಳದ ಪರು ಹೇಳುವ ಇತಿಹಾಸವು ಈ ಗ್ರಂಥವನ್ನು ಅಲ್ಲಿ ರಚಿಸಿದರೆಂಬುದಕ್ಕೆ ಅನ್ವಯಿಸತಕ್ಕುದಾಗಿರುತ್ತದೆ. ಆ ಸ್ಥಳದಲ್ಲಿರುವ ಜನರು ಆ ಗುಹೆಯಲ್ಲಿ ಶ್ರೀ ವ್ಯಾಸತೀರ್ಥರಿದ್ದುಗೊಂಡು ಶ್ರೀಮತ್ತಾತ್ಪರ್ಯ ಚಂದ್ರಿಕೆಯನ್ನು ರಚಿಸಿ ಶ್ರೀಮದಪ್ರಮೇಯದೇರಿಗೆ ಸಮರ್ಪಿಸಿದಂತೆ ತಾತ್ಪರ್ಯಚಂದ್ರಿಕೆಯ ಕೊನೆಯಲ್ಲಿ ಸ್ಪಷ್ಟವಾಗುವುದಾಗಿ ಹೇಳುತ್ತಾರೆ. ಶ್ರೀ ವ್ಯಾಸತೀರ್ಥರು ರಚಿಸಿರುವ ಮತ್ತಾವ ಗ್ರಂಥದಲ್ಲಿಯೂ ಜನರ ಹೇಳಿಕೆಯಂತೆ ಸ್ಪಷ್ಟವಾಗಿ ಉಕ್ತಿಯಿಲ್ಲದಿರುವುದರಿಂದಲೂ ಮತ್ತು ಅಪ್ರಮೇಯ ಶಬ್ದವಿರುವ ವಾಕ್ಯವು ಕೂಡ ಕಾಣಬಂದಿರುವುದಿಲ್ಲದುದರಿಂದಲೂ ಜನರ ಹೇಳಿಕೆಯು ಸರ್ವಾಂಶದಲ್ಲಿಯೂ ಅಪ್ರಮಾಣವಾಗುವುದು ನ್ಯಾಯವಲ್ಲದಿರುವುದರಿಂದಲೂ ಈ ಅಪ್ರಮೇಯ ಪದವಾದರೂ ಇರುವ ಆದ್ಯ ಶ್ಲೋಕವುಳ್ಳ ಶ್ರೀ ತರ್ಕತಾಂಡವ ಗ್ರಂಥವನ್ನು ಅಲ್ಲಿ ರಚಿಸಿ ದೇವರಿಗೆ ಸಮರ್ಪಿಸಿದರೆಂದು ಈ ಲೇಖನದ ಅಭಿಪ್ರಾಯವಾಗಿರುತ್ತದೆ.

ಕಾಶಿಯಾತ್ರೆಗೆ ಹೊಂಗಿದ್ದಾಗ ನ್ಯಾಯಾಮೃತ, ಗ್ರಂಥವನ್ನು ವಿಜಯನಗರ ಸಂಸ್ಥಾನದಲ್ಲಿದ್ದಾಗ ಮಂದಾರಮಂಜರಿಯನ್ನೂ, ಮುಳಬಾಗಲ ಕ್ಷೇತ್ರದಲ್ಲಿ ಭೇದೋಜ್ಜೀವನವೇ ಮೊದಲಾದ ಗ್ರಂಥಗಳನ್ನು ರಚಿಸಿ ಶಿಷ್ಯರಿಗೆ ಪಾಠಹೇಳುತ್ತಿದ್ದರು. ಶ್ರೀ ವ್ಯಾಸತೀರ್ಥರು ಕಾಶೀ, ಗಯಾ, ಬದರಿಕಾಶ್ರಮ, ರಾಮೇಸೇತು, ಇವೇ ಮೊದಲಾದ ಕ್ಷೇತ್ರಗಳನ್ನು ಕ್ರಮವಾಗಿ ಸಂಚರಿಸುತ್ತಾ ಶ್ರೀರಂಗಕ್ಷೇತ್ರಕ್ಕೆ ಬಂದರು. ಅವರು ಮೈಸೂರು ದೇಶ ಮತ್ತು ದಕ್ಷಿಣದೇಶಗಳಲ್ಲಿ ಸಂಚಾರಮಾಡುವಾಗ ಸುಮಾರು ೭೦೭ ದೇವಸ್ಥಾನಗಳನ್ನು ಕಟ್ಟಿಸಿ ಪ್ರಾಣದೇವರ ಪ್ರತಿಷ್ಠೆಗಳನ್ನು ಮಾಡಿರುವರು. ಈ ಸ್ಥಳಗಳಲ್ಲೆಲ್ಲವೂ ಶ್ರೀ ಮಾರುತಿಯ ಸನ್ನಿಧಾನವು ಅತಿ ಜಾಗರೂಕವಾಗಿದ್ದು ಭಕ್ತರ ಇಷ್ಟಾರ್ಥಲಾಭಗಳು ಆಗುತ್ತಿರುವುದು ಜನರ ಅನುಭವಸಿದ್ಧವಾಗಿದೆ. ಅಬ್ಬೂರಿನ ನಿವಾಸದಲ್ಲಿ ವ್ಯಾಸತೀರ್ಥರವರು ತಪಸ್ಸು ಮಾಡಿದ ಗುಹೆ ಒಂದಿದೆ. ಅದಕ್ಕೆ ವ್ಯಾಸಗುಹೆ ಎಂದು ಹೆಸರು.

ಯಾವನಾದರೆ ಹೀಗೆಮಾಡದೆ ಕಾಣಿಕೆಯನ್ನು ಮಾತ್ರ ದರೋಡೆ ಮಾಡಿ ತೆಗೆದುಕೊಳ್ಳುತ್ತಾನೆಯೊ ಅವನು ತಾನು ಮಾಡಿದ ಪುಣ್ಯ ಫಲನ್ನು ಪ್ರಜೆಗಳಿಗೆ ಕೊಟ್ಟುಬಿಡಬೇಕಾಗುವುದು. ಮತ್ತು ಜನಗಳ ಪಾಪಕ್ಕೆ ಗುರಿಯಾಗಿ ಅದರಿಂದಾಗುವ ಅನರ್ಥಗಳನ್ನನುಭವಿಸಬೇಕಾಗುತ್ತದೆ. ಆದಕಾರಣ ರಾಜನಾದವನಿಗೆ ಪ್ರಜಾಪಾಲನೆಗಿಂತಲೂ ದೊಡ್ಡ ದಾವುದೂ ಇಲ್ಲ. ಜ್ಞಾನಿಗಳಾದ ಬ್ರಾಹ್ಮಣರಿಗೆ ಸಮ್ಮತನಾಗಿ, ಪರಂಪರೆಯಿಂದ ಬಂದಿರುವ ಧರ್ಮಗಳನ್ನು ಬಿಡದೆ ನಡೆಯಿಸುತ್ತಾ ಬಾ. ನಾನೇ ಬಹು ಸಮರ್ಥ. ನನ್ನಿಂದಲೇ ಪ್ರಪಂಚವು ರಕ್ಷಿತವಾಗಿದೆ ಎಂದು ಅಹಂಕಾರವನ್ನು ಯಾವಾಗಲೂ ಪಡಬೇಡ. ಕೆಲವು ದಿನಗಳಲ್ಲಿಯೆ ನಿನ್ನ ಮನೆಗೆ ಸನಕಾದಿಗಳು ಬರುವರು. ಅವರ ದರ್ಶನದಿಂದ ನೀನು ಕೃತಾರ್ಥನಾಗುವೆ. ಎಲೈ ಭೂಪಾಲನೆ ! ನಿನ್ನಭಿಲಷಿತವೇನೊ ಅದನ್ನು ಕೇಳು ” ಎಂದು ಯಜ್ಞನಾಮಕ ಶ್ರೀಹರಿಯು ಹೇಳಿದನು. * ದೇವೇಂದ್ರನು ತನ್ನ ತಪ್ಪನ್ನ ಮನ್ನಿಸಬೇಕೆಂದು ಪೃಥುಚಕ್ರವರ್ತಿಯ ಪಾದಗಳ ಮೇಲೆ ತಲೆಯನ್ನಿಟ್ಟು ನಮಸ್ಕರಿಸಿ ಬೇಡಿಕೊಂಡನು. ಪೃಥುರಾಜನು ದೇವೇಂದ್ರನನ್ನು ತಬ್ಬಿಕೊಂಡು ತನಗಿದ್ದ ದ್ವೇಷವನ್ನೆಲ್ಲಾ ಬಿಟ್ಟುಬಿಟ್ಟನು.

ಅನಂತರ ಶ್ರೀ ಹರಿಯು ಪ್ರಯಾಣಸನ್ನದ್ಧನಾದನು. ಆದರೂ ಪೃಥುರಾಜನ ಆದರಾತಿಶಯದಿಂದ ಪರಮಕರುಣಾಳುವಾಗಿ ಪ್ರಯಾಣ ಮಾಡಲಿಲ್ಲ. ಆಗ ಆದಿ ರಾಜಾಧಿರಾಜನಾದ ಪೃಥುವಿನ ಕಣ್ಣುಗಳು ಆನಂದ ಬಾಷ್ಪಗಳಿಂದ ಕೂಡಿದವು. ಕೈಗಳು ಪ್ರಣಾಮಗಳನ್ನು ಮಾಡಿದವು. ಸಂತೋಷಾತಿಶಯದಿಂದ ಗಂಟಲುಬ್ಬಿತು. ಅದರಿಂದ ಮಾತನಾಡಲು ಸಹ ಸ್ವಲ್ಪ ಹೊತ್ತು ಆಗಲಿಲ್ಲ. ಮನಸ್ಸಿನಲ್ಲಿಯೆ

* ಉತ್ತಮರಾದ ಗುರುಗಳು ತನ್ನ ಉಪಾಸನೆಗೆ ವಿಷಯನಾದ ಶ್ರೀಪರಮಾತ್ಮನನ್ನು ಶಿಷ್ಯರಿಗೂ ಉಪದೇಶಿಸಬೇಕು. ಇದು ಲೋಕದಲ್ಲಿರುವ ಆಚಾರ. ಅದರಂತೆ ಯಜ್ಞನಾಮಕ ಶ್ರೀಹರಿಯು ಪೃಥುಚಕ್ರವರ್ತಿಗೆ ಉಪದೇಶಮಾಡಿರುವನು. ಅದರಿಂದ ಈ ಆತ್ಮತತ್ತ್ವೋಪದೇಶವು ಪ್ರಕೃತಾನುಸಂಗತವೆಂದರಿಯಬಾರದು.

ಪರಮಾತ್ಮನನ್ನು ಧ್ಯಾನಮಾಡುತ್ತಾ ಇದ್ದನು. ಆಮೇಲೆ ತನ್ನಿಚ್ಛೆಯಿಲ್ಲದೆ ಉದರಿ ಬೀಳುತ್ತಿದ್ದ ಆನಂದಬಾಷ್ಪಗಳನ್ನು ವರಿಸಿಕೊಂಡು ಶ್ರೀರಮಾಕಾಂತನನ್ನು ಕಣ್ಣು ತುಂಬ ನೋಡಿದನು. ಶ್ರೀ ಪರಮಾತ್ಮನಿಗೆ ಭಕ್ತರಲ್ಲಿ ಎಷ್ಟು ಕರುಣೆ ಎಂದು ಹೇಳೋಣ. ದೇವತೆಗಳು ಭೂಸ್ಪರ್ಶ ಮಾಡಕೂಡದು. ಆದರೂ ಸಹ ಆ ನಿಯಮವನ್ನು ಭಕ್ತರಿಗಾಗಿ ಬಿಟ್ಟನೊ ಎಂಬಂತೆ ತುದಿಕಾಲುಗಳಿಂದ ಭೂಸ್ಪರ್ಶಮಾಡುತ್ತಾ ಗರುಡನ ಹೆಗಲನ್ನೇರಿ ಮುಂಗೈಯ್ಯನ್ನಿಟ್ಟುಕೊಂಡು ಆ ನಮ್ಮ ಚಕ್ರವರ್ತಿಗೆ ದರ್ಶನವನ್ನು ಕೊಡುತ್ತಾ ನಿಂತಿದ್ದನು. ಅತನನ್ನು ವೈಥುಚಕ್ರವರ್ತಿಯು ಬಹುವಾಗಿ ಸ್ತುತಿಮಾಡಿದನು.

ವೈಥುಚಕ್ರವರ್ತಿಯು ತನ್ನ ಪ್ರಜೆರುಗಳಗಾಗಿ ಮಾಡಿದ ಉಪನ್ಯಾಸ.

ಅನಂತರ ವೈಥುಚಕ್ರವರ್ತಿಯು ತನ್ನ ರಾಜಧಾನಿಗೆ ಬಂದನು. ಪಟ್ಟಣವು ಮುತ್ತಿನಸರಗಳಿಂದಲೂ, ಹೂಮಾಲೆಗಳಿಂದಲೂ, ಚಿನ್ನದ ತೋರಣಗಳಿಂದಲೂ, ಅಲಂಕೃತವಾಗಿತ್ತು. ಧೂಪದೀಪಗಳೂ ಅಧಿಕವಾಗಿದ್ದವು. ಜನಗಳು ಮುಂಗಳ ದ್ರವ್ಯಗಳನ್ನು ಕೈಯಲ್ಲಿ ಹಿಡಿದು ಸುಂದರಿಯರಾದ ಕನ್ಯಕೆಯರೊಡನೆ ಇವರುಗೊಂಡರು. ವೈಥುವು ತನ್ನನ್ನು ಎದುರುಗೊಂಡು ಪ್ರೂಜಿಸುತ್ತಿರುವ ಜನಗಳನ್ನು ವ್ರತಿವುರ್ಯಾದೆಗಳಿಂದ ಸಂತೋಷಪಡಿಸಿದನು. ಕೆಲವು ಕಾಲದಮೇಲೆ ಆತನು ಗಂಗಾಯಮುನೆಗಳ ಮಧ್ಯದಲ್ಲಿರುವ ಬ್ರಹ್ಮಾವರ್ತಕ್ಕೆ ತಪಸ್ಸಿಗಾಗಿ ಬಂದು ಬಿಟ್ಟನು. ಆ ಮುದನೀಯನ ಆಜ್ಞೆಯು ಸಪ್ತದ್ವೀಪಗಳಲ್ಲಿ ಬ್ರಾಹ್ಮಣರ ಕುಲ, ವಿಷ್ಣುಭಕ್ತರಾದ ಭಾಗವತರ ಹೊರತು ಮತ್ತೆಲ್ಲಿಯೂ ತಡೆ ಇಲ್ಲದೆ ನಡೆಯುತ್ತಿದ್ದಿತು. ಆತನು ಪುನಃ ಬಂದು ಮಹಾ ಸತ್ರಯಾಗವನ್ನು ಮಾಡಲು ದೀಕ್ಷಿತನಾದನು. ಆಗಲೂ ದೇವ-ಋಷಿ ಮೊದಲಾದವರೆಲ್ಲರೂ ಬಂದಿದ್ದರು. ಅವರೆಲ್ಲರಿಗೂ ಸರಿಯಾದ ಸತ್ಕಾರಗಳೂ ಆದವು. ಆಗ ವೈಥುಚಕ್ರವರ್ತಿಯು ಎದ್ದು ನಿಂತುಕೊಂಡನು. ಆತನು ಬಹಳ ಎತ್ತರವಾಗಿದ್ದನು. ತೋಳುಗಳು

ಉದ್ದವಾಗಿ ದುಂಡುಗಿದ್ದವು. ಮೈ ಶುದ್ಧವಾಗಿತ್ತು. ಕಣ್ಣುಗಳು ಸ್ವಲ್ಪ ಕೆಂಪಗಿದ್ದುವು. ಮೂಗು ಉದ್ದವಾಗಿ ಎತ್ತರವಾಗಿದ್ದಿತು. ಸುಂದರವಾದ ಮುಖವು ಪ್ರಸನ್ನವಾಗಿತ್ತು. ಕಿರಿದಾದ ಹಲ್ಲುಗಳಿಂದ ಕಿರುನಗೆಯು ಹೊರ ಹೊಮ್ಮುತ್ತಿತ್ತು. ಹೀಗೆಯೆ ಅಂಗಾಂಗವೆಲ್ಲವೂ ಅತ್ಯಂತ ಸುಂದರವಾಗಿತ್ತು. ಕವಚಾದಿಗಳನ್ನು ತೊಡದೆ ಇದ್ದುದರಿಂದ ಸೌಂದರ್ಯವು ವ್ಯಕ್ತವಾಗಿ ತೋರುತಿತ್ತು. ಯಾಗನಿಯಮಕ್ಕಾಗಿ ಕೆಲವು ಒಡವೆಗಳನ್ನೂ ಕೃಷ್ಣಾಜಿನವನ್ನೂ ಆತನು ಧರಿಸಿದ್ದನು. ದರ್ಶನವು ನೋಟಕರ ತಾಪವನ್ನು ಕಳೆಯುತ್ತಿತ್ತು. ಇಂತಹ ಪೃಥುಚಕ್ರವರ್ತಿಯು ನೆರದಿದ್ದವರನ್ನು ಸಂತೋಷಪಡಿಸುತ್ತ ಉಪನ್ಯಾಸ ಮಾಡತೊಡಗಿದನು.

ಎಲ್ಲಸಾಧುಗಳಾದ ಸಭಾಸದರೆ! ಕೇಳಿರಿ! ಯಾರು ಧರ್ಮಸ್ವರೂಪವನ್ನು ತಿಳಿಯಲಪೇಕ್ಷಿಸುವರೊ ಅವರು ಸಜ್ಜನರ ಸಮಾಗಮವಾದಾಗ ತಮ್ಮಭಿಪ್ರಾಯವನ್ನು ಅವರಿಗೆ ತಿಳಿಸಬೇಕು. ಆದಕಾರಣ ನಾನು ರಾಜನೆಂಬವ್ಯಾಜದಿಂದ ತಮ್ಮಲ್ಲಿ ವಿಚಾರಮಾಡುವೆನು. ನಿಮಗೆ ಧರ್ಮೋಪದೇಶ ಮಾಡಲು ಪ್ರಯತ್ನವಟ್ಟಲ್ಲ. ದುಷ್ಟ ಜನರನ್ನು ದಂಡಿಸುವುದಕ್ಕೂ ಸಜ್ಜನರನ್ನು ಸಂತೋಷಪಡಿಸುವುದಕ್ಕೂ, ಮತ್ತು ಕಾಪಾಡುವುದಕ್ಕೂ, ಅವರವರ ವರ್ಣಾಶ್ರಮ ಮರ್ಯಾದೆಗಳಲ್ಲಿ ಅವರವರನ್ನು ಇರಿಸುವುದಕ್ಕೂ, ನಾನು ದೇವರಿಂದ ನಿಯಮಿತನಾಗಿದ್ದೇನೆ. ಸರ್ವಕರ್ಮಸಾಕ್ಷಿಯಾದ ಪರಮಾತ್ಮನ ಪ್ರಸಾದದಿಂದ ಧರ್ಮದಿಂದ ಪ್ರಜಾಪಾಲನವನ್ನು ನಡೆಯಿಸುವ ರಾಜನಿಗೆ ಪುಣ್ಯಕರವಾದ ಲೋಕಗಳು ಉಂಟಾಗುವುವು. ಆದುದರಿಂದ ನನಗೀಕಾರ್ಯವು ಅತ್ಯಾವಶ್ಯಕವಾದುದು. ಯಾವ ರಾಜನು ಪ್ರಜೆಗಳನ್ನು ಧರ್ಮಮಾರ್ಗದಲ್ಲಿ ನೆಲಗೊಳಿಸದೆ ಅವರಿಂದ ಕಾಣಿಕೆಗಳನ್ನು ಮಾತ್ರ ತೆಗೆದುಕೊಳ್ಳುತ್ತಾನೆಯೊ ಅವನು ಪ್ರಜೆಗಳ ಪಾಪವನ್ನು ಅನುಭವಿಸುವನು. ಮತ್ತು ತನ್ನ ಪುಣ್ಯವನ್ನೂ ಹಾಳುಮಾಡಿಕೊಳ್ಳುವನು. ಆದಕಾರಣ ಅಯ್ಯಾ! ಪ್ರಜರುಗಳಿರಾ! ನೀವು ಅಸೂಯೆಯನ್ನು ಬಿಟ್ಟು ಭಗವಂತನಲ್ಲಿ ಭಕ್ತಿಯುಳ್ಳವರಾಗಿರಿ. ನಿಮ್ಮ ಹಿತಕ್ಕಾಗಿಯೂ, ರಾಜನಾದ ನನ್ನ ಹಿತಕ್ಕಾಗಿಯೂ, ನೀವು ಮಾಡಬೇಕಾದ ವರ್ಣಾಶ್ರಮಾಚಾರಾದಿಗಳನ್ನು ನಡೆ

ಯಿಸಿ ಅದನ್ನು ಭಗವಂತನಿಗೆ ಸಮರ್ಪಿಸಿರಿ. ಹೀಗೆ ನೀವು ಮಾಡಲಾಗುವ ನನಗೆ ಪರಮಾನುಗ್ರಹವು. ಎಲೈ ! ದೇವತೆಗಳಿರಾ ! ಪಿತೃಗಳಿರಾ ! ಋಷಿಗಳಿರಾ! ನೀವಿದನ್ನನುಮೋದಿಸಿ ಅನುಗ್ರಹಿಸಿರಿ. ಆಪ್ತರ್ಯಾ! ಜನರಿಗಳಿರಾ! ನಮ್ಮ ತಂದೆಯಾದ ವೇನರಾಜನು ಅವರವರು ಮಾಡಿದ ಕರ್ಮಗಳನ್ನು ಈಶ್ವರನಿಗೆ ಅರ್ಪಣೆ ಮಾಡಲಾಗದೆಂದು ನಿಷೇಧಿಸಿದ್ದನು ಎಂದು ಶಂಕಿಸುವುದು ಸರಿಯಲ್ಲ. ಜ್ಞಾನಿಗಳ ಮತದಲ್ಲಿ ಯಜ್ಞಪತಿಯಾದ ದೇವರು ಉಂಟು. ಪರಮಾತ್ಮನಿರುವ ವಿಷಯದಲ್ಲಿ ಸಂಶಯ ಪಡಬೇಡಿರಿ. ಪ್ರತ್ಯಕ್ಷದಿಂದಲೂ, ಶಾಸ್ತ್ರ ಪ್ರಮಾಣಗಳಿಂದಲೂ ಯಥಾರ್ಥವಾದ ಈ ಜಗತ್ತಿನ ವೈಚಿತ್ರ್ಯಕ್ಕೆ ಪರಮಾತ್ಮನ ಹೊರತು ಬೇರೆ ಕಾರಣವಿಲ್ಲ. ಕರ್ಮದ ವೈಚಿತ್ರ್ಯದಿಂದ ಜಗದ್ವೈಚಿತ್ರ್ಯವು ಸಿದ್ಧಿಸುತ್ತದೆ. ಈಶ್ವರನು ಇದಾನೆಂದು ಏಕೆ ಒಪ್ಪಬೇಕೆನ್ನುವಿರೊ! ಜಡವಾದ ಕರ್ಮಕ್ಕೆ * ವಿಚಿತ್ರತೆಯು ಹೇಗೆ ಕೂಡೀತು. ಈ ಕರ್ಮವಿಚಿತ್ರತೆಯಿಂದ ಜಗತ್ತಿನ ವಿವಿಧಭಾವವು ಮತ್ತು ಹೇಗೆ ಸಂಭವಿಸೀತು? ಆದಕಾರಣ ಸರ್ವನಿಯಾಮಕನಾದ ದೇವರು ಇದ್ದೇಇದಾನೆಂದು ಒಪ್ಪಬೇಕು. ಇವಕ್ಕೆ ಅನೇಕವಾದ ಪ್ರಮಾಣಗಳುಂಟು. ಜ್ಞಾನಿಗಳ ಸಂಮತಿಯೂ ಇದೆ. ಮತ್ತು ನಮ್ಮ ಕುಲದ ಮೂಲಪುರುಷನಾದ ಮನು, ಉತ್ತಾನಪಾದ, ಧ್ರುವ, ಪ್ರಿಯವ್ರತ, ನಮ್ಮ ಮುತ್ತಜ್ಜನಾದ ಅಂಗರಾಜ, ಇನ್ನೂ ಇತರ ರಾಜರು ಚತುರ್ಮುಖ ಬ್ರಹ್ಮದೇವರು, ಮಹಾದೇವ, ಪ್ರಹ್ಲಾದಾದಿಗಳು, ಕರ್ಮಫಲಪ್ರದನಾದ ದೇವರು ಉಂಟೆಂತಲೆ ಸಿದ್ಧಾಂತಿಸಿರುವರು. ಧರ್ಮಭ್ರಾಂತನೂ ಶೋಚನೀಯನೂ ಆಗಿರುವ ವೇನರಾಜನಲ್ಲದೆ ಮತ್ತಾರೂ ದೇವರಿಲ್ಲವೆಂದು ಹೇಳಲಿಲ್ಲ. ಆದಕಾರಣ ನೀವ್ರಗಳೆಲ್ಲರೂ ಭಗವದರ್ಪಣಬುದ್ಧಿಯಿಂದ ಎಲ್ಲಾ ಕಾರ್ಯಗಳನ್ನೂ ಮಾಡುತ್ತ ಬನ್ನಿ.

ಹೀಗೆ ಎಲ್ಲರಿಗೂ ಹೇಳಿ ತನ್ನ ವಂಶದ ರಾಜರಿಗೆ ಕೆಲವು ವಿಷಯಗಳನ್ನು ಹೇಳಿದನು. ಆತನಿಗೆ ಬ್ರಾಹ್ಮಣರನ್ನು ಬಿಟ್ಟು ಮೋಕ್ಷಮಾರ್ಗದಲ್ಲಿಯೂ ಸರಿಯಾದ ಬೋಧಕರಿಲ್ಲವೆಂಬ ನಿಜಾಂಶವು

* ವಿಚಿತ್ರತೆ ಎಂದರೆ ಭಿನ್ನ ಭಿನ್ನವಾದ ಫಲಗಳನ್ನು ಕೂಡುವ ಶಕ್ತಿಯು.

ಚೆನ್ನಾಗಿ ತಿಳಿದಿದ್ದೆನು. ಒಬ್ಬ ಬ್ರಾಹ್ಮಣನ ನಿರೋಧದಿಂದಲೂ ನಮ್ಮ ರಾಜ್ಯನಾಶ, ಕುಲನಾಶ, ಪುಣ್ಯಲೋಕದಿಂದ ಚ್ಯುತಿ, ಆಗುವುದೆಂಬ ಯಥಾರ್ಥವಾದ ನಂಬಿಕೆ ಯಿತ್ತು. ಈ ಎಲ್ಲಾ ರಾಜ್ಯಗಳೂ ಬ್ರಾಹ್ಮಣರದೆ ಆಗಿದ್ದೆನು. ಅವರ ತಪಸ್ಸಿನಿಂದಲೆ ಈ ರಾಜ್ಯವು ಇದೆ. ನಾನೀಗ ರಾಜನಾಗಿರುವುದೂ ಅವರ ಅನುಗ್ರಹದಿಂದಲೆ ಎಂಬುದು ಗೊತ್ತಿದ್ದೆನು. ಬ್ರಾಹ್ಮಣರ ವಾಗ್ವಜ್ರದ ಸಾಮರ್ಥ್ಯವು ತನ್ನ ತಂದೆಯ ಕಥೆಯು ಜ್ಞಾಪಕಬಂದಾಗಲೆಲ್ಲಾ ಆತನ ಕಣ್ಣೆದುರಿಗೆ ನಿಂತೆಂತೆ ಇತ್ತು. ಭೃಗು ಹೊಮ ಲಾದ ಋಷಿಗಳಿಗೆ ತಪಶ್ಶಕ್ತಿ ಋತ್ವಿಕ್ಕಗಳಿಗೆ ಮಂತ್ರಶಕ್ತಿ ಮೊದಲಾದ ಕಾರ್ಯಗಳು ಬ್ರಾಹ್ಮಣರ ಸಾಮರ್ಥ್ಯವನ್ನು ಪದೇಪದೇ ಜ್ಞಾಪಕಕ್ಕೆ ತಂದುಕೊಡುತ್ತಿದ್ದವು. ಕೃತಜ್ಞನಾದ ಪೃಥುವು ಸ್ವತಃ ಬ್ರಾಹ್ಮಣ ಪ್ರಿಯನಾಗಿದ್ದನು. ಅದರಿಂದಾತನು ತನ್ನವರು ಬ್ರಾಹ್ಮಣರ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ವಿಷಯವನ್ನು ಹೇಳಿದನು. ಎಲ್ಲಾ! ನನ್ನ ಬಂಧುಗಳಿರಾ! ನಾನು ಅನುಭವದಿಂದ ನಿಮಗೆ ಒಳ್ಳೆಯದಾಗಲೆಂದು ಹೇಳುವ ಮಾತುಗಳನ್ನು ಕೇಳಿರಿ. ಅವರಂತೆ ನಡೆಯಿರಿ.

ಮಾ ಜಾತು ತೇಜಃ ಪ್ರಭವೇನ್ಮಹರ್ದ್ಧಿಭಿ
ಸ್ತಿತಿಕ್ಷಯಾ ತಪಸಾ ವಿದ್ಯಯಾ ಚ।
ದೇವೀಮ್ಯಮಾನೇಽಜಿತದೇವತಾತ್ಮಾಂ
ಕುಲೇ ಸ್ವಯಂ ರಾಜಕುಲೇ ದ್ವಿಜಾನಾಂ ॥
ಬ್ರಹ್ಮಣ್ಯದೇವಃ ಪುರುಷಃ ಪುರಾತನೋ
ನಿತ್ಯಂ ಹರಿರ್ಯಚ್ಚರಣಾಭಿವಂದನಾತ್।
ಅವಾಪ ಲಕ್ಷ್ಮೀಮನಪಾಯಿನೀಂ ಯಶೋ
ಜಗತ್ಪವಿತ್ರಂ ಚ ಮಹತ್ತಮಾಗ್ರಣೀಃ ॥
ತದೇವ ತದ್ಧರ್ಮವಿದೃರ್ನಿಷೇವ್ಯತಾಂ
ಸ್ವರ್ಗಾಪ್ತ್ಯಾತ್ಮನಾ ಬ್ರಹ್ಮಕುಲಂ ನಿಷೇವ್ಯತಾಂ ॥

ರಾಜಕುಲದಲ್ಲಿರುವ ಮಮ್ಮಾ ಸಂಪತ್ತುಗಳಿಂದ ನೀವು ಮತ್ತರಾಗ ಬೇಡಿರಿ. ಯಾವಾಗಲೂ ಶಾಂತಿಯಿಂದಲೂ, ತಪಸ್ಸಿನಿಂದಲೂ, ಜ್ಞಾನ ದಿಂದಲೂ ಪ್ರಕಾಶಮಾನವಾದ ವಿಷ್ಣುಭಕ್ತರನ್ನೂ ಮತ್ತು ಬ್ರಾಹ್ಮಣ

ರನ್ನು ಧಿಕ್ಕರಿಸಬೇಡಿರಿ. ಬ್ರಾಹ್ಮಣಪ್ರಿಯನೂ, ಪುರಾತನನೂ ಆದ ದೇವೇಂದ್ರನು ಯಾವ ಶ್ರೀವಾಸುದೇವರ ಅನುಗ್ರಹದಿಂದ ನಿತ್ಯವಾದ ಐಶ್ವರ್ಯವನ್ನೂ, ಲೋಕೋತ್ತರವಾದ ಕೀರ್ತಿಯನ್ನು ಹೊಂದಿದನೊ, ಮತ್ತು ಸರ್ವಾಂತರ್ಯಾಮಿಯಾದ ಹರಿಯು ಯಾವ ಬ್ರಾಹ್ಮಣಕುಲವನ್ನು ಸೇವಿಸುವುದರಲ್ಲಿ ಸಂಪೂರ್ಣ ಸಂತೋಷಗೊಳ್ಳುವನೊ, ಅಂತಹ ಬ್ರಹ್ಮಕುಲವನ್ನು ಸೇವಿಸಿರಿ.

ಗುಣಾಲಯಂ ಶೀಲಧನಂ ಕೃತಜ್ಞಂ
ಶ್ರದ್ಧಾತ್ಯಯಂ ಸಂವೃಣುತೇನು ಸಂವದಃ ।
ಪ್ರಸೀದತಾಂ ಬ್ರಹ್ಮಕುಲಂ ಗವಾಂಚ
ಜನಾರ್ದನಃಸಾನುಚರಶ್ಚ ಮಧ್ಯಂ ॥

ಗುಣಗಳಿಗೆ ನೆಲೆಯಾದವನನ್ನೂ, ಒಳ್ಳೆಯ ನಡತೆಯೆ ಧನವಾಗಿ ಪೊಂದಿದವನನ್ನೂ ಸಂಪತ್ತುಗಳು ತಾನೆ ಬಂದು ಹೊಂದುತ್ತಂವೆ. ಮೇಲಿ ಹೇಳಿದ ಸುಗುಣಗಳಾದವೊ ಬ್ರಾಹ್ಮಣರ ಅನುಗ್ರಹದಿಂದ ದೊರೆಯತಕ್ಕವುಗಳಾಗಿವೆ. ಆದುದರಿಂದ ಬ್ರಾಹ್ಮಣರ ಕುಲವೂ, ಗೋವುಗಳ ಕುಲವೂ, ಭಕ್ತಪರಿವಾರದಿಂದ ಕೂಡಿದ ಶ್ರೀವಾಸುದೇವನೂ, ನನಗೆ ನಿರಂತರವೂ ಪ್ರಸನ್ನರಾಗಿರಲಿ.

ತೇಷಾಮಹಂ ಪಾದಸರೋಜರೇಣು
ಮಾರ್ಯಾವಹೇಯಾಧಿಕಿರೀಟ ಆಯುಃ ।
ಯಂ ನಿತ್ಯದಾ ಬಿಭ್ರತ ಆಶು ಪಾಪಂ
ನಶ್ಯತ್ಯಮುಂ ಸರ್ವಗುಣಾ ಭಜಂತಿ ॥

ಆರ್ಯರೆ ! ಯಾವ ಬ್ರಾಹ್ಮಣರ ಪಾದಧೂಳಿಯನ್ನು ಧರಿಸಿದವರು ಸರ್ವಪಾಪಗಳನ್ನೂ ಕಳೆದುಕೊಂಡು ಎಲ್ಲ ಸದ್ಗುಣಗಳನ್ನು ಪಡೆಯುವರೊ, ನಾನು ಆಯುಸ್ಸಿರುವವರಿವಿಗೂ ಆ ಬ್ರಾಹ್ಮಣರ ಪಾದಧೂಳಿಯನ್ನು ತಲೆಯಲ್ಲಿ ಧರಿಸುವೆನು ಎಂದು ಹೃದಯಂಗಮವಾಗಿರುವಂತೆ ಬೋಧಿಸಿದನು. ಸಭಿಕರು ಬಹು ಸಂತೋಷಪಟ್ಟರು. ಇಂತಹ ಉತ್ತಮೋಪದೇಶ ಮಾಡಿದುದಕ್ಕಾಗಿ ಚಕ್ರವರ್ತಿಯನ್ನು ಕೊಂಡಾಡಿದರು.

ಅಯ್ಯಾ ! ಮಹಾರಾಜನೆ ! ಮಗನಿಂದ ತಂದೆಯು ಉತ್ತಮ ಮಗತಿಯನ್ನು ಹೊಂದುತ್ತಾನೆಂದು ಹೇಳುವ ''ಪುತ್ರೇಣ ಜಯತೇ ಲೋಕ ಇತಿ ಸತ್ಯವತೀ ಶ್ರುತಿಃ ಬ್ರಹ್ಮದಂಡಹತಃ ಪಾಪೋ ಯದ್ವೇನೋ ಅತ್ಯತರತ್ತಮಃ'' ಇದೇ ಮೊದಲಾದ ಶ್ರುತಿಗಳು, ಜನರಾಡುವ ಕೆಯೂ ಇಂದು ಸತ್ಯವಾಯಿತು. ಬ್ರಹ್ಮದಂಡದಿಂದ ಸತ್ತು ಮಹಾಪಾಪಕ್ಕೆ ನೆಲೆಯಾಗಿದ್ದ ನಿಮ್ಮ ತಂದೆಯಾದ ವೇನರಾಜನು ತಮಸ್ಸಿನಿಂದ ಬಿಡುಗಡೆಯಾದುದೆ ಇದರ ನಿದರ್ಶನವು. * ಪೂರ್ವದಲ್ಲಿ ಹೀಗೆಯೆ ದುಷ್ಟನಾದ ಹಿರಣ್ಯಕಶಿಪುವು ಭಗವನ್ನಿಂದೆಯಿಂದ ತಮಸ್ಸನ್ನು ಹೊಂದಬೇಕಾಗಿದ್ದವನು ಮಗನಾದ ಪ್ರಹ್ಲಾದನ ಮಹಿಮೆಯಿಂದ ಉತ್ತಮ ಲೋಕವನ್ನು ಹೊಂದಿದನು. ಅಯ್ಯಾ ! ನೀರಾಗ್ರೇಸರನೆ ! ಭೂದೇವಿಯ ತಂದೆಯೆ ! ಸರ್ವಲೋಕಗಳಿಗೂ ಮಂಗಳವನ್ನುಂಟುಮಾಡುತ್ತಿರುವ, ಪರಮಾತ್ಮನಲ್ಲಿಯೂ, ಅತನಿಗೆ ಬಹಳ ಬೇಕಾದ ಬ್ರಾಹ್ಮಣರಲ್ಲಿಯೂ, ನಿನಗೆ ನಿರತಿಶಯವಾದ ಭಕ್ತಿಯಿರುವುದರಿಂದ ನೀನು ಶಾಶ್ವತ

* ಪುತ್ರೇಣ ಜಯತೇ ಲೋಕ ಇತಿ ಸತ್ಯವತೀಶ್ರುತಿಃ| ಬ್ರಹ್ಮದಂಡಹತಃ ಪಾಪೋಯದ್ವೇನೋ ಅತ್ಯತರತ್ತಮಃ|| ಎಂಬುದುಇದಕ್ಕೆ ಮೂಲವು. ಇಲ್ಲಿ ಪಾಪಿಯಾದ ವೇನನು ಮಗನ ಸತ್ಕರ್ಮಗಳ ಪ್ರಭಾವದಿಂದ ತಮಸ್ಸಿನಿಂದ ಪಾರಾದುನೆಂದಿದೆ. ''ಹಿರಣ್ಯಕಶಿಪುಶ್ಚಾಪಿ '' ಇತ್ಯಾದಿ ಮೇಲೆ ಹೇಳಿರುವ ಅರ್ಧವನ್ನೊಳಗೊಂಡಿರುವ ಶ್ಲೋಕವು ಇದರ ಮುಂದಿನದೆ. ಇವುಗಳ ಆಪಾತಾರ್ಥವು, ಸಿದ್ಧಾಂತವಿರುದ್ಧವು, ಮತ್ತು ಲೌಕಿಕನ್ಯಾಯ ವಿರುದ್ಧವು. ಜೀವರು ಸಾತ್ವಿಕ ರಾಜಸ, ತಾಮಸರೆಂದು ಮೂರುಬಗೆಯವರಿದ್ದಾರೆ. ಒಬ್ಬ ಪ್ರಾಣಿಯಲ್ಲಿ ಈ ಮೂರುಬಗೆಯ ಜೀವರಿಗೂ ಸಮಾನೇಶ ಉಂಟು. ಆದುದರಿಂದ ವೇನನು ತಮಸ್ಸನ್ನು ದಾಟಿದನು ಎಂದರೆ ಆ ಮೂರು ಜೀವರನ್ನೂ ತೆಗೆದುಕೊಳ್ಳಬೇಕು. ವೇನನಲ್ಲಿರುವ ರಾಜಸ ಜೀವನು ಪೃಥುಗಣದೊಡನೆ ಸ್ವರ್ಗವನ್ನು ಹೊಂದಿದನು. ತಾಮಸ ಜೀವನು ತಮಸ್ಸಿಗೆ ಹೋದನು. ಸಾತ್ವಿಕಜೀವನು ಪೃಥುರೂಪವನ್ನು ಹೊಂದಿದನು. ''ವೇನಸ್ಯೊರಾಜಸೊಜೀವಃ ಪೃಥುನಾ ಸ್ವರ್ಗತಿಂಗತಃ | ಸ್ವಯಂತುತಮ ಏವಾಪ ಸಾತ್ವಿಕಃ ಪೃಥುತಾಮಗಾತ್ '' ಎಂಬ ಸ್ಮೃತಿಯಿಂದ ನಾವು ಬರದಿರುವರ್ಥವು ಸಿದ್ಧಿಸುತ್ತದೆ. ಪಾಪಿಯಾದ ವೇನನು ತಮಸ್ಸನ್ನು ದಾಟಿದನೆಂಬುದು ಪ್ರಕರಣಸಾಪರ. ಸತ್ಯವಲ್ಲವೆಂತಾ

ವಾಗಿ ಬಾಳು. ದಯಾಳುಗಳಾದ ಮಹಾತ್ಮರಿಗೆ ಪ್ರಜಾನುರಾಗವು ಸ್ವಭಾವಿಕವಾದುದು. ಅದರಿಂದ ನಿನ್ನ ಛತ್ರಚ್ಛಾಯೆಯಲ್ಲಿ ಜೀವಿಸುತ್ತಿರುವ ಜನಗಳಿಗೆ ನೀನುಹೀಗೆ ಉಪದೇಶಮಾಡಿದುದು ಏನೂ ಹೆಚ್ಚಿನದಲ್ಲ. ಇಷ್ಟುಕಾಲದವರಿವಿಗೂ ಜನರು ತತ್ತ್ವವನ್ನರಿಯದೆ ದಿಙ್ಮೂಢರಾಗಿದ್ದರು. ತಿಳಿಯಸಿದ್ದವರು ಸಹ ಅದನ್ನು ಅನುಷ್ಠಾನಮಾಡಲು ತೊಂದರೆಗಳಿಂದ ಸುಮ್ಮನಿದ್ದರು. ಈಗ ಸುವರ್ಣಪುಷ್ಪಕ್ಕೆ ಸುವಾಸನೆಯುಂಟಾದಂತಾಯಿತು. ಯಾರು ಬೇಕಾದರೂ ತಮಗೆ ಸಮ್ಮತವಾದ ಸತ್ಕಾರ್ಯವನ್ನು ನಿರ್ಭಯವಾಗಿ ಮಾಡಬಹುದು. ಅದನ್ನು ಶ್ರೀಹರಿಗೆ ಅರ್ಪಿಸಬಹುದು. ಪ್ರಜಾರಂಜಕನೂ, ಕರುಣಾಳುವೂ ಆದ ನಿನ್ನಲ್ಲಿ ಯಾರು ಬೇಕಾದರೂ ತಮ್ಮ ಸುಖದುಃಖಗಳನ್ನು ಹೇಳಿಕೊಳ್ಳಬಹುದು. ಪ್ರಜೆಗಳಿಗೆ ಬೇಕಾದ ಸೌಕರ್ಯಗಳನ್ನೆಲ್ಲಾ ಕಲ್ಪಿಸಿಕೊಟ್ಟಿರುವೆ. ಜೀವರುಗಳಿಗೆ ಇದಕ್ಕಿಂತಲೂ ಸೌಕರ್ಯವು ಯಾವಾಗಲೂ ಯಾವದೂ ಬೇಕಾಗದು. ನಿನ್ನಿಂದ ಸನಾಥರಾದ ನಾವು ದೇವರಿಂದಲೆ ಸನಾಥರಾದಂತಾದೆವು. ಬ್ರಾಹ್ಮಣ ರೂಪದಿಂದ ಕ್ಷತ್ರಿಯಕುಲವನ್ನೂ, ಕ್ಷತ್ರಿಯ ರೂಪದಿಂದ ಬ್ರಾಹ್ಮಣಕುಲವನ್ನೂ ಸಲುಹುವುದಲ್ಲದೆ ಈ ಎರಡುರೂಪಗಳಿಂದ ಪ್ರಪಂಚವನ್ನು ರಕ್ಷಿಸುತ್ತಿರುವ ನಿನ್ನಂತರ್ಯಾಮಿಯಾದ ಶ್ರೀಹರಿಗೆ ಅನಂತಾನಂತ ಪ್ರಣಾಮಗಳು, ಎಂದು ದೇವತೆಗಳೇ ಮೊದಲಾದವರು ಪೃಥುಚಕ್ರವರ್ತಿಯನ್ನು ಹೊಗಳಿದರು.

ಸನಕಾದಿಗಳು ಬಂದುದು.

ಪೃಥುಚಕ್ರವರ್ತಿಯ ಸಭೆಯು ಮೇಲೆ ಹೇಳಿದಂತೆ ವಿಜೃಂಭಣೆಯಿಂದ ನಡೆಯುತ್ತಿತ್ತು. ದೇವ ಬ್ರಾಹ್ಮಣರು ಆತನ ಕೀರ್ತಿಯನ್ನು ಕೊಂಡಾಡುತ್ತಿದ್ದರು. ಆ ಕಾಲಕ್ಕೆ ಸರಿಯಾಗಿ ಸೂರ್ಯನಂತೆ ಪ್ರಕಾಶ

ದರೂ ಸಮಾಧಾನವನ್ನು ಹೇಳಬಹುದು. ಹಿರಣ್ಯಕಶಿಪು ಮೊದಲಾದ ದೈತ್ಯರ ವಿಚಾರಗಳಲ್ಲಿಯೂ, ಮೇಲೆ ಹೇಳಿದ ಸಮಾಧಾನಗಳೆ. ಈ ವಿಷಯಗಳನ್ನು ಇನ್ನೂ ವಿಸ್ತಾರವಾಗಿ ತಿಳಿದುಕೊಳ್ಳಲಪೇಕ್ಷೆಯುಳ್ಳವರು ನಮ್ಮ ಪತ್ರಿಕೆಯಲ್ಲಿ ಬಂದಿರುವ "ಜೀವದ್ವಯಾವೇಶ-ಜೀವತ್ರೈವಿದ್ಯನಮರ್ಧನ" ಎಂಬ ಬರವಣಿಗೆಗಳನ್ನು ನೋಡಬಹುದು.

ಮಾನರಾದ ನಾಲ್ಕುಜನ ಋಷಿಗಳು ಅಲ್ಲಿಗೆ ಬಂದರು. ಅವರು ತಮ್ಮ ದಿವ್ಯತೇಜಸ್ಸಿನಿಂದಲೇ "ತಾವು ಸನಕಾದಿಗಳು" ಎಂಬ ಕುರುಹುವನ್ನು ತೋರುವಂತಿದ್ದರು. ಅವರು ಮೇಲಿನಿಂದ ಇಳಿಯುವಾಗಲೇ ವೈಥುರಾಜನು ಅರಿತುಕೊಂಡನು. ವೈಥುವು ಪೃಥ್ವಿಯ ದರ್ಶನದಿಂದ ಊರ್ಧ್ವಗಮನೋನ್ಮುಖವಾದ ತನ್ನ ಪ್ರಾಣಾದಿಗಳನ್ನು ಸಮಾಧಾನ ಪಡಿಸಿ ಸಭಿಕರೋಡನೆ ಛಟ್ಟನೆ ಮೇಲಕ್ಕೆದ್ದನು. ಅನಂತರ ಮುಖ್ಯ ದೆಯಿಂದ ಇನಿಗೊಂಡು ಅರ್ಘ್ಯಾದಿಗಳಿಂದ ಯಥಾವಿಧಿಯಾಗಿ ಪೂಜೆ ಸಿದನು. ಸನಕಾದಿಗಳು ಸುವರ್ಣಪೀಠದಲ್ಲಿ ಕುಳಿತು ವೇದಿಯ ಮಧ್ಯ ದಲ್ಲಿ ಪ್ರಜ್ವಲಿಸುವ ಅಗ್ನಿಗಳಂತಿದ್ದರು. ರಾಜನು ಅವರನ್ನು ನೋಡಿ "ಭೋ ಕಲ್ಯಾಣನಿಧಿಗಳಿರಾ! ಮಹಾಯೋಗಿಗಳಿಗೂ ನಿಮ್ಮ ದರ್ಶನವು ದುರ್ಲಭನಾದುದು. ನಿಮ್ಮನ್ನು ನೋಡಿದ ನಾನು ಎಷ್ಟು ಪುಣ್ಯವನ್ನು ಮಾಡಿದೆನೋ ತಿಳಿಯದು. ತಮ್ಮಂತಹ ಬ್ರಾಹ್ಮಣರು, ಶ್ರೀಹರಿಯು, ಮಹಾದೇವನು ಯಾರನ್ನು ಅನುಗ್ರಹಿಸುವರೋ ಅವರಿಗೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಒಳ್ಳೆಯದಾಗುವುದು. ನಿಮ್ಮಂತಹ ಮಹನೀಯರು ಯಾವ ಗೃಹಸ್ಥರ ಮನೆಗಳಿಗೆ ದಯ ಮಾಡಿ ಅವರ ಸತ್ಕಾರಗಳನ್ನು ಸ್ವೀಕರಿಸುತ್ತಾರೆಯೋ ಅಂತಹ ಸಂಸಾರಿಗಳು ಧನ್ಯರು. ತಮ್ಮಂತಹ ಭಾಗವತೋತ್ತಮರ ಪಾದಧೂಳಿಯು ಯಾರಮನೆಗೆ ಸಂಭವಿಸುವುದಿಲ್ಲವೋ ಆ ಮನೆಯು ಸಂಪತ್ತಿನಿಂದ ಕೂಡಿದುದಾದರೂ ಕಾಡಿಗೆ ಸಮವಾದುದು. ಎಲೈ ಮಹನೀಯರೇ! ಚಿಕ್ಕವರಾಗಿರುವಾಗಲೇ ಮುಮುಕ್ಷುಗಳಾದ ನೀವು ಸುಖವಾಗಿ ಬಂದಿರಾ? ಹಗಲಿರಳೂ ಶಬ್ದಾದಿವಿಷಯಗಳೇ ಮಹಾಪುರುಷಾರ್ಥವೆಂದು ತಿಳಿದು ಈ ಸಂಸಾರಕೂಪದಲ್ಲಿ ಬಿದ್ದಿರುವ ನಮ್ಮ ಕುಶಲವನ್ನೂ ಕೇಳತಕ್ಕುದೇ ಅಲ್ಲ. ಏಕೆಂದರೆ—ನಮಗೆ ಕುಶಲವೇ ಇಲ್ಲ. ಅಭಯನೂ ಅನಂದಾದಿ ಗುಣಮಯನೂ ಆದ ಶ್ರೀಹರಿಯನ್ನು ಹೊಂದಿದ ನಿಮಗೆ ಯಾವಬಗೆಯ ಅಕ್ಷೇಮಕ್ಕೂ ಕಾರಣವಿಲ್ಲ. ಲೋಕರೂಢಿಯಂತೆ ಪ್ರಶ್ನೆಮಾಡಿದೇನೆ. ನೀವು ಸಂಸಾರಕೂಪದಲ್ಲಿ ಕಷ್ಟಪಡುವ ಜನರನ್ನು ಕಾಪಾಡುವುದಕ್ಕಾಗಿಯೇ ಸಂಚರಿಸುತ್ತಿರುತ್ತೀರಿ. ಜನಗಳಿಗೆ

ಯಾವ ಉಪಾಯದಿಂದ ಬೇಗ ಕ್ಷೇಮವುಂಟಾಗುವುದೋ ಅದನ್ನು ಹೇಳಬೇಕು ಎಂದು ವಿನಯದಿಂದ ಪ್ರಾರ್ಥಿಸಿಕೊಂಡನು.

ಸನತ್ಕುಮಾರರು ರಾಜನನ್ನು ಸಂಬೋಧಿಸಿ, ಎಲೈ ರಾಜನೇ! ನೀನು ತಿಳಿದವನಾದರೂ ಪ್ರಪಂಚಕ್ಕೆ ಹಿತವಾಗಬೇಕೆಂಬುದಕ್ಕಾಗಿ ಹೀಗೆ ಪ್ರಶ್ನೆಮಾಡಿದ್ದೀಯೆ ಬಹಳ ಸಂತೋಷವಾಯಿತು. ಲೋಕದಲ್ಲಿ ಸಾಧುಗಳ ಬುದ್ಧಿಯು ಯಾವಾಗಲೂ ಪರೋಪಕಾರದಲ್ಲಿಯೇ ನಿರತವಾಗಿರುವುದು. ಸಾಧುಗಳಲ್ಲಿ ನಡೆಯುವ ಪ್ರಶ್ನೆಗಳೂ, ಉತ್ತರಗಳೂ ಸಹ ಎಲ್ಲರಿಗೂ ಕ್ಷೇಮಸ್ಕರಗಳಾಗಿರುವುವು, ಅದರಿಂದ ಸಾಧುಸಂಗವು ಸಂಪಾದ್ಯವು. ಎಲೈ ರಾಜನೇ! ನೀನಾವಾಗಲೂ ಶ್ರೀಹರಿಯ ಪಾದಕಮಲಗಳ ಗುಣಗಳನ್ನು ಬಣ್ಣಿಸುವುದರಲ್ಲಿ ಸಂಪೂರ್ಣ ವಿಶ್ವಾಸವುಳ್ಳವನಾಗಿರುವೆ. ಇದು ಸಾಮಾನ್ಯವಾದುದಲ್ಲ. ಎಲ್ಲರಿಗೂ ಸಾಧ್ಯವಾದುದೂ ಅಲ್ಲ. ಮನಶ್ಶಲ್ಯವನ್ನು ಹೋಗಲೊಳಿಸಲು ಇದಕ್ಕೆ ಸಮನಾದುದು ಮತ್ತಾವುದೂ ಇಲ್ಲ. ಎಲ್ಲಾ ಶಾಸ್ತ್ರಗಳ ಸಾರವನ್ನೂ ಒಂದೇ ಮಾತಿನಿಂದ ಹೇಳುತ್ತೇನೆ ಕೇಳು. ಸರ್ವಗುಣಪೂರ್ಣನಾದ ಶ್ರೀಹರಿಯಲ್ಲಿ ಭಕ್ತಿಯೊಂದು, ಈ ಪ್ರಾಪಂಚಿಕವಾದ ಪದಾರ್ಥಗಳಲ್ಲಿ ವೈರಾಗ್ಯ ಒಂದು, ಇವೆರಡೇ ಸಕಲ ಪ್ರಾಣಿಗಳ ಕ್ಷೇಮಕ್ಕೂ ಕಾರಣವು. ವೈರಾಗ್ಯವು ಮಾತಿನಲ್ಲಿ ಹೇಳುವಷ್ಟು ಸುಲಭವಾದುದು ಅಲ್ಲ. ಭಕ್ತಿವೈರಾಗ್ಯಾದಿಗಳು ಅವರವರ ಯೋಗ್ಯತೆಗೆ ತಕ್ಕಂತೆ ದೊರೆಯುವೇಕಲ್ಲದೆ ಎಲ್ಲರಿಗೂ ಒಂದೇಸಮನಾಗಿ ದೊರೆಯುವುದಿಲ್ಲ. ಇವನ್ನು ಪಡೆಯತಕ್ಕವರು ಶ್ರದ್ಧಾಳುಗಳಾಗಿರಬೇಕು. ಸ್ವದರ್ಮನಿರತರಾಗಿರಬೇಕು. ತತ್ತ್ವವಿಚಾರವನ್ನು ಮಾಡುತ್ತಿರಬೇಕು. ಯಮನಿಯಮಾದಿಗಳನ್ನು ಮಾಡಬೇಕು. ತಪಸ್ಸಿದ್ಧರಾದವರನ್ನು ಪೂಜಿಸಬೇಕು. ನಿತ್ಯವೂ ಪುಣ್ಯಕೀರ್ತಿಯಾದ ಶ್ರೀಹರಿಯ ಚರಿತ್ರವನ್ನು ಕೇಳುತ್ತಿರಬೇಕು. ಕೇವಲ ವ್ಯವಸಂಗ್ರಹದಲ್ಲಿ ಬುದ್ಧಿಯುಳ್ಳ ಜನಗಳಲ್ಲಿಯೂ, ಸ್ವಚ್ಛಂದನವನಿತಾದಿ ಭೋಗಾಸಕ್ತರಲ್ಲಿಯೂ ಸೇರಬಾರದು. ಯಾವ ಪ್ರಾಣಿಗಳನ್ನೂ ನೋಯಿಸಬಾರದು. ಕಪಟಿಗಳಿಂದ ಜೊಡಿ ಸಾಧುವಾಗಿರಬೇಕು. ಅಂತರಿಂದ್ರಿಯ ಬಹಿರಿಂದ್ರಿಯಗಳನ್ನು

ಜಯಿಸಬೇಕು. ಮಾರ್ಗಾಂತರಗಳನ್ನು ದೂಷಿಸಬಾರದು. ಸೀತ, ಉಷ್ಣ, ಸುಖ, ದುಃಖ ಮೊದಲಾದ ದ್ವಂದ್ವಗಳಿಗೆ ಹೆದರಬಾರದು. ಇಂತಹ ಸಾಧನಸಂಪತ್ತಿಯನ್ನು ಸಂಪಾದಿಸಿಕೊಂಡವನಿಗೆ ಭಗವದ್ಗುಣಗಳನ್ನು ವರ್ಣಿಸುವುದರಿಂದ ಭಕ್ತಿಯು ಹೆಚ್ಚಾಗುವುದು. ಈ ಪ್ರಪಂಚದಲ್ಲಿ ವಿರಕ್ತಿಯೂ ಉಂಟಾಗುವುದು. ಇದೇರೀತಿಯಾಗಿ ಸದ್ಧರ್ಮಾಸಕ್ತನಾದವನಿಗೆ ಸಕಲಾನಿಷ್ಟನಿವೃತ್ತಿಯಾಗಿ ಮೋಕ್ಷವೇ ಆಗುವುದು. ದೇಹಾದಿಗಳಲ್ಲಿನ ಪ್ರೀತಿಯೇ ಸಂಸಾರಕ್ಕೆ ಕಾರಣವು. ಮನುಷ್ಯನು ವಿಷಯಗಳನ್ನು ಚಿಂತಿಸಿದಹಾಗೆಲ್ಲಾ ವಿಷಯಗಳು ಇಂದ್ರಿಯಗಳನ್ನು ತಮ್ಮಕಡೆಗೆ ಎಳೆದುಕೊಳ್ಳುವುವು. ಇಂದ್ರಿಯಗಳು ವಿಷಯಗಳಿಗೆ ವಶವಾದ ಕೂಡಲೇ ಮನಸ್ಸು ಇಂದ್ರಿಯಗಳಿಗೆ ಅಡಿಯಾಳಾಗಿ ವಿಷಯಗಳಿಗೆಳಗುವುದು. ಆ ಮನಸ್ಸು ಬುದ್ಧಿಯಲ್ಲಿರುವ ಯುಕ್ತಾಯುಕ್ತ ವಿಚಾರಶಕ್ತಿಯನ್ನು ಹಾಳುಮಾಡುವುದು. ವಿಚಾರಶಕ್ತಿಯು ನಾಶವಾದ ಕೂಡಲೇ ಹಿಂದುಮುಂದಣ ಸಂಗತಿಗಳ ನೆನಪು ಹೋಗುವುದು. ಕೂಡಲೇ ಜ್ಞಾನ ನಾಶವಾಗುವುದು. ಜ್ಞಾನ ನಾಶವಾದರೆ ಸರ್ವನಾಶವಾದಂತೆಯೇ. ಆದಕಾರಣ ಯಾರೂ ಇಂದ್ರಿಯಗಳ ಪ್ರೀತಿಗಾಗಿ ನಿರಂತರವೂ ಚಿಂತಿಸಬಾರದು. ಇಂದ್ರಿಯಾಸಕ್ತರು ಮೇಲೆಹೇಳದಂತೆ ಸಕಲ ಪುರುಷಾರ್ಥಗಳನ್ನೂ ಕಳೆದುಕೊಳ್ಳುವರು. ಅಜ್ಞಾನವೆಂಬ ಕತ್ತಲೆಯನ್ನು ದಾಟಬೇಕೆಂದೆಣಿಸುವರು ಯಾವಾಗಲೂ ವಿಷಯಸಂಗವನ್ನು ಮಾಡಬಾರದು. ಪುರುಷಾರ್ಥಗಳಲ್ಲಿಯೂ ಮೋಕ್ಷರೂಪವಾದ ಪುರುಷಾರ್ಥಕ್ಕೆ ಪ್ರಯತ್ನಿಸಬೇಕು. ನಿಕ್ಕ ಮೂರೂ ನಶ್ವರಗಳಾದವುಗಳು. ಮತ್ತು (ಆ ಮೋಕ್ಷಸಾಧನಗಳು) ನೀನು ಹೀಗೆ ವಿವೇಕವುಳ್ಳವನಾಗಿ ಈ ಸಂಸಾರಸಾಗರವಿಂದ ಪಾರಾಗೆಂದು ಹೇಳಿದನು. ಇದೆಲ್ಲವನ್ನು ಕೇಳುವುದರಿಂದ ಚಕ್ರವರ್ತಿಗೆ ಪರಮಾನಂದವಾಯಿತು. ಆತನು ಸೆನಕರನ್ನು ಗುರುದಕ್ಷಿಣೆಗಾಗಿ ಸಮಸ್ತಭೂಮಂಡಲವನ್ನು ತೆಗೆದುಕೊಳ್ಳಲು ಹೇಳಿದನು. "ಸೇನಾಪತ್ಯಂ ಚ ರಾಜ್ಯಂ ಚ ದಂಡನೇತೃತ್ವಮೇವಚ । ಸರ್ವಲೋಕಾಧಿಪತ್ಯಂಚ ವೇದಶಾಸ್ತ್ರವಿದರ್ಹತಿ" ಎಲೈ ಮಹಾನುಭಾವರೇ ! ನಾನು ಮೋಕ್ಷ

ದಿಂದ ಈ ರಾಜ್ಯಾದಿಗಳು ನನ್ನವೆಂದು ತಿಳಿದು ತಮಗೆ ತೆಗೆದುಕೊಳ್ಳಲು ಹೇಳಿದೆ; ಕ್ಷಮಿಸಬೇಕು ಎಲ್ಲವೂ ತಮ್ಮವೆ. ಅದರಲ್ಲಿಯು ಸೈನ್ಯಾಧಿಪತ್ಯವೂ, ದಂಡಾಧಿಕಾರವೂ, ಕಡೆಗೆ ಸರ್ವಲೋಕಾಧಿಪತ್ಯವೂ ಕೂಡ ವೇದಶಾಸ್ತ್ರಾಗಳನ್ನು ತಿಳಿದ ತಮ್ಮಂತಹ ಬ್ರಾಹ್ಮಣರಿಗೆ ಹೊರತು ಇತರರಿಗೆ ಸಲ್ಲಲಾರದು ಎಂದು ಪ್ರಾರ್ಥಿಸಿಕೊಂಡನು. ಸನಕಾದಿಗಳು ಅತನ ವಿನಯವನ್ನು ಪ್ರಶಂಸಿಸುತ್ತಾ ಎಲ್ಲರೂ ನೋಡುತ್ತಿದ್ದಂತೆಯೇ ಹೊರಟುಹೋದರು.

ಅನಂತರ ವೈಥುಚಕ್ರವರ್ತಿಯು ಅವರ ಉಪದೇಶದಂತೆ ನಡೆಯುತ್ತಾ ಬಂದನು. ಮಾಡಿದ ಧರ್ಮಗಳೆನ್ನು ಭಗವಂತನಿಗೆ ಸಮರ್ಪಿಸುತ್ತಾ ತನ್ನ ಪ್ರಜೆಗಳು ಅದರಂತೆಯೇ ನಡೆಯಲು ಕಟ್ಟು ಮಾಡಿದನು. ಅತನಿಗೆ ಅರ್ಚಿ ಎಂಬ ಹೆಂಡತಿಯಲ್ಲಿ ಅನುರೂಪವಾದ ವಿಜಿತಾಶ್ವ, ಧೂಮ್ರಕೇಶ, ಹರ್ಯಕ್ಷ, ದ್ರವಿಣ, ವೃಕ ಎಂಬ ಐದು ಜನ ಗಂಡುಮಕ್ಕಳಾದರು. ಅತನು ಸೌಮ್ಯಾದಿ ಗುಣಗಳಿಂದ ಪ್ರಜೆಗಳನ್ನು ಸಂತೋಷಪಡಿಸುತ್ತಾ ಚಂದ್ರನಂತೆ ರಾಜನೆಂಬ ನಿಜವಾದ ಹೆಸರನ್ನು ಸಂಪಾದಿಸಿದನು. ಬಿಸಿಲುಕಾಲದಲ್ಲಿ ನೀರನ್ನು ಹೀರಿ ಮಳೆಗಾಲದಲ್ಲಿ ಮಳೆಗರೆಯುವ ಸೂರ್ಯನಂತೆ ಜನಗಳಿಂದ ಧನವನ್ನು ಸಂಗ್ರಹಿಸಿ ದುರ್ಭಿಕ್ಷಕಾಲದಲ್ಲಿ ಅದರಿಂದ ಅವರನ್ನು ಕಾಪಾಡುತ್ತಿದ್ದನು. ಪರಾಕ್ರಮದಲ್ಲಿ ಅಗ್ನಿಯಂತೆಯು, ಇಂದ್ರನಂತೆ ಅಜೇಯ್ಯನಾಗಿಯೂ ಭೂಮಿಯಂತೆ ಕ್ಷಮೆಯುಳ್ಳವನಾಗಿಯೂ, ಸ್ವರ್ಗದಂತೆ ಸಕಲಾಭೀಷ್ಟಗಳನ್ನು ಕೊಡುವನಾಗಿಯೂ, ಎಲ್ಲಾ ಸದ್ಗುಣಗಳುಳ್ಳ ಆದಿರಾಜಾವತಾರಿಯಾದ ವೈಥುವು ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು.

ಪ್ರಜಾರಂಜನೆಯಿಂದ ರಾಜ್ಯಭಾರ ಮಾಡುತ್ತಿದ್ದ ವೈಥುವು ತಾನು ಮುದುಕನಾದವರಿಂದ ರಾಜ್ಯವನ್ನು ಮಕ್ಕಳಿಗೆ ಒಪ್ಪಿಸಿದನು. ತನ್ನ ಗಲಿಕೆಯಿಂದ ಬೋದಿಸುವಂತಿರುವ ಪುಗಳಾದ ಭೂಮಿಯಲ್ಲಿ ವೈಥುವಿನ ವಿಖ್ಯಾತಿ ಬಹಳ. ಅತನು ತನ್ನ ಮಕ್ಕಳಿಗೆ ಭೂಪಾಲನೆಯ ವಿಷಯದಲ್ಲಿ ಬಹುವಾಗಿ ಹೇಳಿದನು. ಪ್ರಜೆಗಳೆಲ್ಲರೂ ಅತನ ವಿಯೋಗವನ್ನಾಗಿ ತಲ್ಲಣಿಸುತ್ತಿದ್ದರು. ವೈಥುಚಕ್ರವರ್ತಿಯು ಅದ್ಭಾವೃಧನ್ನೂ

ನಡ್ಡಿಮಾಡದೆ ಹೆಂಡತಿಯೊಡನೆ ತಪಸ್ಸಿಗಾಗಿ ಹೊರಟುಹೋದನು. ಆತನು ಆ ವನವಲ್ಲಿಯೂ ಯಾವ ವಿಘ್ನಗಳಿಗೂ ಒಳಗಾಗಲಿಲ್ಲ. ತನ್ನ ನಿಯಮಗಳನ್ನು ಬಿಡದೆ ಮೊದಲಿನಂತೆ ತಪಸ್ಸು ಮಾಡಿದನು. ಪಕ್ವವನ್ನಾಹಿಗಳನ್ನು ಬಿಟ್ಟು ಕೆಲವು ದಿವಸ ಹಣ್ಣುಸೊಪ್ಪುಗಳನ್ನು ತಿನ್ನುತ್ತಿದ್ದನು. ಆಮೇಲೆ ಅದನ್ನು ಬಿಟ್ಟು ವೈಧುವು ವಾಯುಭಕ್ಷಣೆ ಮಾತ್ರ ಮಾಡುತ್ತಾ ತಪಸ್ಸನ್ನು ಮಾಡಿದನು. ಮತ್ತು ವಾಕ್ ನಿಯಮವನ್ನು ಮಾಡಿದ್ದನು. ಆತನು ಸನತ್ಕುಮಾರನ ಮಾತಿನಂತೆಯೇ ಭಗವದುಪಾಸನೆಯನ್ನು ಮಾಡುತ್ತಾ ಬಂದನು. ಆತನಿಗೆ ಭಗವಂತನಲ್ಲಿ ಏಕಾಂತಭಕ್ತಿಯುಂಟಾಯಿತು. ಭಗವಂತನ ಸೇವೆಯಿಂದ ರಾಗಾದಿಗಳು ನಾಶವಾದವು. ಪರಮಾತ್ಮನ ಗುಣಶ್ರವಣಾದಿಗಳಿಂದ ಅದು ಮತ್ತು ಪೂರ್ಣವಾಯಿತು. ಭಕ್ತಿಯಿಂದ ವೈರಾಗ್ಯಸಹಕೃತವಾದ ಜ್ಞಾನವುಂಟಾಯಿತು. ಜ್ಞಾನಾನಂತರ ಶ್ರೀಹರಿಯ ಪ್ರಸಾದವುಂಟಾಯಿತು. ಇಲ್ಲಿಗೆ ವೈಧುಚಕ್ರವರ್ತಿಯು ಮಾಡಬೇಕಾಗಿದ್ದ ಕೆಲಸಗಳೆಲ್ಲವೂ ಪೂರೈಸಿದ್ದವು. ಆತನು ಯಾವ ಧರ್ಮಸಂಸ್ಥಾಪನೆಗಾಗಿ ಶ್ರೀಹರಿಯ ಅಂತದ ರಾಜರಾಜೇಶ್ವರನೆಂಬ ಹೆಸರಿಂದ ಅವತರಿಸಿದ್ದನೋ ಅದೆಲ್ಲವೂ ಪೂರೈಸಿತು.

ಆಮೇಲೆ ತನ್ನ ಶರೀರವನ್ನು ಬಿಟ್ಟನು. ಮಹಾರಾಣಿಯಾದ ಅರ್ಚಿಯು ಗಂಡನೊಡನೆ ಅರಣ್ಯಕ್ಕೆ ಬಂದಿದ್ದಳೆಂದು ಹಿಂದೆಯೇ ಹೇಳಿದ್ದೆವಷ್ಟೆ. ಆಕೆಯು ಭೂಶಯನ, ಮೂರುಕಾಲದಲ್ಲಿಯೂ ಸ್ನಾನ ಮೊದಲಾದ ವಾನಪ್ರಸ್ಥ ನಿಯಮಗಳಲ್ಲಿದ್ದಳು. ಪತಿಸೇವೆಯನ್ನು ಮಾಡುತ್ತಿದ್ದಳು. ಕಂದಮೂಲಾದಿ ಮುಷ್ಯಾಹಾರದಿಂದಿದ್ದರೂ ಸ್ವಲ್ಪವೂ ವ್ಯಥೆಪಡುತ್ತಿರಲಿಲ್ಲ. ಈಗ ಮಹಾರಾಣಿಯು ವೈಧುರಾಜನ ಶರೀರದಿಂದ ಬುದ್ಧಿ, ಇಂದ್ರಿಯ, ಪ್ರಾಣ ಮೊದಲಾದವುಗಳೆಲ್ಲವೂ ಬಿಟ್ಟುಹೋದುದನ್ನು ಕಂಡು ಸ್ವಲ್ಪಹೊತ್ತು ದುಃಖಪಟ್ಟು ವಿವೇಕದಿಂದ ಧೈರ್ಯವನ್ನು ತಂದುಕೊಂಡಳು. ಕೂಡಲೇ ಅಲ್ಲಿದ್ದ ಬಿಟ್ಟದ ನದಿಯಾವ ಡಲ್ಲಿ ಚಿತೆಯನ್ನು ಕೂಡಿಹಾಕಿದಳು. ಆಮೇಲೆ ಕಾಲೋಚಿತವಾದ ಕೆಲಸಗಳನ್ನು ಮಾಡಿ, ನದಿಯಲ್ಲಿ ಸ್ನಾನಮಾಡಿ ತನ್ನವರಿಗೆ ಜಲಾಂಜಲಿ

ಯನ್ನು ಕೊಟ್ಟಳು. ಸ್ವರ್ಗವಾಸಿಗಳಾದ ದೇವತೆಗಳನ್ನು ನಮಸ್ಕರಿಸಿ ಚಿತಿಯನ್ನು ಪ್ರದಕ್ಷಿಣೆ ಮಾಡಿ ಪತಿಯನ್ನು ಧ್ಯಾನಿಸುತ್ತಾ ಆ ಅಗ್ನಿಯನ್ನು ಪ್ರವೇಶ ಮಾಡಿದಳು. ಹೀಗಾಕೆಯು ತನ್ನ ಪತಿಯೊಡನೆ ಸಹಗಮನ ಮಾಡಿದ್ದನ್ನು ನೋಡಿ ದೇವನಾರಿಯರು ಪೂಮಳೆಗಳನ್ನು ಕರೆದರು. ಆಕೆಯ ಮಹಾಮಹಿಮೆಯನ್ನು ಒಬ್ಬರಿಗೆ ಹೇಳಿ ಕೊಂಡಾಡಿದರು. ಮಹಾಪತಿವ್ರತೆಯಾಗಿದ್ದ ಅರ್ಚಿದೇವಿಯು ತನ್ನ ಪತಿಯಾದ ಪೃಥುಚಕ್ರವರ್ತಿಯು ಹೊಂದಿದ್ದ ಉತ್ತಮಲೋಕವನ್ನು ಹೊಂದಿದಳು. ಆನಂದಲೋಕದಲ್ಲಿ ಆ ನಿತ್ಯದಂಪತಿಗಳು ಸುಖವಾಗಿದ್ದರು. ವಾಚಕರೆ! ವರ್ಣನಾತೀತ ಮಹಿಮೆಯುಳ್ಳ ಪೃಥುಚಕ್ರವರ್ತಿಯ ಚರಿತೆಯು ಒಂದೆರಡು ಮಾತುಗಳಿಂದ ಇಲ್ಲಿ ಮುಗಿದಂತೆ ಆಯಿತು. ಆತನು ಚಕ್ರವರ್ತಿಯು. ಅದರಲ್ಲಿಯೂ ವೈಥುವು (ದೊಡ್ಡವನು). ಇಂತಹ ದೊಡ್ಡ ನಮ್ಮ ಚಕ್ರವರ್ತಿಯ ತಿಳುವಳಿಕೆಯು ಆತನ ಪ್ರಜೆಗಳಾದ ಪಾರ್ಥಿವರಿಗೆ ಸ್ವಲ್ಪವಾದರೂ ಆಗಿರಬೆಂಬ ಉದ್ದೇಶ್ಯದಿಂದ ಬರವಣಿಗೆಯನ್ನು ಮಾಡಿರುವೆವು.

ಪೃಥುಚಕ್ರವರ್ತಿಯ ಪ್ರಥಿತಯಶವು ಆತನ ಪ್ರಜೆಗಳಲ್ಲಿ ನಿರಂತರವೂ ಪ್ರಕಾಶವಾಗಿರಲಿ! ಅಜ್ಞಾನಾಂಧಕಾರವನ್ನು ಹೋಗಗೊಳಿಸಲಿ! ಈ ಚರಿತ್ರೆಯು ವಾಚನದಿಂದ ಉಂಟಾದ ಸುಕೃತವು ಇನ್ನು ಮುಂದೂ ಇಂತಹ ನಮ್ಮ ಪ್ರಕಾಶನರ ವಿಷಯಗಣನ್ನು ತಿಳಿದುಕೊಳ್ಳುವುದರಲ್ಲಿ ರುಚಿಯನ್ನುಂಟುಮಾಡಲಿ. ಭಾರತೀಯರ ದೇವಭಕ್ತಿಯು ವೃದ್ಧಿಯಾಗಲಿ. ಶ್ರೀಹರಿಯು ತನ್ನ ಭಕ್ತರಾದ ಭಾರತೀಯರ ವಿಘ್ನಗಳನ್ನು ಹೋಗಗೊಳಿಸಿ ಅವರ ಅಭಿಲಷಿತವನ್ನು ಪೂರ್ಣಮಾಡಲಿ

ಕೆ. ರಾಮಚಂದ್ರಾಚಾರ್ಯರು.

ಫಲೋದ್ದೇಶವಿಲ್ಲದೆ ಸೃಷ್ಟಿಸಿದ ಪಕ್ಷದಲ್ಲಿ ಮೂರ್ಖನಾಗಬೇಕಾಗುವುದು, ಎಂಬ ಆಕ್ಷೇಪಗಳನ್ನು ಪರಿಹರಿಸುವುದಕ್ಕಾಗಿ ಕೆಲವು ಮತಗಳನ್ನು ಉದಹರಿಸಿ ಅವುಗಳ ನಿರಾಸ ಪೂರ್ವಕವಾಗಿ ಸಿದ್ಧಾಂತವನ್ನು ಹೇಳುತ್ತಾರೆ—ಕೆಲವು ವಾದಿಗಳು ಅತೃಪ್ತನಾದ ಈಶ್ವರನೇ ತನ್ನ ಸುಖಾನುಭವಕ್ಕೋಸ್ಕರ ಸೃಷ್ಟಿಮಾಡುವನೆಂದು ಹೇಳುವರು. ಕೆಲವರು ಪ್ರಳಯದಲ್ಲಿ ಈಶ್ವರನೊಬ್ಬನೇ ಇರುವನು. ಆದುದರಿಂದ ಈಶ್ವರನಿಗೆ ಬೇಸರದಿಂದ ಆಲಸ್ಯವು ಪ್ರಾಪ್ತವಾಯಿತು. ಆ ಆಲಸ್ಯ ಪರಿಹಾರಾರ್ಥವಾಗಿ ಎಂದರೆ ಮಹಾರಾಜನು ತನ್ನ ಆಲಸ್ಯಪರಿಹಾರಾರ್ಥವಾಗಿ ಕಂದುಕಾದಿಗಳಿಂದ ಹೇಗೆ ಕ್ರೀಡಿಸುವನೋ ಹಾಗೆಯೇ.

ಕ್ರೀಡಾ ಎಂದರೆ ಆಟವನ್ನಾಡಿಸುವದಕ್ಕಾಗಿ ಈ ಪ್ರಪಂಚವನ್ನು ಹರಿಯು ನಿರ್ಮಿಸಿರುವನೆಂದು ಹೇಳುವರು. ಈ ಬಗೆಯಾಗಿ ಹೇಳುವದು ಸಹ ಯುಕ್ತವಲ್ಲವೆಂಬ ಅಭಿಪ್ರಾಯದಿಂದ ಈ ಮಂತ್ರದ ಉತ್ತರಾರ್ಧವು ಪ್ರವೃತ್ತವಾಗಿರುತ್ತದೆ. ಪರಮೇಶ್ವರನ ಇಚ್ಛಾಪೂರ್ವಕವಾದ ಈ ಸೃಷ್ಟ್ಯಾದಿವ್ಯಾಪಾರವು ಸ್ವಭಾವವಾದುದೇ ಹೊರತು ಪೂರ್ವಾರ್ಧದಲ್ಲಿ ಹೇಳಿದಹಾಗೆ ಭೋಗಾರ್ಥವು ಮತ್ತು ಆಲಸ್ಯಪರಿಹಾರೋಪಯೋಗಿಯಾದ ಕ್ರೀಡಾರ್ಥವೂ ಅಲ್ಲವು. ಏಕೆಂದರೆ, ಆಪ್ತಕಾಮನಾದ ಎಂದರೆ ಪೂರ್ಣವಾದ ಸಕಲಕಾಮಗಳುಳ್ಳವನಾದುದರಿಂದ ಈ ಪರಮಾತ್ಮನಿಗೆ ಅತೃಪ್ತಿನಿಮಿತ್ತಕವಾದ ಭೋಗದಲ್ಲಿಯೂ ಆಲಸ್ಯ ಪರಿಹಾರೋಪಯೋಗಿಯಾದ ಕ್ರೀಡಾದಲ್ಲಿಯೂ ಇಚ್ಛೆಯು ಹೇಳುವುದು ಯುಕ್ತವಲ್ಲ. ಆದರೆ ಭಗವತ್ಸೃಷ್ಟಿಗೆ ಸರ್ವಾತ್ಮನಾ ಪ್ರಯೋಜನವಿಲ್ಲವೆಂದು ತಿಳಿಯಬಾರದು. ಈ ಜಗತ್ಸೃಷ್ಟಿಯಿಂದ ಈಶ್ವರನಿಗೆ ನ್ವಪ್ರಯೋಜನವಿಲ್ಲದಿದ್ದರೂ ಪರರಿಗೆ ಪ್ರಯೋಜನವಿದೆ. ಅಂತಹ ಪ್ರಯೋಜನ ಆವದೆಂದರೆ—ಶ್ರೀಮದಾಚಾರ್ಯರು ಶ್ರೀಮನ್ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ "ಸೋಯಂ ವಿಹಾರಇಹಮೇತನುಭೃತ್ಸ್ವಭಾವಸಂಭೂತಯೇ ಭವತಿಭೂತಿಕೃದೇವಭೂತ್ಯೈ" ಎಂದು ಹೇಳಿರುತ್ತಾರೆ. ನನ್ನ ಜಗತ್ಸೃಷ್ಟ್ಯಾದಿ ವ್ಯಾಪಾರವು ಶರೀರಧಾರಿಗಳಾದ ಯೋಗ್ಯರಾದ ಅಧಿಕಾರಿಗಳಿಗೆ ಸ್ವಭಾವಭೂತವಾದ ಜ್ಞಾನಾನಂದಾಭಿವ್ಯಕ್ತಿಗೆ ಸಾಧನವಾದ ಉಪಾಸನೆಗೆ ಅನುಕೂಲವು. ಮತ್ತು ಭೂತಿಯೆಂದರೆ ಮಹಾಲಕ್ಷ್ಮಿಗೆ ಅಭಿಮಾನ್ಯವಾನವಾದ ಜಡಪ್ರಕೃತಿಯ ಮಹದಾದಿನಾನಾವಿಧ ಪರಿಣಾಮವೆ ಜಗತ್ಸೃಷ್ಟಿಯಾದುದರಿಂದ ಈ ಪ್ರಪಂಚವೆಲ್ಲವೂ ಶ್ರೀಮಹಾಲಕ್ಷ್ಮೀದೇವಿಯವರ ಐಶ್ವರ್ಯವಿಸ್ತಾರರೂಪವಾಗುವುದು. ಈ ಪ್ರಕಾರ

ಜೀವಸ್ವಭಾವಾಭಿವ್ಯಕ್ತಿಯು, ಮಹಾಲಕ್ಷ್ಮೀದೇವಿಯವರ ವಿಚಿತ್ರೈಶ್ವರ್ಯದ ಪ್ರಕಟನವು ಇವುಗಳೆಂಬ ಪರಪ್ರಯೋಜನವೂ ಕೂಡ ಪರಮೇಶ್ವರನ ಸೃಷ್ಟಿಗೆ ಪ್ರಯೋಜನವಾಗಿರುವುದು. ಭಗವಂತನು ಪರಮಕೃಪಾಳುವು. ಕೃಪಾಳುವಾದವನಿಗೆ ಪರರ ಪ್ರಯೋಜನವೂ ಕೂಡ ತನ್ನ ಪ್ರವೃತ್ತಿಗೆ ಪ್ರಯೋಜಕವಾಗುವುದು ಕಂಡಿದೆ.

—* ಪ್ರಥಮಖಂಡವು ಮುಗಿದುದು *—

ದ್ವಿತೀಯಖಂಡ.

ಈ ಪ್ರಕಾರ ಪೂರ್ವಖಂಡದಿಂದ ವಿಶ್ವ-ತೈಜಸ-ಪ್ರಾಜ್ಞರೆಂಬ ರೂಪತ್ರಯದ ಮಾಹಾತ್ಮ್ಯವನ್ನು ಪ್ರತಿಪಾದಿಸಿ ಎಂದರೆ ಆತ್ಮಾಖ್ಯನಾದ ಪರಮಾತ್ಮನ ನಾಲ್ಕುಪಾದಗಳಲ್ಲಿ ಪಾದತ್ರಯಗಳನ್ನು ನಿರೂಪಿಸಿ ತುರೀಯರೂಪ ಎಂದರೆ ಚತುರ್ಥಪಾದದ ಸ್ವರೂಪವನ್ನು ಈ ದ್ವಿತೀಯಖಂಡದಿಂದ ನಿರೂಪಿಸುತ್ತಾರೆ—

(೧) ಆತ್ಮಾಖ್ಯಪರಬ್ರಹ್ಮನ ತುರೀಯರೂಪವು "ನಾಂತಃಪ್ರಜ್ಞಂ" ಎಂದರೆ ಸ್ವಾಪ್ನಪದಾರ್ಥ ಪ್ರದರ್ಶಕತ್ವರೂಪವಾದ ತೈಜನವ್ಯಾಪಾರವನ್ನು ಮಾಡುವುದು ಅಲ್ಲ. ಮತ್ತು ವಿಶ್ವನಾಮಕ ಭಗವದ್ರೂಪದ ಹಾಗೆ ಜಾಗ್ರತ್ಕಾಲೀನ ಪದಾರ್ಥ ಪ್ರದರ್ಶಕವೂ ಅಲ್ಲ. ಇದೇಪ್ರಕಾರ ಬಾಹ್ಯವಾದ ಶಬ್ದಾದಿಜ್ಞಾನ ಸ್ವಾಪ್ನಪದಾರ್ಥಜ್ಞಾನ ಈ ಎರಡೂಉಂಟಾಗುವುದು ಉಭಯಪ್ರಜ್ಞಾವಸ್ಥೆ ಎನ್ನಿಸಿಕೊಳ್ಳುತ್ತದೆ. ಈ ತುರೀಯರೂಪವು ಈ ಉಭಯಪ್ರಜ್ಞಾವಸ್ಥಾಪ್ರವರ್ತಕವೂ ಅಲ್ಲ. ಮನಸ್ಸಿಗೆ ಏಕಾಗ್ರ್ಯರೂಪವಾದ ಸಮಾಧಿಯಲ್ಲಿರುವ ಜ್ಞಾನಿಗೆ ಅವಿಚ್ಛಿನ್ನಜ್ಞಾನ ಪರಂಪರೆಯ ಉತ್ಪಾದನವು ಕೂಡ ಈ ತುರೀಯ ರೂಪಿಯಾದ ಪರಮಾತ್ಮನಿಗೆ ಸೇರಿದ್ದೂ ಅಲ್ಲ. ಮತ್ತು 'ನಪ್ರಜ್ಞಾನಘನಂ' ಎಂದರೆ ಅಜ್ಞಾನಾವೃತನಾದ ಜೀವನಿಗೆ ನಿದ್ರಾವಸ್ಥೆಯಲ್ಲಿ ಸುಷುಪ್ತ್ಯವಸ್ಥಾಕಾಲ-ಸುಖಗಳು-ಜ್ಞಾನವೆಂಬ ಪ್ರಾಜ್ಞನಾಮಕ ಪರಬ್ರಹ್ಮನವ್ಯಾಪಾರವನ್ನೂ ಮಾಡತಕ್ಕುದಲ್ಲ. ಆದರೆ ಸರ್ವಥಾ ಜ್ಞಾನೋತ್ಪಾದಕನಲ್ಲವೆಂತಲೂ ತಿಳಿಯಬಾರದು. ಪರಮದೇಹವನ್ನು ಬಿಟ್ಟು ಮುಕ್ತರಾಗುವವರಿಗೆ ಸ್ವಯೋಗ್ಯ ಜ್ಞಾನವನ್ನು ಕೊಡುವವನಾಗಿರುತ್ತಾನೆ. ಮುಖ್ಯಪ್ರಾಣಾನುಗ್ರಹವಾಗದಿರುವುದರಿಂದ

ಮುಕ್ತರಲ್ಲದವರ ಜ್ಞಾನಕ್ಕೆ ವಿಷಯವಲ್ಲದೆ ಇರುವುದೂ ಆಗಿರುತ್ತದೆ. ಮುಕ್ತಿಯು ಹೊರತು ಸಂಸಾರದಲ್ಲಿ ಗ್ರಹಿಸಲು ಮತ್ತು ವ್ಯವಹರಿಸಲೂ ಅರ್ಹವಲ್ಲ. ಸಂಸಾರಿಗಳಿಗೆ ಈ ತುರೀಯರೂಪಜ್ಞಾನವು ವ್ಯವಹಾರವು ಸಹ ಉಂಟಾಗುವುದಿಲ್ಲವೆಂದು ತಾತ್ಪರ್ಯ. ಇದೂ ಅಲ್ಲದೆ ವಿಶ್ವಾದಿ ರೂಪತ್ರಯವನ್ನು ಹೇಗೆ ಜಾಗ್ರದಾದ್ಯವಸ್ಥಾಪ್ರವರ್ತಕತ್ವರೂಪವಾದ ಯುಕ್ತಿಯಿಂದ ನಾವು ತಿಳಿಯಲು ಶಕ್ಯವೋ ಹಾಗೆ ಯುಕ್ತಿಯಿಂದ ಈ ತುರ್ಯನಾಮಕ ಪರಮಾತ್ಮನರೂಪವು ತಿಳಿಯತಕ್ಕುದಲ್ಲದುದರಿಂದಲೆ ಅಚಿಂತ್ಯವೆಂದರ ಯುಕ್ತಿಗೆ ಗೋಚರವಾಗುವುದಲ್ಲ. ಅಚಿಂತ್ಯಶಕ್ತಿಯುಳ್ಳದಾದುದರಿಂದಲೇ ಅವ್ಯಪದೇಶ್ಯ ಎಂದರೆ ನಿರ್ದೇಶವಾಡುವದಕ್ಕೆ ಅರ್ಹವಲ್ಲ. ಮತ್ತು ಸ್ವರೂಪಭೂತವಾದ ಸರ್ವೋತ್ತಮತ್ವ ಪೂರ್ಣತ್ವಗಳುಳ್ಳದೂ ಜ್ಞಾನಾನಂದಸ್ವರೂಪವು; ಈ ತುರ್ಯರೂಪವು ಆನಂದ ಸ್ವರೂಪವಾದರೆ ಜೀವನಿಗೆ ನಮವಾದುದೆಂದು ಶಂಕಿಸಬಾರದು. ವ್ಯಾಪ್ತವಾಗಿಯೂ ಉತ್ಕೃಷ್ಟಸುಖರೂಪವಾಗಿಯೂ ಇರುವದೆಂದು ತಿಳಿಯಬೇಕು. ಅಥವಾ ಈ ತುರೀಯರೂಪವು ದೇಹಬಂಧಾದಿರೂಪವಾದ ಅನಿಷ್ಟ ಪ್ರಪಂಚವನ್ನು ನಿವರ್ತನ ಮಾಡುವದು ನಿರ್ದುಃಖ ಸುಖರೂಪವು. ಪದಾರ್ಥವು ಹೇಗಿದೆಯೋ ಹಾಗೆಯೆ ತಿಳಿಯದೆ ವಿಪರೀತವಾಗಿ ತಿಳಿಯುವುದು ದ್ವೈತವೆನಿಸಿಕೊಳ್ಳುವುದು. ಇದರನ್ನೂ ನಿವರ್ತನಮಾಡುವುದು. ಎಂದರೆ ದೇಹಾದಿಗಳಲ್ಲಿ ನಾನು ನನ್ನದೆಂಬ ಮಿಥ್ಯಾಜ್ಞಾನವನ್ನು ಮುಕ್ತಿಪ್ರದಾನ ಅಥವಾ ಯಥಾರ್ಥ ಜ್ಞಾನದಾನದಿಂದ ನಿವರ್ತನಮಾಡುವುದು ತುರ್ಯರೂಪವೆಂದು ತಾತ್ಪರ್ಯ. ಈ ರೀತಿಯಾದ ಮಾಹಾತ್ಮ್ಯವುಳ್ಳದೇ ಆತ್ಮಾಖ್ಯ ಪರಮಾತ್ಮನ ನಾಲ್ಕನೆ ರೂಪವೆಂದು ಬ್ರಹ್ಮಾದಿಗಳು ತಿಳಿಯುವರು. ಈ ರೂಪದಿಂದ ಬದ್ಧರಾದ ಜೀವರ ವಿಷಯದಲ್ಲಿ ಜಾಗ್ರದಾದ್ಯವಸ್ಥಾ ಪ್ರೇರಕತ್ವಾದಿಕಾರ್ಯವಿಲ್ಲದಿದ್ದರೂ ಮುಕ್ತರಾದ ಜೀವರುಗಳ ಸರ್ವವ್ಯವಹಾರವನ್ನು ನಿಯಮನಮಾಡುವದು ಈ ರೂಪದ ಕಾರ್ಯವೆಂದು ಭಾಷ್ಯಕಾರರು ಸಪ್ರಮಾಣವಾಗಿ ನಿರೂಪಿಸಿರುತ್ತಾರೆ. ಮೋಕ್ಷಾರ್ಥಿಗಳಾದ ಸರ್ವರಿಂದಲೂ ಈ ಪೂರ್ವೋಕ್ತಗಳಾದ ನಾಲ್ಕು ಭಗವದ್ರೂಪಗಳ ಮಾಹಾತ್ಮ್ಯವು ಅವಶ್ಯಜ್ಞಾತವ್ಯವು. ॥ ೧ ॥

ಈ ಮುಂದಿನ ಮಂತ್ರಗಳಿಂದ ನಾಲ್ಕನೇ ರೂಪದಲ್ಲಿ ನಿರೂಪಿತವಾದ ಮಾಹಾತ್ಮ್ಯವನ್ನು ದೃಢಪಡಿಸುವ ಸಂವಾದರೂಪಗಳಾದ ಶ್ಲೋಕಗಳನ್ನು ಶ್ರುತಿ ಉದಹರಿಸುತ್ತದೆ.

ವ್ಯಾಸರು ಶ್ರೀಮದ್ಭಾಗವತದ ಸ್ತುತಿ ಪದ್ಯಗಳಲ್ಲಿ ಸಾಂಖ್ಯ ಮತ

ಶ್ರೀಮದ್ಭಾಗವತಾರ್ಥಪ್ರಕಾಶಿನೀ

ಈ ಪ್ರಪಂಚವನ್ನೆಲ್ಲ ಸೃಷ್ಟಿಸಿದ ನಾರಾಯಣನಲ್ಲಿ ಲೀಯವಾಗುವುದಕ್ಕೆ ಮೊದಲು ಬ್ರಹ್ಮ
ಸೃಷ್ಟ್ಯಾದಿಯ ಸಕ್ಷ್ಮಸ್ವರೂಪವಾದ ತನ್ಮಾತ್ರೆಗಳು ಸಂಪೂರ್ಣವಾಗಿರುವುದಿಲ್ಲ.
ಈ ಪ್ರಪಂಚವು ಮೇಲ್ನೋಟಕ್ಕೆ ಕಾಣುವುದಕ್ಕೆ ನಿತ್ಯವಾಗಿ ಕಾಣುವ ಕಾರಣವು, ಮು
ಕ್ಷೇತ್ರ ವಿಜ್ಞಾನವಾಗಲಿ ಪ್ರಾಜ್ಞಕ್ಕೆ ಸ್ವಪ್ನ ಸಕಲ್ಪಕಾರವಾಗದು; ಮಿಥ್ಯಾ
ಜ್ಞಾನ ನಿವರ್ತಕವು, ಸರ್ವಾತ್ಮನಿಂದ ಪ್ರಕಾಶಿಸಿದ ರೂಪವಾವ ಜಗತ್ತು
ಜೀವನ ಸಹಿಷ್ಣುವಾಗಿಯಿರುವ ನಿತ್ಯ ವಾಸನೆಯೆಂದೆ ಅವರು. ಆ ಸತ್ಯ ಜ್ಞಾ
ವಿರೂಪ ವ್ಯಾಪ್ತವಾದುದು. ಚಿತ್ಸ್ವರೂಪಿ ನಾರಾಯಣನನ್ನ ಸಮರ್ಥವಾದು
ದೆಂದು, ಪುಂಶ್ಚಿಜ್ಜಡಾದ ಪ್ರಪಂಚದ ಸೃಷ್ಟಿಯಾಗಿರುತ್ತದೆ ॥೨॥

ಈ ರೂಪಕ್ಕೆ ವಿರುದ್ಧವಾಗಿ ಮಾಯಾಕಾರ್ಯವಾದ ಜೈಜಸ ಹಾಗೆ
ಸಾತ್ವಿಕಾಲಾಸವಾದ ಒಂದಿಷ್ಟನ್ನು ಕೊಡುವ ವ್ಯಾಪಾರವು ಇರುವುದಿಲ್ಲ. ॥೩॥

ಸುತ್ತಮವಸ್ಥಾ ಸ್ವರೂಪಕ್ಕೆ ಇರುವುದಿಲ್ಲ. ಮತ್ತು ವ್ಯಾಜ್ಞಾನಹಾಗೆ
ಈ ತುರ್ಯರೂಪವು ಜೀವನಿಗೆ ಸ್ವಪ್ನಜಾಗ್ರತ್-ಸುಷುಪ್ತಾವಸ್ಥಾಜ್ಞಾನಗಳನ್ನು ಒಟ್ಟು
ಇತರ ಪದಾರ್ಥಗಳನ್ನು ವ್ಯಾಜ್ಞಾನಾತ್ಮಕ ನಶವಾಕ್ಕೆನುವುದಕ್ಕೆ ತಿಳಿಸುವಂತಿ
ಸ್ಪಷ್ಟವೂ ಆಂತಹುದಲ್ಲ. ಮುಕ್ತರಾದವರಿಗೆ ಮೋಕ್ಷಕಾಲಾನುಸಾರ ಸರ್ವಪ
ದಾರ್ಥದ ಜ್ಞಾನವನ್ನು ಕೊಡುವುದು. ॥೪॥

ಮತ್ತೆ ತುರ್ಯನಲ್ಲಿ ಉಕ್ತವಾದ ಮಿಥ್ಯಾಜ್ಞಾನ ನಿವರ್ತಕತ್ವವು ಪೂರ್ಣವಾಗಿ
ಜ್ಞಾನಾತ್ಮಕ ಪರಮಾತ್ಮನಲ್ಲಿಯೂ ಇರುತ್ತದೆ. ಈ ಮಿಥ್ಯಾಜ್ಞಾನ
ನಿವರ್ತನೆಯಾಗುವುದಲ್ಲ ವ್ಯಾಜ್ಞಾತುರ್ಯರುಗಳ ಸಾಮ್ಯವಿದ್ದರೂ ಜೀವನ ದೆಸಾ
ಗುಣವು, ಬ್ರಹ್ಮನಿಗೆ ಉಂಟಾಗುವುದಿಲ್ಲವಾದ್ದರಿಂದ ಅಜ್ಞಾನ
ನಿವರ್ತನೆಯಲ್ಲಿ ಬದಲಾವಣೆಯಿಲ್ಲ. ॥೫॥

ಮತ್ತೆ ಪ್ರಥಮೋತ್ಪನ್ನರಾದ ವಿಶ್ವಸೃಜನರುಗಳು ಜಾಗ್ರತ್ಕಾಲೀನವಾದ
ಭ್ರಮನು ಸ್ವಪ್ನಕಾಲೀನವಾದ ಭ್ರಮನು ಈ ಎರಡು ಭ್ರಮಗಳಿಗೂ ಕಾರಣವಾದ
ಅಜ್ಞಾನದಿಂದ, ಬಂಧನಕ್ಕೆ ಬಂಧಕರಾಗಿರುವರು. ವ್ಯಾಜ್ಞಾನವಿಲ್ಲದ ಪರ
ಮಾತ್ಮನಾದರೂ ಪೂರ್ವಸೃಷ್ಟವಾದ ಭ್ರಮಜನಕವಲ್ಲದ ಕೇವಲ ಅವಿದ್ಯಾದಿಂದ
ಈ ಜೀವನನ್ನು ಬಂಧಿಸುವನು. ವಸ್ತುತಃ ಜೀವನನ್ನು ಯಥಾರ್ಥವಾಗಿ ತಿಳಿದವರು
ಈತುರ್ಯರೂಪವಾದ ಪರಮಾತ್ಮನಲ್ಲಿ ಕೊನೆಗೆ ವಿದ್ಯಾಜೀವ ಬಂಧನವೆಂಬ ಮಿಥ್ಯವನ್ನು
ಈ ಅವಸ್ಥೆಯಲ್ಲಿ ಜಾಗ್ರತ್ಸ್ವಪ್ನ ಭ್ರಮಜನಕತ್ವವನ್ನು ನಾವು ತಿಳಿಯುವುದಿಲ್ಲ.॥೬॥

ಈ ವಿಧವಾಗಿ ತುರ್ಯರೂಪವಾದ ಪ್ರಾಪ್ತಿಯು ದರ್ಶನವೂ ಸಹ ಆವಾಗ ಆಗುವದೆಂತಹ ದೇಹಗೇಹಾದಿ ಪದಾರ್ಥಗಳು ಭಗವದಧೀನವಾಗಿದ್ದರೂ ಅವುಗಳಲ್ಲಿ ಸ್ವಾಧೀನಗಳೆಂಬ ಜಾಗ್ರತ್ಪ್ರಮೆಯಿರುವನಿಗೆ ಆ ಭ್ರಮೆಯಿಂದ ಹುಟ್ಟಿದ ಸಂಸ್ಕಾರದಿಂದ ಸ್ವಪ್ನದಲ್ಲಿ ತೋರುವ ಪದಾರ್ಥಗಳು ಕೂಡಾ ಜಾಗ್ರತ್ಕಾಲೀನವೆಂದು ಭ್ರಮವುಂಟಾಗುತ್ತದೆ. ಮತ್ತು ಭಗವತ್ಸ್ವತಂತ್ರಾದಿಗಳ ತತ್ವವನ್ನು ತಿಳಿಯದವನಿಗೆ ಮೂಲವಾದ ಅವಿದ್ಯಾದಿಯ ಬಂಧವೂ ಆಗುತ್ತದಷ್ಟೆ; ಈ ಉಭಯವಾದ ನಿಜಾಭ್ರಮಗಳು ನಿವೃತ್ತವಾಗುವವರೆವಿಗೂ ಈ ತುರೀಯರೂಪವಾದ ಪರಮಾತ್ಮನ ಪ್ರಾಪ್ತಿಯು ಆತನ ಅನುಗ್ರಹದ್ವಾರದಿಂದ ಉಂಟಾಗುವುದಿಲ್ಲ. ಅಂದರೆ ಮಿಥ್ಯಜ್ಞಾನ ಭ್ರಮೆಗಳಿಗೆ ಕಾರಣಗಳು ತೊಲಗಿದನಂತರವೆ, ತುರ್ಯನ ದರ್ಶನ ಪ್ರಾಪ್ತಿಗಳಾಗುತ್ತದೆಂದು ತಾತ್ಪರ್ಯ. ॥ ೬ ॥

ಈ ರೀತಿಯಾಗಿ ಅವಿದ್ಯಾದಿಯಿಂದ ಬದ್ಧನಾದ ಜೀವನಿಗೆ ಮುಕ್ತಿಗಳಾದ ಜಾಗ್ರತ್ಸ್ವಪ್ನ ಭ್ರಮೆಗಳ ಜನ್ಮ ಪರಂಪರೆಯು ಆವಾಗ ಆವಕಾರಣದಿಂದ ಹೋಗುವದೆಂದು ಕೇಳಿದರೆ ಅನಾದಿಯಾದ ಭಗವಂತನ ಇಚ್ಛಾ ಮತ್ತು ಅಧೀನವಾದ ಪ್ರಕೃತಿ ಇವುಗಳಿಂದ ಸಂಸಾರದಲ್ಲಿ ಪ್ರವೇಶಿಸಲ್ಪಟ್ಟ ಈ ಜೀವನು ಪರಮಾತ್ಮನ ಅನುಗ್ರಹದಿಂದ ಸದ್ಗುರುಲಾಭವಾಗಿ ಶ್ರವಣಮನನಾದಿ ಸಾಧನ ಸಂಪತ್ತಿಯು ಯಾವಾಗ ಆಗುತ್ತದೆಯೊ ಆಗಲೇ ಜನಸಾದಿ ದೋಷರಹಿತರಾದ ವಿಶ್ವ-ತೈಜಸ-ಪ್ರಾಜ್ಞರೆಂಬ ವ್ಯಾಪಾರವನ್ನು ಮಾಡುವ ಇರುವ ಮಿಥ್ಯಾಜ್ಞಾನ ನಿರ್ಮಕನಾದ ಪರಮಾತ್ಮನನ್ನು ಪ್ರಾಪ್ತನಾಗುವನು. ॥ ೮ ॥

ದೇಹಗೇಹಾದಿಗಳಲ್ಲಿ ನಾನು ನನ್ನದೆಂಬ ಅಭಿಮಾನವು ಜೀವನಸ್ವರೂಪದ ಹಾಗೆ ಸ್ವಾಭಾವಿಕವಾದದು. ಇಂತಹ ಸ್ವಾಭಾವಿಕವಾದುದಕ್ಕೆ ಜೀವನ ಸ್ವರೂಪದ ಹಾಗೆ ನಿವೃತ್ತಿಯು ಹೇಗೆ ಕೂಡುವದೆಂದು ಶಂಕಿಸಬಾರದು. ಏಕೆಂದರೆ ಈ ಅಮಂಮಮತಾದಿರೂಪ ಪ್ರಪಂಚವು ಸ್ವಾಭಾವಿಕವೂ ಅಲ್ಲ ಸ್ವತಂತ್ರವಾಗಿಯೂ ಇರುವದಿಲ್ಲ; ಎಂದರೆ ಈ ಜೀವನ ಅಭಿಮಾನನಿಮಿತ್ತವಾದುದು. ಮತ್ತು ಭಗವದ್ವಶವಾದುದು. ಅಸ್ವಾಭಾವಿಕವಾಗಿ ಭಗವದ್ವಶವಾದರೆ ಭಗವತ್ಕೃಪೆಯಾದದಿಂದ ಅದಕ್ಕೆ ನಿವೃತ್ತಿಯೂ ಕೂಡಬಹುದು. ಈ ದೇಹಾದಿಗಳಲ್ಲಿ ಸ್ವೀಯ ಸ್ವರೂಪಜ್ಞಾನರೂಪವಾದ ಭ್ರಮವು ಜೀವನಿಗೆ ಅನಾದಿಯಾಗಿ ಅನುಸರಿಸಿ ಬಂದಿರುವದಾದರೂ 'ಅದ್ವೈತವೆಂದರೆ' ಮಹಾತ್ಮರಿಂದ ಯಥಾರ್ಥವಾಗಿ ತಿಳಿಯಲ್ಪಟ್ಟ ಬ್ರಹ್ಮಾದಿ ಪದಾರ್ಥಗಳು ಅಜ್ಞಾನದ ವಸ್ತು ತತ್ವವನ್ನು ಬಿಟ್ಟು ಬೇರೆ ಪ್ರ

ಕಾರದಿಂದ ತಿಳಿಯಲ್ಪಡುವ ಅದೇ ಬ್ರಹ್ಮಾದಿ ಪದಾರ್ಥಗಳು ಎಂದರೆ ಈ ಮೇಲೆ ಹೇಳಿದ ತತ್ತ್ವಜ್ಞಾನ ಮಿಥ್ಯಾಜ್ಞಾನಗಳು ಕೂಡಾ ಜೀವನಿಗೆ ಅನಾದಿಯಿಂದ ಬಂದದ್ದಾದರು ಭಗವದಿಚ್ಛೆಯೀ ದಲೆ ಇರುವದು. ಆದುದರಿಂದ ಅಂತಹ ಸರ್ವೋತ್ತಮನಾದ ಪರಮಾತ್ಮನ ಪ್ರಸಾದದಿಂದಲೆ ನಿವೃತ್ತವಾಗುವದು. ॥೯॥

ಈ ದೇಹಗೇಹಾದಿಗಳಲ್ಲಿ ಸ್ವಾತಂತ್ರ್ಯಕೃಷ್ಣಮಾನ ರೂಪಗಳಾದ ನಾನಾ ವಿಧ ಬಂಧಗಳು ಅಜ್ಞಾನರೂಪ ಕಾರಣದಿಂದ ಕಲ್ಪಿತವಾದುದು ಎಂಬುದು ವಾಸ್ತವವಲ್ಲ. ಇದು ಸದ್ಗುರೂಪದೇಶದಿಂದ ತೊಲಗುವುದು. ಸದ್ಗುರೂಪ ದೇಶದಿಂದ ಪ್ರಾಪ್ತವಾದ ಶ್ರವಣಾದಿರೂಪವಾದ ಜ್ಞಾನದಿಂದ ವ್ಯಾಪ್ತವಾದ ಅಪರೋಕ್ಷಜ್ಞಾನದಿಂದಲೇ ನಿವೃತ್ತವಾಗುತ್ತದೆಂಬುವುದು ಸಜ್ಜನರ ಮತವು. ಈ ಪ್ರಕಾರವಾಗಿ ಆತ್ಮಾಖ್ಯ ಪರಮಾತ್ಮನ ನಾಲ್ಕನೇ ತುರ್ಯವೆಂಬ ರೂಪಮಾ ಹಾತ್ಮ್ಯವಿಷಯದಲ್ಲಿ ಸಂವಾದ ರೂಪಗಳಾದ ಶ್ಲೋಕಗಳನ್ನು ಉಪನಿಷತ್ತಿನಲ್ಲಿ "ಇತಿ" ಎಂಬ ಪದದಿಂದ ಮುಗಿಸಿರುವರು.

—ೄ ಇಲ್ಲಿಗೆ ದ್ವಿತೀಯಖಂಡವು ಮುಗಿದುದು. ೄ—

ತೃತೀಯಖಂಡ.

ಇನ್ನು ಮುಂದಿನ ಎರಡು ಖಂಡಗಳು ಸಮಗ್ರೋಂಕಾರ ವೃತಿವಾಚ್ಯ ನಾದ ಆತ್ಮಾಖ್ಯಪರಮಾತ್ಮನ ವಿಶ್ವತೈಜಸ ಪ್ರಾಜ್ಞತುರ್ಯನಾಮಕವಾದ ನಾಲ್ಕು ರೂಪಗಳಿಗೆ ಕ್ರಮವಾಗಿ ಓಂಕಾರದಲ್ಲಿ ನೇರಿರುವ ಅಕಾರೋಕಾರಮಕಾರನಾದ ವೆಂಬ ನಾಲ್ಕು ವರ್ಣಗಳಲ್ಲಿ ಪ್ರತಿವಾಚ್ಯತ್ವವನ್ನು ಹೇಳುವುದಕ್ಕಾಗಿ ಪ್ರವೃತ್ತ ವಾಗಿರುತ್ತದೆ ಆ ಎರಡು ಖಂಡಗಳಲ್ಲಿ ಮೊದಲನೆಯ ಖಂಡವು ವಿಶ್ವಾದಿರೂಪ ತ್ರಯಕ್ಕೆ ವರ್ಣತ್ರಯ ಪ್ರತಿವಾಚ್ಯತ್ವವನ್ನು ಹೇಳುವುದಕ್ಕಾಗಿ ಪೂರ್ವೋಕ್ತವಾ ದುದೇ ಸ್ವಲ್ಪಮಟ್ಟಿಗೆ ಉಪನಿಷತ್ತಿನಲ್ಲಿ ಅನುವಾದ ಮಾಡಲ್ಪಡುತ್ತದೆ ॥೧॥

"ಓಂ" ಎಂದು ಕರೆಯಲ್ಪಡುವುದರಿಂದ ಓಂ ಶಬ್ದವಾಚ್ಯನಾದ ವಿ ಶ್ವಾದಿರೂಪ ಚತುಷ್ಟಯವುಳ್ಳ ಪೂರ್ವೋಕ್ತನಾದ ಪರಮಾತ್ಮನು ಸರ್ವೋತ್ತ ಮನು, ನಾಶರಹಿತನು. ಸರ್ವೋತ್ತಮಗಳಾದ ಪೂರ್ಣಗಳಾದ ಮಾತ್ರಾ ಎಂದೆನೆ ಅಂಶಗಳುಳ್ಳವನು. ಆ ಅಂಶಗಳು ಅಕಾರ, ಉಕಾರ, ಮಕಾರ ಎಂ ಬವುಗಳೆಂ. ಅವುಗಳಲ್ಲಿ "ಅ" ಎಂದು ಕರಸಿಕೊಳ್ಳುವುದರಿಂದ ಅಕಾರನು ವಿಶ್ವನಾಮಕ ಪರಮಾತ್ಮನು. ಹೀಗೆಯೇ "ಉ" ಎಂದು ಕರೆಯಿಸಿಕೊಳ್ಳು ವ ತೈಜಸನು ಉಕಾರನು. "ಮ" ಎಂದು ಕರೆಯಿಸಿಕೊಳ್ಳುವ ಪ್ರಾಜ್ಞನು

ಮಕಾರನು. ಇದೆಲ್ಲರೀತಿಯಾಗಿ ನಾಪದಿಂದ ಬೋಧ್ಯನಾದವನು ತುರ್ಯನೆಂದು ತಿಳಿಯಬೇಕು. ಮತ್ತು ಅಕಾರವಾಚ್ಯನಾದ ವಿಶ್ವನು ಜಾಗರಿತಸ್ಥಾನವುಳ್ಳವನು ಎಂದರೆ ದೆಕ್ಷಿಣಾಕ್ಷಿರೂಪವಾದ ಸ್ಥಾನವುಳ್ಳವನು. ಈ ವಿಶ್ವನು ಜೀವನಿಗೆ ಭೋಗ್ಯವಾದ ರೂಪ ರಸಾದಿ ವಿಷಯಗಳನ್ನು ಭೋಗಾರ್ಹಗಳನ್ನಾಗಿ ಮಾಡುವುದೆ ರಾದಲೂ ನುಷ್ಯವಸ್ಥೆಯಿಂದ ಜೀವನು ಜಾಗ್ರದ್ದೆಶೆಗೆ ಒರುವ ಸಮಯದಲ್ಲಿ ಪಾಜ್ಞನ ದೆಶೆಯಿಂದ ವಿಶ್ವನು ವಿಷಕ್ತನಾಗುತ್ತಾನೆ. ಅದಕಾರಣ ಪ್ರಾಜ್ಞನೆ ಆದಿಯಾಗಿ ವುಳ್ಳವನು. ಮತ್ತು ಜೀವನು ಸ್ವಪ್ನಾವಸ್ಥೆಯಿಂದ ಜಾಗ್ರದವಸ್ಥೆಗೆ ಬರುವಾಗಲೂ, ತೈಜನಿಂದ ವಿಜಕ್ತನಾಗುವುದರಿಂದ ತೈಜನನೇ ಆದಿಯಾಗಿ ವುಳ್ಳವನು. ಹಿಂದೆ ಹೇಳಿದ ಎರಡು ಕಾರಣಗಳಿಂದಲೂ ಅಕಾರವಾಚ್ಯನಾದ ವನು ವಿಶ್ವನು. ಈ ರೀತಿಯಾದ ಎಶ್ವನ ಮಾಹಾತ್ಮ್ಯವನ್ನು ಯಾವ ಅಧಿಕಾರಿಯು ತಿಳಿಯುವನೊ ಅವನು ಆ ಎಶ್ವನಾಮಕ ಹರಿಯ ಅನುಗ್ರಹದಿಂದ ಮುಕ್ತಿಯಲ್ಲಿ ಸರ್ವವಿಷಯಾನುಸಂಧವುಳ್ಳವನಾಗುತ್ತಾನೆ. ಈ ಅಧಿಕಾರಿಯು ಆದಿಯಾಗುವನು ಎಂದರೆ ವಿಶ್ವನಾಮಕ ಭಗವದ್ಜ್ಞಾನಿಯಾದುದರಿಂದ ಆ ಭಗವಂತನಿಗೆ ಜನಕನೆಂದೆಣಿಸಿಕೊಳ್ಳುವನು ॥ ೨ ॥

ಈ ಮಂತ್ರವು ಉಕಾರವಾಚ್ಯನಾದ ಆತ್ಮನ ದ್ವಿತೀಯ ರೂಪವನ್ನು ನಿರೂಪಿಸುತ್ತದೆ ಆತ್ಮನ ದ್ವಿತೀಯಾವಶನಾದ ತೈಜನು ಜೀವನಿಗೆ ಸ್ವಪ್ನಾವಸ್ಥಾಪ್ರೇರಕನಾಗಿ ಕಂರಜ್ಞಾನವುಳ್ಳವನು. ಈತನಿಗ ಜಾಗ್ರದ್ದೆಶೆಯಲ್ಲಿರುವ ದೇಹಾಭಿಮಾನವನ್ನು ಬಿಡಿಸಿ ವಾಸನಾಮಯ ಪದಾರ್ಥಗಳ ಅನುಭವವನ್ನು ಮಾಡಿಸುವುದಕ್ಕಾಗಿ ಸ್ವಪ್ನಮಂಡಲವನ್ನು ಕುರಿತು ಜೀವನನ್ನು ನೆಳೆಯುವುದರ ದೆಸೆಯಿಂದಲೂ, ಬಾಹ್ಯವ್ಯಾಪಾರೋಪರಮವಾದ ನಿದ್ರೆ ಸ್ವಾಪ್ನ ವಿಷಯಾನುಭವ, ಈ ಎರಡಕ್ಕೆ ಕಾರಣನಾಗಿರುವುದರಿಂದಲೂ ಉಕಾರವಾಚ್ಯನಾಗುವನು. ಈರೀತಿಯಾದ ತೈಜನದ ಮಾಹಾತ್ಮ್ಯವನ್ನು ತಿಳಿದ ಅಧಿಕಾರಿಯು ಅವಿಚ್ಛಿನ್ನಜ್ಞಾನಸಂತತಿಯನ್ನು ಪಡೆಯುವನು. ದೆಹಬಂಧದ ದೆಸೆಯಿಂದ ತನ್ನನ್ನು ಉದ್ಧರಿಸಿಕೊಳ್ಳುವನು. ಉತ್ಕೃಷ್ಟನೂ ಆಗುವನು. ಮತ್ತು ಮಾತ್ಸರ್ಯಾದಿ ದೋಷಗಳಿಲ್ಲದ ಮುಕ್ತೆಯರುಳ್ಳ ಸರ್ವರಿಂದಲೂ ಸ್ನೇಹವುಳ್ಳವನೂ ಆಗಿರುತ್ತಾನೆ. ಈ ಮುಕ್ತನಾಗುವ ಅಧಿಕಾರಿಯ ವಂಶದಲ್ಲಿ ಬ್ರಹ್ಮಜ್ಞಾನಯಿಲ್ಲದವನು ಯಾರೂ ಹುಟ್ಟುವುದಿಲ್ಲ, ಎಂದರೆ ಈ ತೈಜನನಾಮಕ ಪರಮಾತ್ಮನ ಪೂರ್ವೋಕ್ತ ಮಾಹಾತ್ಮ್ಯಜ್ಞಾನವುಳ್ಳ ಅಧಿಕಾರಿಯು ಎಂದರೆ ಜ್ಞಾನಿಗಳೇ ಹುಟ್ಟುವರೆಂದು ಭಾವ ॥ ೩ ॥

ವ್ಯಾಸರು ಓಂಕಾರದಲ್ಲಿ ಸನಕಾದಿಗಳ ವಿಷಯದಲ್ಲಿ ಹೀಗೆ

ಇದೇ ರೀತಿಯಾಗಿ ಆತ್ಮನಾಮಕ ಪರಮಾತ್ಮನ ಕೃಪೆಗೆ ಯಾರು? ಅನರ್ಹರಾದವರು ಯಾರು? ಅವನಿಗೆ ಪುರಸ್ಕಾರಪಾತ್ರರಾದವರು ಹೇಗೆ? ಅವನನ್ನು ತಿಳಿದವನಿಗೆ ಆಗುವ ಫಲವೇನು? ಎಂಬ ವಿಷಯಗಳು ಈ ಮಂತ್ರದಲ್ಲಿ ತಿಳಿಸಲ್ಪಡುತ್ತವೆ. ಹೃದಯನಾಮಕ ಸುಷುಪ್ತಿಸ್ಥಾನವೆಲ್ಲ ಪ್ರಾಜ್ಞನಾಮಕ ಪರಮಾತ್ಮನು ಆತ್ಮನಿಗೆ ಕೃಪೀಯಕಾರನು. ಈತನು ಸುಷುಪ್ತ್ಯವಸ್ಥೆಯಲ್ಲಿ ಜೀವನನ್ನು ತನ್ನಲ್ಲಿ ಸೇರಿಸಿಕೊಳ್ಳುವುದರಿಂದ ಅವನ ವೃತ್ತಿಜ್ಞಾನವೆನ್ನಿಸಿಕೊಳ್ಳುವ ಜೀವನಂಬಂಧಿ ಬಾಹ್ಯೆಜ್ಞಾನಗಳಿಗೆ ನಾಶ ಕನಾದುದರಿಂದಲೂ ಪುರಸ್ಕಾರಪಾತ್ರನಾಗುವನು. ಈ ರೀತಿಯಾಡೆ ಜ್ಞಾನವುಳ್ಳ ಅಧಿಕಾರಿಯು ನಮ್ಮನ್ನು ಜಗತ್ತನ್ನು ತನ್ನೊಳಗೆ ಸೇರಿಸಿಕೊಳ್ಳುವನು ಎಂದರ ಜೀವರು ಅಣುಗಳಾಗಿದ್ದರೂ ಉತ್ತಮಾಧಿಕಾರಿಗಳಿಗೆ ಸೂರ್ಯಜರಿದ್ದರ ಹಾಗೆ ಪ್ರಕಾಶವಿರುವುದರಿಂದಲೂ ಅವರ ವ್ಯಾಪ್ತಿಯಿರುವುದರಿಂದಲು ಮುಕ್ತರಾದವರಿಗೆ ನಕಲ ಪ್ರಪಂಚಜ್ಞಾನವೂ ಆಗುವುದೆಂದು ಅಭಿಪ್ರಾಯ. ಮತ್ತು ಇಂತಹ ಅಧಿಕಾರಿಗೆ ಅನಿಷ್ಟನಾಶವೂ ಆಗುವುದು. ॥ ೩ ॥

ಈ ಪ್ರಕಾರ ಅಕಾರಾದಿವರ್ಣತ್ರಯ ಪ್ರತಿಪಾದ್ಯವಾದ ಆತ್ಮನ ರೂಪ ತ್ರಯವನ್ನು ಹೇಳಿ ನಾಲ್ಕನೇ ರೂಪವನ್ನು ಮುರಿಡೆ ಹೇಳತಕ್ಕವರಾಗಿ ಪೂರ್ವೋಕ್ತವಾದ ರೂಪತ್ರಯವನ್ನೂ ಅರಿತವನಿಗೆ ಆವ ಫಲಗಳು ಹೇಳಲ್ಪಟ್ಟಿವೆಯೋ ಆ ವಿಷಯದಲ್ಲಿ ಬ್ರಹ್ಮ ದೃಷ್ಟವಾದ ಶ್ಲೋಕಗಳನ್ನು ಪ್ರಮಾಣವನ್ನಾಗಿ ಉದಾಹರಿಸುತ್ತಾರೆ—ಈ ಪೂರ್ವೋಕ್ತವಾದ ಜ್ಞಾನಿ ಫಲ ವಿಷಯದಲ್ಲಿ ಮುಂದೆ ಹೇಳಲ್ಪಡುವ ಶ್ಲೋಕಗಳು ಪ್ರಮಾಣವಾಗಿರುತ್ತವೆ. ಆ ಶ್ಲೋಕಗಳಾವುವೆಂದರೆ—ವಿಶ್ವರೂಪಿಯಾದ ಪರಮಾತ್ಮನಿಗೆ ಪ್ರಣವಘಟಕವಾದ ಅಕಾರದಿಂದ ವಾಚ್ಯನಾಗಿರುವಿಕೆಯನ್ನು ಉಪಾಸನೆ ಮಾಡಲಾಗಿ ಜ್ಞಾನಿಗೆ ವಿಶ್ವರೂಪ ಪರಮಾತ್ಮನಿಗೆ ಉಕ್ತವಾದ ಆದಿಮತ್ತ್ವವಿಷಯದಲ್ಲಿ ಸಾಮ್ಯವು ಪ್ರಾಪ್ತವಾಗುತ್ತದೆ ಎಂದರೆ, ವಿಶ್ವನಲ್ಲಿರುವ ಆದಿಮತ್ತ್ವವು ಜ್ಞಾನಿಗೆ ಲಬ್ಧವಾಗುತ್ತದೆ. ಇದುಸ್ಪಷ್ಟವು. "ತಂ ಯಥಾಯಥೋಪಾಸತೇತದೇವ ಭವತಿ" ಎಂದು ಶ್ರುತಿಯು ಸಾರುತ್ತಿದೆಂದಭಿಪ್ರಾಯ. ಆತ್ಮನ ಅರ್ಥವು ವಿಶ್ವವೆಂದರೆ ಆಪ್ತಿಸಿದ್ಧಿತ್ವದಿಂದ ಪ್ರಣವೈಕದೇಶವಾದ ಅಕಾರಕ್ಕೆ ಅರ್ಧಮಾತ್ರೆಯನ್ನು ಎಂದು ಧ್ಯಾನ ಮಾಡಲಾಗಿ ಆ ಪ್ರಕಾರ ಧ್ಯಾನಮಾಡುವ ಜ್ಞಾನಿಗೆ ಆಪ್ತಿಯಿಂದ ಸಾಮ್ಯವು ಪ್ರಾಪ್ತವಾಗುತ್ತದೆ; ಎಂದರೆ ಸರ್ವಕಾಮಗಳೂ ಪ್ರಾಪ್ತವಾಗುವುದರಿಂದ ವಿಶ್ವನ ಸಾಮ್ಯವು ಬರುತ್ತದೆಂದಭಿಪ್ರಾಯ. ॥ ೪ ॥

ಅಶ್ವಿನೀದೇವತೆಗಳು, ಪೃಥಿವಿಯು, ಕಾಲನು, ಮೃತ್ಯುದೇವತೆಗಳು, ಇವರುಗಳು ಕೂಡ ದೇವತೆಗಳೆಂದು ಹೇಳಲ್ಪಟ್ಟವರೆ. ವಿಪ್ರ ಸ್ವಂತನು-ಋಷಿ-ಸಗುಣ ಇವರುಗಳು ಕ್ಷತ್ರಿಯರಾದಕಾರಣ ವಿಷ್ಣು ವಿಗೆ ವರ್ಣವೇ ಇಲ್ಲವಾದ ಕಾರಣ ಈ ನಾಲ್ವರನ್ನು ಹೊರತು, ಉಳಿದ, ಎಂಟು ಅನಿತ್ಯರು ವೈಶ್ಯರೆಂದು ಹೇಳಲ್ಪಟ್ಟಿದೆ. ಅಗ್ನಿಯು, ಬ್ರಾಹ್ಮಣ, ನಾದುದರಿಂದ ಅಗ್ನಿಯನ್ನು ಹೊರತು ಋಭುಪಸುಗಳೇ ವೈಶ್ಯರೆಂದು, ತಿಳಿಯತಕ್ಕದ್ದು. ಸದಾಶಿವನು ಕ್ಷತ್ರಿಯನಾದ ಕಾರಣ ತದತಿರಿಕ್ತರಾದ ದಕರುದ್ರರು ವೈಶ್ಯರೆಂದು ಹೇಳಲ್ಪಟ್ಟಿದೆ.

ಮೂಲದಲ್ಲಿರುವ "ಮದ್ಭಾವಾಃ" ಎಂಬುದಕ್ಕೆ ನನ್ನ, ದೇಹದಿಂ, ಹುಟ್ಟಿದ ಉತ್ಪತ್ತಿಸ್ಥಾನಗಳುಳ್ಳವರು ಎಂದರೆ ನನ್ನಿಂದ ಹುಟ್ಟಿದವರೆಂದರ್ಥ. ಲೋಕದಲ್ಲಿರುವ ಈ ಪ್ರಜರು ಮನು ಮೊದಲಾದವರಿಗೆ ಪುತ್ರ, ಪೌತ್ರ, ರೂಪದಿಂದಿರುವವರೆಲ್ಲರೂ ನನ್ನಿಂದಲೇ ಹುಟ್ಟಿದವರೆಂದಭಿವ್ಯಾಪ್ತಿಯು. ಆದರೆ ಇಲ್ಲಿ "ತತೋಽಮುನೂನಂ ಸಸರ್ಜಾಂತೇ ಮಾನಸಾ ಲೋಕಭಾವನಾಃ" ಎಂದು ಬ್ರಹ್ಮದೇವರಿಂದ ಸೃಜಿಸಲ್ಪಟ್ಟರೆಂದು, ಹೇಳಲ್ಪಟ್ಟಿರುವ ಸ್ವಾಯಂಭುವಾದಿಗಳಿಗೆ ಪರಮಾತ್ಮನಿಂದ ಸೃಜಿಸಲ್ಪಟ್ಟರೆಂಬುದು ಹೇಗೆ ಕೂಡುತ್ತದೆಂದು ಶಂಕಿಸಬಾರದು. ನನ್ನಿಂದ ಹುಟ್ಟಿದವರೆಂಬುದಕ್ಕೆ ಬ್ರಹ್ಮನಲ್ಲಿ ಅಂತರ್ಯಾಮಿಯಾಗಿರುವ ನನ್ನಿಂದ ಹುಟ್ಟಿದ್ದಾನೆಂಬ ಅಭಿಪ್ರಾಯವಿರುವುದರಿಂದ ಮೇಲೆ ಹೇಳಿದ ವಚನದ ವಿರೋಧವಿರುವುದಿಲ್ಲ. ಬ್ರಹ್ಮನೇನೋ ದ್ವಾರಮಾತ್ರನೆಂದು ತಿಳಿಯತಕ್ಕದ್ದು. ॥ ೬ ॥

ಇವರುಗಳಿಗೂ ಹೇಳಲ್ಪಟ್ಟ ಮಾಹಾತ್ಮ್ಯದ ಜ್ಞಾನಕ್ಕೆ ಸ್ಥಳವನ್ನು ಹೇಳುತ್ತಾರೆ.—

ಏತಾಂ ವಿಭೂತಿಂ ಯೋಗಂಚ ಮಮ ಯೋವೇತ್ತಿ ತತ್ತ್ವತಃ ॥
ಸೋವಿಕಂಪೇನ ಯೋಗೇನ ಯುಜ್ಯತೇ ನಾತ್ರ ಸಂಶಯಃ ॥೭॥

"ನಮೋವಿದುಃ ಸುರಗಣಾಃ" ಎಂದು ಮೊದಲುಮಾಡಿಕೊಂಡತ್ತು, ಹೇಳಲ್ಪಟ್ಟ ವಿಭೂತಿ ಎಂದರೆ ವಿವಿಧವಾದ ಭಜನವನ್ನು ದೇವತೆಗಳಿಂದಲೂ ಕೂಡ ಸಮಗ್ರವಾಗಿ ತಿಳಿಯಲಶಕ್ಯನೆಂಬ ಮಾಹಾತ್ಮ್ಯವನ್ನು

ವ್ಯಾಸಗಿರಿ ಲಕ್ಷ್ಮಿನರಸಿಂಹಸ್ವಾಮಿಯವರ ವಿಷಯದಲ್ಲಿ ಮೊದಲ

ಅಥವಾ ಮುಂದೆ ಹೇಳಲ್ಪಡುವ ವಿಚೂತಿಯನ್ನು ಯಥಾರ್ಥವಾಗಿ ಅರು ತಿಳಿಯುತ್ತಾರೋ ಅಂತಹವರು ನಿಶ್ಚಲವಾದ ಯೋಗದಿಂದ ಎಂದರೆ, ನಿಶ್ಚಲವಾದ ಧ್ಯಾನರೂಪವಾದ ಉಪಾಯದಿಂದ ಸಂದೇಹವಿಲ್ಲದೆ ಮುಕ್ತರಾಗುತ್ತಾರೆ. ॥ ೩ ॥

ಪ್ರಾರ್ಥಕ್ತವಾದ ಫಲವಿಷಯದಲ್ಲಿ ನಿಶ್ವಾಸವನ್ನು ಹುಟ್ಟಿಸುವುದಕ್ಕಾಗಿ ಪ್ರಾರ್ಥಕ್ತವಾದ ಮಹಿಮೆಯನ್ನರಿತು ನನ್ನನ್ನು ಸೇವಿಸುವವನಿದಾರೆಂದು ಎರಡು ಶ್ಲೋಕಗಳಿಂದ ನಿರೂಪಿಸಿ ಮುತ್ತು ಎರಡು ಶ್ಲೋಕಗಳಿಂದ ಫಲವನ್ನು ವ್ಯಕ್ತಪಡಿಸುತ್ತಾರೆ —

ಅಹಂ ಸರ್ವಸ್ಯ ಪ್ರಭವಃ ಮತ್ತಃ ಸರ್ವಂ ಪ್ರವರ್ತತೆ ।
ಇತಿಮತ್ವಾ ಭಜಂತೆ ಮಾಂ ಬುಧಾ ಭಾವಸಮನ್ವಿತಾಃ ॥ ೮ ॥
ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯಂತಃ ಪರಸ್ಪರಮ್ ।
ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿಚ ರಮಂತಿಚ ॥ ೯ ॥

ನಾನು ಸಮಸ್ತಕ್ಕೂ ಉತ್ಪಾದಕನು, ಸಮಸ್ತ ಜಗತ್ತೂ ನನ್ನ ಕಡೆಯಿಂದಲೇ ಇಷ್ಟಪ್ರಾಪ್ತಿ ವಿಷಯದಲ್ಲಿಯು, ಅನಿಷ್ಟಪರಿಹಾರ ವಿಷಯದಲ್ಲಿಯೂ ವ್ಯಾಪಾರವಂತವಾಗಿರುತ್ತದೆ. ಪ್ರಳಯ ಮೊದಲಾದುದು ಕೂಡ ನನ್ನಧೀನವೇ ಎಂದು ತಿಳಿಯತಕ್ಕದು. ಈ ಪ್ರಕಾರವಾಗಿ ತಿಳಿದು ನನ್ನಲ್ಲಿ ಭಕ್ತಿಯುಳ್ಳವರಾಗಿ ಜ್ಞಾನಿಗಳು ನನ್ನನ್ನು ಸೇವಿಸುತ್ತಾರೆ ಎಂದರೆ ಪತ್ರಪುಷ್ಪಾದಿಗಳಿಂದ ಪೂಜೆಮಾಡುತ್ತಾರೆ; ಮತ್ತು ಧ್ಯಾನವನ್ನು ಮಾಡುತ್ತಾರೆಂದಭಿಪ್ರಾಯ. ಈ ಶ್ಲೋಕದಲ್ಲಿ ಪ್ರಾರ್ಥಿತವಾದುದೇ ನನ್ನನ್ನು ಹೊಂದುತ್ತಾರೆಂದು ಲಬ್ಧವಾಗುತ್ತಿದ್ದರೂ ಕೂಡ ನನ್ನನ್ನು ಸೇವಿಸುತ್ತಾರೆಂದು ಸ್ಪಷ್ಟವಾದ ಉಕ್ತಿಯು ಜೀವ ಈಶ್ವರ ಇವರುಗಳು ಒಂದೇ ಎಂಬ ಬುದ್ಧಿಯಿಂದ ತಮ್ಮನ್ನೇ ತಾವು ಸೇವಿಸುತ್ತಾರೆಂದು ಪ್ರತೀತಿಯುಂಟಾಗಬಾರದೆಂಬಭಿಪ್ರಾಯದಿಂದ ಹೊರಟಿದೆ. ॥ ೮ ॥

ಆ ಭಜನವನ್ನೇ ವಿವರಿಸುತ್ತಾರೆ—ನನ್ನಲ್ಲೇ ಮನಸ್ಸುಳ್ಳವರಾಗಿ ನನ್ನ ವಿಷಯಕವಾದ ಚೇಷ್ಟೆಯುಳ್ಳವರಾಗಿ ನನ್ನ ತತ್ತ್ವವನ್ನ ಶಿಷ್ಯರನ್ನು ಕುರಿತು ಉಪದೇಶಿಸುವರಾಗಿ ಬಬ್ಬರಿಗೊಬ್ಬರು ನನ್ನ ವಿಷಯವನ್ನು ನಿರೂಪಿಸುತ್ತಾ ನಿತ್ಯವಲ್ಲಿಯೂ ಸಂತುಷ್ಟರಾಗಿರು

ತ್ತಾರೆ ಎಂದರೆ ವಿಷಯಾಲಂಬುದ್ಧಿಯುಳ್ಳವರಾಗಿತ್ತಾರೆ. ಸುಖನಿಂದಲೂ ಇರುತ್ತಾರೆ. ॥ ೯ ॥

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ ॥೧೦॥

ಈ ಪ್ರಕಾರ ನನ್ನಲ್ಲಿಯೇ ನಿರಂತರ ದೃಢನಾದ ಮನುಸ್ಸುಳ್ಳವರಾಗಿ ಪ್ರೀತಿಪೂರ್ವಕವಾಗಿ ಸೇವಿಸುವಂತಹ ಜನರಿಗೆ ಅದೇ ಬುದ್ಧಿಯೋಗವನ್ನು ಜ್ಞಾನರೂಪವಾದ ಮುಕ್ತ್ಯುಪಾಯವನ್ನು ಕೊಡುತ್ತೇನೆ. ಆ ಬುದ್ಧಿಯೋಗದಿಂದ ಅವರು ನನ್ನನ್ನೇ ಹೊಂದುತ್ತಾರೆ.॥೧೦॥

ಅನಾದಿಯಾದ ಅಜ್ಞಾನದಿಂದುಂಟಾದ ಬಂಧವಿರುವ ಕಾರಣ ನಿನ್ನ ಪ್ರಾಪ್ತಿ ಹೇಗಾಗುತ್ತದೆ ಎಂದರೆ ಹೇಳುತ್ತಾರೆ.—

ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥ ೧೧ ॥

ಆ ಪ್ರಕಾರ ನನ್ನನ್ನು ಸೇವಿಸುವ ಜನರಿಗೆ ಅನುಗ್ರಹಾರ್ಥವಾಗಿಯೇ ಫಲಾಂತರೋದ್ದೇಶವಿಲ್ಲದೆ ಅವರುಗಳಿಗೆ ಅಜ್ಞಾನದಿಂದುಂಟಾಗಿರುವ ಕತ್ತಲೆಯನ್ನು ಎಂದರೆ ಸುಖದುಃಖಾದಿ ಕ್ಲೇಶರೂಪವಾದ ಬಂಧನವನ್ನು ತತ್ಪರಿಹಾರದಲ್ಲಿ ಸಮರ್ಥವಾದಂಥ ಪ್ರಕಾಶವುಳ್ಳ ಜ್ಞಾನವೆಂಬ ದೀಪದಿಂದ ಅವರ ಹೃದಯಗತನಾಗಿ ನಾನು ಪರಿಹಾರಮಾಡುತ್ತೇನೆ. ॥ ೧೧ ॥

ಈ ಪ್ರಕಾರವಾಗಿ ಸಂಗ್ರಹವಾಗಿ ಹೇಳಲ್ಪಟ್ಟ ವಿಭೂತಿಯನ್ನು ಮತ್ತು ಯೋಗವನ್ನು ಕೇಳಿ ಅರ್ಜುನನು ವಿಸ್ತಾರವಾಗಿ ತಿಳಿದುಕೊಳ್ಳಬೇಕೆಂಬಿಚ್ಛೆಯುಳ್ಳವನಾಗಿ ಪೂರ್ವೋಕ್ತನನ್ನು ಸ್ತುತಿಮಾಡುತ್ತಾ ಹೇಳಬೇಕೆಂದು ಪ್ರಾರ್ಥಿಸುತ್ತಾನೆ.—

ಅರ್ಜುನಉವಾಚ—

ಪರಂ ಬ್ರಹ್ಮ ಪರಂಧಾಮ ಪವಿತ್ರಂ ಪರಮಂ ಭವಾನ್ ।
ಪುರುಷಂ ಶಾಶ್ವತಂ ದಿವ್ಯಮಾದಿದೇವಮಜಂ ವಿಭುಮ್ ॥ ೧೨ ॥
ಆಹುಸ್ತ್ವಾಮೃಷಯಃ ಸರ್ವೇ ದೇವರ್ಷಿರ್ನಾರದಸ್ತಥಾ ।
ಅಸಿತೋ ದೇವಲೋ ವ್ಯಾಸಃ ಸ್ವಯಂಚೈವ ಬ್ರವೀಷಿ ಮೇ ॥೧೩॥

ವ್ಯಾಸರಾಯರು ಶ್ರೀಮದ್ಭಾಗವತದಾದಿ ಸಮಸ್ತ ವಿಷಯದಾನಿಕೆ ಸೋರ

ಎಲೈ ಬ್ರಹ್ಮರುದ್ರಾದಿ ನಿಯಾಮಕನಾದುದರಿಂದ ಕೇಶವನೆಂದು ಕರೆಯಲ್ಪಡುವ ಎಲೈ ಶ್ರೀಕೃಷ್ಣನೇ! ಸಮಸ್ತ ಋಷಿಗಳು ನಿನ್ನನ್ನು ಪರಬ್ರಹ್ಮನೆಂದು ಮತ್ತು ಉತ್ತಮವಾದ ಆಶ್ರಯನೆಂದು, ಅತ್ಯಂತ ಪವಿತ್ರನೆಂತಲು, ನೀನು ಸರ್ವತ್ರ ವ್ಯಾಪಕನಾದ ಪುರುಷನೆಂತಲು, ಸರ್ವಕಾಲದಲ್ಲಿಯು ವಿಕಪ್ರಕಾರವಾಗಿರುವವನೆಂತಲು, ಕ್ರೀಡಾದಿಗುಣಸಂಪನ್ನನೆಂತಲು, ಉತ್ಪತ್ತಿರಹಿತನೆಂತಲು, ವಿವಿಧಭವನಶೀಲನೆಂತಲು ಹೇಳುತ್ತಾರೆ. ಹಾಗೆಯೇ ದೇವರ್ಷಿಯಾದ ನಾರದರು, ಅಸಿತರು, ದೇವಲರು, ವ್ಯಾಸರೂ ಕೂಡ ಹೇಳುತ್ತಾರೆ. ನೀನು ಕೂಡ ನನಗೆ ಪ್ರತ್ಯಕ್ಷವಾಗಿ ಹೇಳುತ್ತೀಯೆ. ॥ ೧೩-೧೫ ॥

ಸರ್ವಮೇತದೃತಂ ಮನ್ಯೇ ಯನ್ಮಾಂವದಸಿ ಕೇಶವ ।
ನ ಹಿ ತೇ ಭಗವನ್ ವ್ಯಕ್ತಿಂ ವಿದುರ್ದೇವಾ ನ ದಾನವಾಃ ॥ ೧೪ ॥

ಎಲೈ ಕೇಶವನೇ ! ನೀನು ಹೇಳುವುದೆಲ್ಲವನ್ನೂ ಯಥಾರ್ಥವನ್ನಾಗಿ ತಿಳಿದಿದ್ದೇನೆ. ಎಲೈ ಭಗವಂತನೇ ! ನಿನ್ನ ಸಾಮರ್ಥ್ಯದ ಅತಿಶಯವನ್ನು ದೇವತೆಗಳೂ ದಾನವರೂ ಒಬ್ಬರೂ ಅರಿಯರು. ಇದು ಪ್ರಮಾಣಸಿದ್ಧವು. ॥ ೧೪ ॥

ಸ್ವಯಮೇವಾತ್ಮನಾತ್ಮಾನಂ ವೇತ್ಥ ತ್ವಂ ಪುರುಷೋತ್ತಮ ।
ಭೂತಭಾವನಭೂತೇಶ ದೇವದೇವ ಜಗತ್ಪತೇ ॥ ೧೫ ॥

ಆದರೆ ಮತ್ತಾರು ಬಲ್ಲರೆಂದರೆ ಆರೂ ಇಲ್ಲವೆಂದು ಹೇಳುತ್ತಾರೆ.—ಎಲೈ ಪುರುಷೋತ್ತಮನೆ ! ನೀನು ಇತರಾಪೇಕ್ಷೆಯಿಲ್ಲದೆ ನಿನ್ನ ಸಾಮರ್ಥ್ಯದಿಂದ ನಿನ್ನನ್ನು ನೀನು ತಿಳಿದಿರುವೆಯೆ. ನೀನು ಸಮಸ್ತ ಭೂತಗಳಿಗೂ ಉತ್ಪಾದಕನು, ಭೂತಗಳಿಗೆಲ್ಲಾ ನಿಯಾಮಕನು, ಸರ್ವದೇವೋತ್ತಮನು, ಜಗತ್ತಿಗೆ ಸ್ವಾಮಿಯು ಆಗಿರುವೆಯೆ. ॥ ೧೫ ॥

ಈ ಪ್ರಕಾರವಾಗಿ ಸ್ತುತಿಸಿ ಪ್ರಾರ್ಥನೆಯನ್ನು ಮಾಡುತ್ತಾನೆ—

ವಕ್ತುಮರ್ಹಸ್ಯಶೇಷೇಣ ದಿವ್ಯಾ ಹ್ಯಾತ್ಮವಿಭೂತಯಃ ।
ಯಾಭಿರ್ವಿಭೂತಿಭಿರ್ಲೋಕಾನಿಮಾಂಸ್ತ್ವಂ ವ್ಯಾಪ್ಯ ತಿಷ್ಠಸಿ ॥ ೧೬ ॥

ಲೋಕವಿಲಕ್ಷಣವಾದ ಯಾವ ವಿಭೂತಿಗಳಿವೆಯೋ, ಆವ ವಿಭೂತಿಗಳಿಂದ ಈ ಸಮಸ್ತ ಲೋಕವನ್ನು ವ್ಯಾಪಿಸಿಕೊಂಡಿರುತ್ತೀಯೋ

ತ್ತಾರೆ ಎಂದರೆ ವಿಷಯಾಲಂಬುದ್ಧಿಯುಳ್ಳವರಾಗಿತ್ತಾರೆ. ಸುಖದಿಂದಲೂ ಇರುತ್ತಾರೆ. ॥ ೯ ॥

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ॥೧೦॥

ಈ ಪ್ರಕಾರ ನನ್ನಲ್ಲಿಯೇ ನಿರಂತರ ದೃಢನಾದ ಮನುಸ್ಸುಳ್ಳವರಾಗಿ ಪ್ರೀತಿಪೂರ್ವಕವಾಗಿ ಸೇವಿಸುವಂತಹ ಜನರಿಗೆ ಅದೇ ಬುದ್ಧಿಯೋಗವನ್ನು ಜ್ಞಾನರೂಪವಾದ ಮುಕ್ತ್ಯುಪಾಯವನ್ನು ಕೊಡುತ್ತೇನೆ. ಆ ಬುದ್ಧಿಯೋಗದಿಂದ ಅವರು ನನ್ನನ್ನೇ ಹೊಂದುತ್ತಾರೆ.॥೧೦॥

ಅನಾದಿಯಾದ ಅಜ್ಞಾನದಿಂದುಂಟಾದ ಬಂಧವಿರುವ ಕಾರಣ ನಿನ್ನ ಪ್ರಾಪ್ತಿ ಹೇಂಗಾಗುತ್ತದೆ ಎಂದರೆ ಹೇಳುತ್ತಾರೆ.—

ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥ ೧೧ ॥

ಆ ಪ್ರಕಾರ ನನ್ನನ್ನು ಸೇವಿಸುವ ಜನರಿಗೆ ಅನುಗ್ರಹಾರ್ಥವಾಗಿಯೇ ಫಲಾಂತರೋದ್ದೇಶವಿಲ್ಲದೆ ಅವರುಗಳಿಗೆ ಅಜ್ಞಾನದಿಂದುಂಟಾಗಿರುವ ಕತ್ತಲೆಯನ್ನು ಎಂದರೆ ಸುಖದುಃಖಾದಿ ಕ್ಲೇಶರೂಪವಾದ ಬಂಧವನ್ನು ತತ್ಪರಿಹಾರದಲ್ಲಿ ಸಮರ್ಥವಾದಪ್ಪ ಪ್ರಕಾಶವುಳ್ಳ ಜ್ಞಾನವೆಂಬ ದೀಪದಿಂದ ಅವರ ಹೃದಯಗತನಾಗಿ ನಾನು ಪರಿಹಾರಮಾಡುತ್ತೇನೆ. ॥ ೧೧ ॥

ಈ ಪ್ರಕಾರವಾಗಿ ಸಂಗ್ರಹವಾಗಿ ಹೇಳಲ್ಪಟ್ಟ ವಿಭೂತಿಯನ್ನು ಮತ್ತು ಯೋಗವನ್ನು ಕೇಳಿ ಅರ್ಜುನನು ವಿಸ್ತಾರವಾಗಿ ತಿಳಿದುಕೊಳ್ಳಬೇಕೆಂಬಿಚ್ಛೆಯುಳ್ಳವನಾಗಿ ಪೂರ್ವೋಕ್ತವನ್ನು ಸ್ತುತಿಮಾಡುತ್ತಾ ಹೇಳಬೇಕೆಂದು ಪ್ರಾರ್ಥಿಸುತ್ತಾನೆ.—

ಅರ್ಜುನಉವಾಚ—

ಪರಂ ಬ್ರಹ್ಮ ಪರಂಧಾಮ ಪವಿತ್ರಂ ಪರಮಂ ಭವಾನ್ ।
ಪುರುಷಂ ಶಾಶ್ವತಂ ದಿವ್ಯಮಾದಿದೇವಮಜಂ ವಿಭುಮ್ ॥ ೧೨ ॥
ಆಹುಸ್ತ್ವಾಮೃಷಯಃ ಸರ್ವೇ ದೇವರ್ಷಿರ್ನಾರದಸ್ತಥಾ ।
ಅಸಿತೋ ದೇವಲೋ ವ್ಯಾಸಃ ಸ್ವಯಂಚೈವಬ್ರವೀಷಿ ಮೇ॥೧೩॥

ವ್ಯಾಸರು ಪರಂಗತರಾದ ಕನಕದಾಸ ವಿಜಯದಾಸರ ಸ್ಮರಣೆ

ಎಲೈ ಬ್ರಹ್ಮರುದ್ರಾದಿ ನಿಯಾಮಕನಾದುದರಿಂದ ಕೇಶವನೆಂದು ಕರೆಯಲ್ಪಡುವ ಎಲೈ ಶ್ರೀಕೃಷ್ಣನೇ! ಸಮಸ್ತ ಋಷಿಗಳು ನಿನ್ನನ್ನು ಪರಬ್ರಹ್ಮನೆಂದು ಮತ್ತು ಉತ್ತಮವಾದ ಆಶ್ರಯನೆಂದು, ಅತ್ಯಂತ ಪವಿತ್ರನೆಂತಲು, ನೀನು ಸರ್ವತ್ರ ವ್ಯಾಪಕನಾದ ಪುರುಷನೆಂತಲು, ಸರ್ವಕಾಲದಲ್ಲಿಯು ಏಕಪ್ರಕಾರವಾಗಿರುವವನೆಂತಲು, ಕ್ರೀಡಾವಿಗುಣಸಂಪನ್ನನೆಂತಲು, ಉತ್ಪತ್ತಿರಹಿತನೆಂತಲು, ವಿವಿಧಭವನಶೀಲನೆಂತಲು ಹೇಳುತ್ತಾರೆ. ಹಾಗೆಯೇ ದೇವರ್ಷಿಯಾದ ನಾರದರು, ಅಸಿತರು, ದೇವಲರು, ವ್ಯಾಸರೂ ಕೂಡ ಹೇಳುತ್ತಾರೆ. ನೀನು ಕೂಡ ನನಗೆ ಪ್ರತ್ಯಕ್ಷವಾಗಿ ಹೇಳುತ್ತೀಯೆ. ॥ ೦೩-೧೩ ॥

ಸರ್ವಮೇತದೃತಂ ಮನ್ಯೇ ಯನ್ಮಾಂವದಸಿ ಕೇಶವ ।
ನ ಹಿ ತೇ ಭಗವನ್ ವ್ಯಕ್ತಿಂ ವಿದುರ್ದೇವಾ ನ ದಾನವಾಃ ॥ ೧೪ ॥

ಎಲೈ ಕೇಶವನೇ ! ನೀನು ಹೇಳುವುದೆಲ್ಲವನ್ನೂ ಯಥಾರ್ಥವನ್ನಾಗಿ ತಿಳಿದಿದ್ದೇನೆ. ಎಲೈ ಭಗವಂತನೇ ! ನಿನ್ನ ಸಾಮರ್ಥ್ಯದ ಅತಿಶಯವನ್ನು ದೇವತೆಗಳೂ ದಾನವರೂ ಒಬ್ಬರೂ ಅರಿಯರು. ಇದು ಪ್ರಮಾಣಸಿದ್ಧವು. ॥ ೧೪ ॥

ಸ್ವಯಮೇವಾತ್ಮನಾತ್ಮಾನಂ ವೇತ್ಥ ತ್ವಂ ಪುರುಷೋತ್ತಮ ।
ಭೂತಭಾವನಭೂತೇಶ ದೇವದೇವ ಜಗತ್ಪತೇ ॥ ೧೫ ॥

ಆದರೆ ಮತ್ತಾರು ಬಲ್ಲರೆಂದರೆ ಆರೂ ಇಲ್ಲವೆಂದು ಹೇಳುತ್ತಾರೆ.—ಎಲೈ ಪುರುಷೋತ್ತಮನೆ ! ನೀನು ಇತರಾಪೇಕ್ಷೆಯಿಲ್ಲದೆ ನಿನ್ನ ಸಾಮರ್ಥ್ಯದಿಂದ ನಿನ್ನನ್ನು ನೀನು ತಿಳಿದಿದ್ದೀಯೆ. ನೀನು ಸಮಸ್ತ ಭೂತಗಳಿಗೂ ಉತ್ಪಾದಕನು, ಭೂತಗಳಿಗೆಲ್ಲಾ ನಿಯಾಮಕನು, ಸರ್ವದೇವೋತ್ತಮನು, ಜಗತ್ತಿಗೆ ಸ್ವಾಮಿಯು ಆಗಿದ್ದೀಯೆ. ॥ ೧೫ ॥

ಈ ಪ್ರಕಾರವಾಗಿ ಸ್ತುತಿಸಿ ಪ್ರಾರ್ಥನೆಯನ್ನು ಮಾಡುತ್ತಾನೆ—

ವಕ್ತುಮರ್ಹಸ್ಯಶೇಷೇಣ ದಿವ್ಯಾ ಹ್ಯಾತ್ಮವಿಭೂತಯಃ ।
ಯಾಭಿರ್ವಿಭೂತಿಭಿರ್ಲೋಕಾನಿಮಾಂಸ್ತ್ವಂ ವ್ಯಾಪ್ಯ ತಿಷ್ಠಸಿ ॥೧೬॥

ಲೋಕವಿಲಕ್ಷಣವಾದ ಯಾವ ವಿಭೂತಿಗಳಿವೆಯೋ, ಆವ ವಿಭೂತಿಗಳಿಂದ ಈ ಸಮಸ್ತ ಲೋಕವನ್ನು ವ್ಯಾಪಿಸಿಕೊಂಡಿರುತ್ತೀಯೋ

ಅಂತಹ ವಿಭೂತಿಗಳ ಸಮಗ್ರವನ್ನು ನನಗೆ ನಿರೂಪಿಸುವನಾಗು. ವಿಭೂತಿಗಳೆಂದರೆ ನಾನಾ ವಿಧಗಳಾದ ರಾಮಕೃಷ್ಣಾದಿರೂಪಗಳು ಮತ್ತು ಶ್ರೀ ಪರಮಾತ್ಮನ ಸನ್ನಿಧಾನದಿಂದ ತತ್ತದ್ವಸ್ತುಗಳಿಗೆ ಆಯಾ ಜಾತಿಯಲ್ಲಿ ಶ್ರೇಷ್ಠತ್ವವನ್ನುಂಟುಮಾಡುವ ಭಗವದ್ರೂಪವಿಶೇಷಗಳೆಂ ತಲೂ ತಿಳಿಯತಕ್ಕದ್ದು. ॥ ೧೬ ॥

ನಿತ್ಯದಲ್ಲಿ ನನ್ನ ಧ್ಯಾನದಿಂದಲೇ ವಿಭೂತಿರೂಪಗಳನ್ನು ನೀನು ತಿಳಿದುಕೊಳ್ಳಬಹುದು. ನಾನೇ ಹೇಳಬೇಕೆಂದು ಏಕೆ ಪ್ರಾರ್ಥಿಸುತ್ತೀಯೆ, ಎಂದರೆ ಹೇಳುತ್ತಾರೆ.—

ಕಥಂ ವಿದ್ಯಾಮಹಂ ಯೋಗಿಂಸ್ತ್ವಾಂ ಸದಾ ಪರಿಚಿಂತಯನ್ ।
ಕೇಷು ಕೇಷುಚ ಭಾವೇಷು ಚಿಂತ್ಯೋಸಿ ಭಗವನ್ಮಯಾ ॥೧೭॥

ಅಪರಿಮಿತ ಶಕ್ತಿಯುಳ್ಳ ಶ್ರೀಕೃಷ್ಣನೇ ! ನಿನ್ನನ್ನು ಸದಾ ಧ್ಯಾನಮಾಡತಕ್ಕವನಾಗಿದ್ದರೂ ಕೂಡ ನಾನು ನಿನ್ನ ವಚನವಿಲ್ಲದೆ ನಿನ್ನ ವಿಭೂತಿಗಳನ್ನು ಹೇಗೆ ತಿಳಿದುಕೊಳ್ಳಬಲ್ಲೆನು ? ನನಗೆ ಶಕ್ತಿಯಿಲ್ಲ ವೆಂದಭಿಪ್ರಾಯ. ಆದಕಾರಣ ಎಲೈ ಭಗವಂತನೆ ! ಆವ ಆವ ಪದಾರ್ಥಗಳಲ್ಲಿ ಅವುಗಳಿಗೆ ಸ್ವಜಾತಿ ಶ್ರೇಷ್ಠತ್ವವನ್ನು ಕೊಡುವಂತಹವನಾಗಿ ನೀನು ಇರುತ್ತೀಯೆ ಎಂದು ಹೇಗೆ ಧ್ಯಾನಕ್ಕೆ ವಿಷಯನಾಗುತ್ತೀಯೆ ?

ವಿಸ್ತರೇಣಾತ್ಮನೋ ಯೋಗಂ ವಿಭೂತಿಂಚ ಜನಾರ್ದನ ।
ಭೂಯಃ ಕಥಯ ತೃಪ್ತಿರ್ಹಿ ಶೃಣ್ವತೋ ನಾಸ್ತಿಮೇಽಮೃತಂ॥೧೮॥

ಅಂತಹ ನಿನ್ನ ವಿವಿಧವಾದ ರೂಪವನ್ನು, ತತ್ತದ್ವಸ್ತುಗಳಿಗೆ ಶ್ರೇಷ್ಠತ್ವವನ್ನು ಕೊಡುವಂತಹ ರೂಪವನ್ನು ಮತ್ತು ನಿನ್ನ ಸಾಮರ್ಥ್ಯವನ್ನು ಶಬ್ದ ಸಂಕೋಚವಿಲ್ಲದೆ ಪುನಃ ಹೇಳು. ನಿನ್ನ ವಾಕ್ಯವೆಂಬ ಅಮೃತವನ್ನು ಕೇಳುತ್ತಿರುವ ನನಗೆ ಅಲಂಬುದ್ಧಿಯಿಲ್ಲ. ॥ ೧೮ ॥

ಸಮಗ್ರವಾಗಿ ಹೇಳೆಂದು ಅರ್ಜುನನ ಪ್ರಶ್ನೆಗೆ ಅನುಗುಣವಾದ ಉತ್ತರವನ್ನು ಹೇಳುತ್ತಾ ಹೇಳುವೆನೆಂದು ಪ್ರತಿಜ್ಞೆಯನ್ನು ಭಗವಂತನು ಮಾಡುತ್ತಾನೆ.—

ವ್ಯಾಸರು ಶಂಗಸಗಾಧ, ಕಿನಕಗಾಗಿ ವಿಜಯದಾಸರಿ ಹೊರ

ಶ್ರೀ ಭಗವಾನುವಾಚ—

ಹಂತ ತೇ ಕಥಯಿಷ್ಯಾಮಿ ದಿವ್ಯಾಹ್ಯಾತ್ಮವಿಭೂತಯಃ । ।
ಭ್ಯಾದಾನ್ಯತಃ ಕುರುಶ್ರೇಷ್ಠ ನಾಸ್ತ್ಯಂತೋ ವಿಸ್ತರಸ್ಯ ಮೆ ॥೧೯॥

ಎಲೈ ಕುರುಕುಲೋದ್ಭವರಲ್ಲಿ ಶ್ರೇಷ್ಠನಾದ ಅರ್ಜುನನೇ ! ನನ್ನ ದಿವ್ಯವಾದ ವಿಭೂತಿಗಳಲ್ಲಿ ಮುಖ್ಯವಾದುದನ್ನು ನಿನಗೆ ಹೇಳುತ್ತೇನೆ. ನನಗೆ ಸಂತೋಷವಾಗಿದೆ. ನಾನು ಹೇಳಬಹುದಾದ ವಿಸ್ತಾರಕ್ಕೆ ಅಂತವಿರುವುದಿಲ್ಲ. ಆದುದರಿಂದ ಮುಖ್ಯವಾದ ವಿಭೂತಿಗಳನ್ನು ಹೇಳುವೆನು. ಸಮಗ್ರವಾಗಿ ನಿರೂಪಿಸುವುದು ಯುಕ್ತವಲ್ಲವೆಂದು ಅಭಿವ್ಯಾಯ. ॥ ೧೯ ॥

ಅವಾವ ವಸ್ತುಗಳಲ್ಲಿ ನಿನ್ನನ್ನು ಚಿಂತಿಸತಕ್ಕುದು ಎಂದರೆ ಸರ್ವ ವಸ್ತುಗಳಲ್ಲಿಯೂ ಚಿಂತಿಸುವುದಾವೆಶ್ಯಕವೆಂದಭಿವ್ಯಾಯದಿಂದ ಸಾಮಾನ್ಯವಾಗಿ ಸರ್ವಭೂತಗಳಲ್ಲಿಯೂ ನಾನು ಅಂತರ್ಗತನಾಗಿರುವೆನೆಂದು ಹೇಳುತ್ತಾರೆ.—

ಅಹಮಾತ್ಮಾಗುಡಾಕೇಶ ಸರ್ವಭೂತಾಶಯಸ್ಥಿತಃ ।
ಅಹಮಾದಿಶ್ಚ ಮಧ್ಯಂಚ ಭೂತಾನಾಮಂತ ಏವಚ ॥ ೨೦ ॥

ಎಲೈ ನಿದ್ರೆಯನ್ನು ಜಯಿಸಿದ ಅರ್ಜುನನೇ ! ನಾನು ವ್ಯಾಪ್ತನಾಗಿದ್ದರೂ ಕೂಡ ಸಮಸ್ತಭೂತಗಳಿಗೆ ಅಂತರ್ವರ್ತಿಯಾಗಿರುವನು. ನಾನೇ ಸರ್ವಭೂತಗಳಿಗೂ ಆದಿಯು, ಮಧ್ಯನು, ಅಂತವೂ ಆಗಿರುವೆನು ಎಂದರೆ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನಾಗಿರುವೆನು. ॥೨೦॥

ಭಗವಂತನಾದ ನನ್ನರೂಪವು ಎರಡು ವಿಧವು. ವ್ಯಕ್ತಾವ್ಯಕ್ತವೆಂಬುದೊಂದು, ತಿರೋಹಿತರೂಪವೆಂಬ ಮತೊಂದು. ಅದರಲ್ಲಿ ರಾಮ-ಕೃಷ್ಣ-ವಿಷ್ಣು-ಕಪಿಲ-ವ್ಯಾಸಾದಿರೂಪಗಳು ವ್ಯಕ್ತಾವ್ಯಕ್ತವು. ತತ್ತದ್ವಸ್ತುಗಳಲ್ಲಿದ್ದು ಆಯಾ ವಸ್ತುಗಳಿಗೆ ಶ್ರೇಷ್ಠತ್ವವನ್ನು ತಂದುಕೊಡುವ ರೂಪವು ತಿರೋಹಿತವು. ಈ ಎರಡು ವಿಧವಾದ ರೂಪಗಳನ್ನು ಸೇರಿಸಿ ಹೇಳುತ್ತಾರೆ.—

ಆದಿತ್ಯಾನಾಮಹಂವಿಷ್ಣುಃ ಜ್ಯೋತಿಷಾಂ ರವಿರಂಶುಮಾನ್ । ।
ಮರೀಚಿರ್ಮರುತಾಮಸ್ಮಿ ನಕ್ಷತ್ರಾಣಾಮಹಂಶಶೀ ॥ ೨೧ ॥

ಆದಿತ್ಯರಲ್ಲಿ ನಾನು ವಿಷ್ಣುವಾಗಿರುವೆನು ಎಂದರೆ ಸರ್ವತ್ರವ್ಯಾಪ್ತನಾಗಿರುವುದರಿಂದ ವಿಷ್ಣುವೆಂದು ಹೆಸರುಳ್ಳವನಾಗಿರುವೆನು. ಪ್ರಕಾಶಸ್ವರೂಪವಾದ ವಸ್ತುಗಳಲ್ಲಿ ನಾನು ಸರ್ವತ್ರ ವ್ಯಾಪ್ತವಾದ ಕಿರಣಗಳುಳ್ಳ ಸೂರ್ಯನಾಗಿದ್ದೇನೆ. ಸೂರ್ಯನಿಗೆ ಪ್ರಕಾಶಗಳಲ್ಲಿ ಶ್ರೇಷ್ಠತ್ವವನ್ನು ಕೊಡತಕ್ಕ ರೂಪವಿಶೇಷದಿಂದ ಸೂರ್ಯವಾಚಕ ಶಬ್ದಗಳಿಂದ ವಾಚ್ಯನಾಗಿ ಸನ್ನಿಹಿತನಾಗಿದ್ದೇನೆ. ಏಕೋನಪಂಚಾಶತ್ (೪೯) ಮರುತ್ತುಗಳಲ್ಲಿ ಮರೀಚಿನಾಮಕನಾದ ಮರುತ್ತಿಗೆ ಶ್ರೇಷ್ಠತ್ವವನ್ನು ತಂದುಕೊಡುವ ರೂಪವಿಂದ ಉದಕಗಳುಳ್ಳ ಕಾರಣ "ಮರಿ" ಎಂಬ ಮೇಘಗಳಿಗೆ ಚಲನವನ್ನುಂಟುಮಾಡುವ ನಿಮಿತ್ತದಿಂದ ಮರೀಚಿನಾಮಕನಾಗಿ ನಾನು ಸನ್ನಿಹಿತನಾಗಿರುವೆನು. ನಕ್ಷತ್ರಗಳಲ್ಲಿ ಚಂದ್ರನಿಗೆ ಉತ್ಕೃಷ್ಟತ್ವವನ್ನು ತಂದುಕೊಡುವ ರೂಪದಿಂದ ಅತ್ಯಂತ ಸುಖರೂಪನಾದ ಕಾರಣ ಶಶಿನಾಮಕನಾಗಿ ನಾನು ಸನ್ನಿಹಿತನಾಗಿರುವೆನು. ಹೀಗೆಯೇ ಮುಂದೆ ತಿರೋಹಿತರೂಪಗಳನ್ನು ಹೇಳುವ ಸ್ಥಳಗಳಲ್ಲಿ ಅರ್ಥವನ್ನು ತಿಳಿಯತಕ್ಕುದು. ॥೨೦॥

ವೇದಾನಾಂ ಸಾಮವೇದೋಽಸ್ಮಿ ದೇವಾನಾಮಸ್ಮಿ ವಾಸವಃ।
ಇಂದ್ರಿಯಾಣಾಂ ಮನಶ್ಚಾಸ್ಮಿ ಭೂತಾನಾಮಸ್ಮಿ ಚೇತನಾ ॥೨೨॥

ವೇದಗಳಲ್ಲಿ ಸರ್ವೋತ್ತಮನಾಗಿರುವುದರಿಂದ ಸಾಮವೇದವೆಂಬ ಹೆಸರುಳ್ಳವನಾಗಿರುತ್ತೇನೆ. ಸರ್ವದೇಶದಲ್ಲಿಯೂ ಇರುವನಾದ ಕಾರಣ ವಾ, ಸಕಾರಶಬ್ದದಿಂದ ಕರೆಸಿಕೊಳ್ಳಲ್ಪಡುವವನಾಗಿ ಇಂದ್ರನಿಗೆ ದೇವತೆಗಳಲ್ಲಿ ಶ್ರೇಷ್ಠತ್ವವನ್ನುಂಟುಮಾಡುವವನಾಗಿದ್ದೇನೆ. ಇಂದ್ರಿಯಗಳಲ್ಲಿ ಮನಸ್ಸಿಗೆ ಶ್ರೇಷ್ಠತ್ವವನ್ನುಂಟುಮಾಡುವವನಾಗಿ ಜ್ಞಾನರೂಪನಾಗಿರುವುದರಿಂದ ಮನಶ್ಶಬ್ದವಾಚ್ಯನಾಗಿರುವೆನು. ಪ್ರಾಣಿಗಳಿಗೆ ಮನಸ್ಸಿಗೆ ನಿಯಾಮಕವಾದ ಸ್ತ್ರೀರೂಪವುಳ್ಳವನಾದಕಾರಣ ಚೇತನಾನಾಮಕನಾಗಿರುವೆನು. ಅಥವಾ ಪ್ರಾಣಿಗಳಿಗೆ ಚೇತನಾನಾಮಕವಾದ ಮುಖ್ಯಧರ್ಮವನ್ನು ಕೊಡತಕ್ಕವನಾಗಿರುವೆನೆಂದರ್ಥ. ಚೇತನಾ ಎಂದರೆ ಮನಸ್ಸಿನ ವ್ಯಾಪ್ತಿಯು. ಅದು ಸ್ಮರಣಶಕ್ತಿಯು ಅಧಿಕ್ಯರೂಪವೂ. ॥ ೨೨ ॥

ರುದ್ರಾಣಾಂ ಶಂಕರಶ್ಚಾಸ್ಮಿ ವಿತ್ತೇಶೋ ಯಕ್ಷರಕ್ಷಸಾಮ್ ।
ವಸೂನಾಂ ಪಾವಕಶ್ಚಾಸ್ಮಿ ಮೇರುಃ ಶಿಖರಿಣಾಮಹಮ್ ॥೨೫॥

ರುದ್ರರಲ್ಲಿ ಸುಖಕಾರಣನಾದಕಾರಣ ಶಂಕರನಾಮಕನಾಗಿ ಶಂಕರನಿಗೆ ಶ್ರೇಷ್ಠತ್ವಪ್ರದನಾಗಿರುವೆನು. ಯಕ್ಷರಾಕ್ಷಸರಲ್ಲಿ ಕುಬೇರನಿಗೆ ಶ್ರೇಷ್ಠತ್ವಪ್ರದನಾಗಿ ದ್ರವ್ಯಜ್ಞಾನವಿಯಾದ ಕಾರಣ ವಿತ್ತೇಶನಾಮಕನಾಗಿರುವೆನು. ವಸುಗಳಲ್ಲಿ ಶುದ್ಧಿಕರನಾದ ಕಾರಣ ಪಾವಕನಾಮಕನಾಗಿ ಅಗ್ನಿಗೆ ಶ್ರೇಷ್ಠತ್ವಪ್ರದನಾಗಿರುವೆನು. ಪರ್ವತಗಳ ಮಧ್ಯದಲ್ಲಿ ಪ್ರೇರಕನಲ್ಲವಿರುವುದರಿಂದ ಮೇರುನಾಮಕನಾಗಿ ಮೇರುವಿಗೆ ಶ್ರೇಷ್ಠತ್ವಪ್ರದನಾಗಿರುವೆನು. ॥೨೫॥

ಪುರೋಧಸಾಂಚ ಮುಖ್ಯಂ ಮಾಂ ವಿದ್ಧಿ ಪಾರ್ಥ ಬೃಹಸ್ಪತಿಮ್ ।
ಸೇನಾನೀನಾಮಹಂ ಸ್ಕಂದಃ ಸರಸಾಮಸ್ಮಿ ಸಾಗರಃ ॥ ೨೪ ॥

ಪುರೋಹಿತರಲ್ಲಿ ಮುಖ್ಯನಾದ ಬೃಹಸ್ಪತಿಗೆ ಶ್ರೇಷ್ಠತ್ವವನ್ನು ಕೊಡುವ ಬೃಹತ್ತುಗಳಿಗೆ ಸ್ವಾಮಿಯಾದ ಕಾರಣ ಬೃಹಸ್ಪತಿ ಎಂಬ ರೂಪದಿಂದ ನಾನಿರುವೆನೆಂದು ಎಲೈ ಪೃಥಾಸುತನಾದ ಅರ್ಜುನನೆ ! ನೀನು ತಿಳಿ. ಸೇನಾನಾಯಕರಲ್ಲಿ ಸ್ಕಂದನಿಗೆ ಶ್ರೇಷ್ಠತ್ವವನ್ನು ಕೊಡುವಂತಹ ಸ್ಕಂದನ ನಿಮಿತ್ತದಿಂದ ಸ್ಕಂದನಾಮಕವಾದ ರೂಪದಿಂದ ನಾನಿರುವೆನು. ಸರೋವರಗಳಲ್ಲಿ ಸಮುದ್ರಕ್ಕೆ ಶ್ರೇಷ್ಠತ್ವವನ್ನು ಕೊಡುವ ಸಾರಭೋಕ್ತೃತ್ವನಿಮಿತ್ತದಿಂದ ಸಾಗರ ಶಬ್ದವಾಚ್ಯನಾಗಿರುವೆನು॥೨೪॥

ಮಹರ್ಷೀಣಾಮಹಂ ಭೃಗುರಹಂ ಗಿರಾಮಸ್ಮ್ಯೇಕಮಕ್ಷರಮ್ ।
ಯಜ್ಞಾನಾಂ ಜಪಯಜ್ಞೋಽಸ್ಮಿ ಸ್ಥಾವರಾಣಾಂ ಹಿಮಾಲಯಃ ॥೨೫॥

ಮಹರ್ಷಿಗಳಲ್ಲಿ ಭೃಗುವಿಗೆ ಮುಖ್ಯತ್ವವನ್ನುಂಟುಮಾಡುವ ನಿರೋಧಿಗಳಿಗೆ ತಾಪಕರವಾದ ನಿಮಿತ್ತದಿಂದ ಭೃಗುನಾಮಕ ರೂಪದಿಂದಿರುವೆನು. ಯಜ್ಞಗಳಲ್ಲಿ ಜಪರೂಪವಾದ ಯಜ್ಞಕ್ಕೆ ಮುಖ್ಯತ್ವ ಸಂಪಾದಕನಾಗಿ ಪುಟ್ಟದುಃಖವನ್ನು ರಕ್ಷಿಸುವನಾದಕಾರಣ ಜಪವೆಂತಲು, ಪೂಜಾರ್ಹನಾದಕಾರಣ ಯಜ್ಞನೆಂತಲು ಕರೆಸಿಕೊಳ್ಳಲ್ಪಡುತ್ತಾ ಜಪಯಜ್ಞ ನಾಮಕನಾಗಿರುವೆನು. ಗತಿಹೀನವಾದ ಸ್ಥಿರವಾದ ವಸ್ತುಗಳಲ್ಲಿ ಹಿಮವತ್ಪರ್ವತಕ್ಕೆ ಶ್ರೇಷ್ಠತಾ ಪ್ರದವಾಗಿರುವ ಹ್ರೀವುತ್ವ

ಶ್ರೀಲಕ್ಷ್ಮೀದೇವಿಯರಿಗೆ ಆಶ್ರಯನಾದ ಕಾರಣ ಹಿಮಾಲಯ ಶಬ್ದವಾಚ್ಯವಾದ ರೂಪದಿಂದ ನಾನಿರುವೆನು. ॥ ೬೫ ॥

ಅಶ್ವತ್ಥಃ ಸರ್ವವೃಕ್ಷಾಣಾಂ ದೇವರ್ಷೀಣಾಂಚ ನಾರದಃ ।
ಗಂಧರ್ವಾಣಾಂ ಚಿತ್ರರಥಃ ಸಿದ್ಧಾನಾಂ ಕಪಿಲೋ ಮುನಿಃ ॥ ೬೬ ॥

ವೃಕ್ಷಗಳಲ್ಲಿ ಅಶ್ವತ್ಥಕ್ಕೆ ಶ್ರೇಷ್ಠತ್ವವನ್ನು ಕೊಡುವ ಅಶ್ವದಂತೆ ಇರುವ ಕಾರಣ ಅಶ್ವತ್ಥನಾಮಕವಾದ ರೂಪದಿಂದ ನಾನಿರುವೆನು. ದೇವರ್ಷಿಗಳಲ್ಲಿ ನಾರದರಿಗೆ ಶ್ರೇಷ್ಠತಾ ಸಂಪಾದಕವಾದ ನರರಿಗೆ ಇಷ್ಟವನ್ನು ಕೊಡುವನಾದ ಕಾರಣ ನಾರದ ನಾಮಕನಾಗಿ ನಾರದರಲ್ಲಿರುವೆನು. ಗಂಧರ್ವರಲ್ಲಿ ಚಿತ್ರರಥನಿಗೆ ಶ್ರೇಷ್ಠತ್ವವ್ಯಪದವಾದ ವಿಚಿತ್ರವಾದ ರಥವುಳ್ಳವನಾದ ಕಾರಣ ಚಿತ್ರರಥನಾಮಕವಾದ ರೂಪದಿಂದಿರುವೆನು. ಸಿದ್ಧರಲ್ಲಿ ಕಪಿಲಮುನಿಯಾಗಿರುವೆನು. ಸುಖರೂಪನಾದುದರಿಂದ ‘ಕ’ ಎಂತಲು, ಪೋಲನೆಮಾಡುವುದರಿಂದ ‘ಪಿ’ ಎಂತಲು, ಲಯಾತ್ಮಕ ಕರ್ತೃವಾದ ಕಾರಣ ‘ಲ’ ಎಂತಲು ಕಪಿಲಪದದ ಅರ್ಥವು. ಇದು ಭಗವಂತನ ಪ್ರತ್ಯಕ್ಷರೂಪವು. ॥ ೬೬ ॥

ಉಚ್ಚೈಃಶ್ರವಸಮಶ್ವಾನಾಂ ವಿದ್ಧಿಮಾಮಮೃತೋದ್ಭವಮ್ ।
ಐರಾವತಂ ಗಜೇಂದ್ರಾಣಾಂ ನರಾಣಾಂಚ ನರಾಧಿಪಮ್ ॥ ೬೭ ॥

ಕ್ಷೀರಸಮುದ್ರದಲ್ಲಿ ಹುಟ್ಟಿದಂತಹ ಉಚ್ಚೈಃಶ್ರವವೆನ್ನೆಂಬ ಅಶ್ವಕ್ಕೆ ಮುಖ್ಯತ್ವವನ್ನು ಕೊಡುವಂತಹ ಅಧಿಕವಾದ ಕೀರ್ತಿಯುಳ್ಳವನಾದಕಾರಣ ಉಚ್ಚೈಃಶ್ರವೋನಾಮಕನಾಗಿರುವವನು ನಾನೆಂದು ತಿಳಿ. ಗಜೇಂದ್ರರುಗಳಲ್ಲಿ ಐರಾವತಕ್ಕೆ ಶ್ರೇಷ್ಠತ್ವವನ್ನು ಕೊಡುವಂತಹ ಲಕ್ಷ್ಮೀರಕ್ಷಕನಾದ ಕಾರಣ ಐರಾವತ ನಾಮಕವಾದ ರೂಪದಿಂದ ಇರುವವನಾಗಿ ನನ್ನನ್ನು ತಿಳಿ. ಚಕ್ರವರ್ತಿಮೊದಲಾದವರುಗಳಿಗೆ ಶ್ರೇಷ್ಠತ್ವ ಸಂಪಾದಕವಾದ ನರೇಶ್ವರತ್ವಕಾರಣದಿಂದ ನರಾಧಿಪನಾಮಕ ರೂಪವಂತನು ನಾನೇ ಎಂದು ತಿಳಿ. ॥ ೬೭ ॥

ಆಯುಧಾನಾಮಹಂ ವಜ್ರಂ ಧೇನೂನಾಮಸ್ಮಿ ಕಾಮಧುಕ್ ।
ಪ್ರಜನಶ್ಚಾಸ್ಮಿ ಕಂದರ್ಪಃ ಸರ್ಪಾಣಾಮಸ್ಮಿ ವಾಸುಕಿಃ ॥ ೬೮ ॥

ಆಯುಧಗಳಲ್ಲಿ ಸರ್ವದೋಷವರ್ಜನದ ನಿಮಿತ್ತದಿಂದ ವಜ್ರನಾಮಕನಾಗಿ ಇಂದ್ರಾಯುಧದಲ್ಲಿರುವೆನು. ಗೋವುಗಳಲ್ಲಿ ಕಾಮಿತಾರ್ಥವನ್ನು ಕೊಡುವ ನಿಮಿತ್ತದಿಂದ ಕಾಮಧುಕ್ಕಾಮಕನಾಗಿ ಕಾಮಧೇನುವಿನಲ್ಲಿರುವೆನು. ಸುಖಸ್ಪರ್ಶಭೇದಗಳನ್ನು ಅನುಭವಿಸುವ ನಿಮಿತ್ತದಿಂದ ಕಂದರ್ಪನಾಮಕನಾಗಿ ಸುಂದರರೂಪ ಜನಕನಾದ ಮನ್ಮಥನಲ್ಲಿರುವೆನು. ಒಂದು ತಲೆಯುಳ್ಳ ಸರ್ಪಗಳಲ್ಲಿ ವಾಸವಿಂದಾಗುವ ಸುಖವುಳ್ಳವನಾದ ಕಾರಣ ವಾಸುಕಿನಾಮಕನಾಗಿ ವಾಸುಕಿಯಲ್ಲಿರುವೆನು. ॥ ೨೯ ॥

ಅನಂತಶ್ಚಾಸ್ಮಿ ನಾಗಾನಾಂ ವರುಣೋ ಯಾದಸಾಮಹಮ್ ।
ಪಿತೃಣಾಮರ್ಯಮಾ ಚಾಸ್ಮಿ ಯಮಃ ಕವಯತಾಮಹಮ್ ॥ ೩೦ ॥

ಅನೇಕ ತಲೆಗಳುಳ್ಳ ಸರ್ಪಗಳಲ್ಲಿ ದೇಶಕಾಲಗಳಿಂದ ಅನಂತನಾಗಿರುವ ನಿಮಿತ್ತದಿಂದ ಅನಂತನಾಮಕನಾಗಿ ಶೇಷನಲ್ಲಿರುವೆನು. ಜಲಚರ ಜಂತುಗಳಲ್ಲಿ ಉತ್ಕೃಷ್ಟನೆಂದ ಪ್ರಸಿದ್ಧನಾದ ಕಾರಣ ಅಥವಾ ಸ್ವೀಕರಿಸುವ ಕಾರಣ ವರುಣನಾಮಕನಾಗಿ ವರುಣನಲ್ಲಿರುವೆನು. ಪಿತೃಗಳಲ್ಲಿ ಜ್ಯೇಷ್ಠನಾಗಿರುವ ಕಾರಣ ಯಮನಾಮಕನಾಗಿ ಯಮನಲ್ಲಿ ಸಾರ್ವಭೌಮನಾಗಿರುವೆನು. ॥ ೩೦ ॥

ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ ಕಾಲಃ ಕಲಯತಾಮಹಮ್ ।
ಮೃಗಾಣಾಂಚ ಮೃಗೇಂದ್ರೋಹಂ ವೈನತೇಯಶ್ಚ ಪಕ್ಷಿಣಾಂ ॥ ೩೧ ॥

ದೈತ್ಯರೊಳಗೆ ಉತ್ಕೃಷ್ಟವಾದ ಆನಂದವುಳ್ಳವನಾದಕಾರಣ ಪ್ರಹ್ಲಾದನೆಂದು ಹೆಸರುಳ್ಳವನಾಗಿ ಪ್ರಹ್ಲಾದನಲ್ಲಿರುವೆನು. ತಿಳಿಯುವ ಅಥವಾ ಬಂಧನಾದಿಗಳನ್ನು ಮಾಡುವ ಜನರೊಳಗೆ ಸರ್ವವನ್ನೂ ಅರಿತವನಾದಕಾರಣ ಕಾಲನಾಮಕನಾಗಿ ಕಾಲದಲ್ಲಿರುವೆನು. ಮೃಗಗಳೊಳಗೆ ನನ್ನ ಸ್ವರೂಪವನ್ನು ವಿಚಾರಿಸುವವರಲ್ಲಿ ಶ್ರೇಷ್ಠನಾದ ಕಾರಣ ಮೃಗೇಂದ್ರನಾಮಕನಾಗಿ ಸಿಂಹದಲ್ಲಿರುವೆನು. ಪಕ್ಷಿಗಳೊಳಗೆ ಅತ್ಯಂತ ನನ್ನವನಾದವರುಗಳಿಗೆ ಆಶ್ರಯನಾದಕಾರಣ ವೈನತೇಯನೆಂದು ಹೆಸರುಳ್ಳವನಾಗಿ ಗರುಡನಲ್ಲಿರುವೆನು. ॥ ೩೧ ॥

ಪವನಃ ಪವತಾಮಸ್ಮಿ ರಾಮಃ ಶಸ್ತ್ರಭೃತಾಮಹಮ್ ॥
ಝಷಾಣಾಂ ಮಕರಶ್ಚಾಸ್ಮಿ ಸ್ರೋತಸಾಮಸ್ಮಿ ಜಾಹ್ನವೀ ॥ ೩೨ ॥

ನೈಗಚಕ್ರವರ್ತಿ.

ಭಾ. ಸ್ಕ. ೧೦. ಉ. ಅ. ೮೩.

ಶ್ರೀಕೃಷ್ಣನು ದ್ವಾರವತಿಯಲ್ಲಿ ಧರ್ಮವನ್ನು ಸಂರಕ್ಷಿಸುತ್ತಿರುವ ಕಾಲದಲ್ಲಿ ಒಂದಾನೊಂದುದಿನ ಯದುಕುಮಾರರಾದ ಸಾಂಬ-ಪ್ರದ್ಯುಮ್ನ-ಗದಾದಿಗಳು ಕ್ರೀಡಾರ್ಥವಾಗಿ ಉಪವನವನ್ನು ಕುರಿತು ಹೋದರು. ಅಲ್ಲಿ ಯಥೇಚ್ಛವಾಗಿ ವಿಹಾರಮಾಡಿದುದರಿಂದ ಬಾಯಾರಿ ನೀರಿಗಾಗಿ ಅಲೆಯಲಾರಂಭಿಸಿದರು. ಹೀಗೆ ನೀರನ್ನು ಹುಡುಕಿಕೊಂಡು ಹೋಗುತ್ತಿರುವಾಗ ನಿರ್ಜಲವಾದ ಭಾವಿಯಲ್ಲಿ ಒಂದು ದೊಡ್ಡದಾದ ಪರ್ವತಾಕಾರವಾಗಿರುವ ಕೃಕಲಾಸವು (ತೊಂಡೇಕೇತ) ಬಿದ್ದಿದ್ದುದನ್ನು ನೋಡಿ ವಿಸ್ಮಿತರಾಗಿ ಅದನ್ನು ಆ ಕೂಪದಿಂದ ಈಚೆಗೆ ಕೃಪೆಯಿಂದ ತೆಗೆದುಹಾಕಬೇಕೆಂದು ಪ್ರಯತ್ನಮಾಡಿದರು. ಚರ್ಮ-ಪಾಶ ಇವುಗಳಿಂದ ಕಟ್ಟಿ ಆ ಹುಡುಗರುಗಳು ಅದನ್ನು ಮೇಲಿಕ್ಕೆತ್ತಲು ಬಹು ಸಾಹಸವನ್ನು ತೋರಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಅವರುಗಳು ಈ ವಿಚಾರವನ್ನು ಔತ್ಸುಕ್ಯದಿಂದ ಶ್ರೀ ಕೃಷ್ಣನಿಗೆ ವಿಜ್ಞಾಪಿಸಿಕೊಂಡರು. ಆಗ ಕೃಷ್ಣನು ಆಕೃಕಲಾಸವು ಬಿದ್ದಿದ್ದ ಭಾವಿಯ ಸಮೀಪಕ್ಕೆ ಹೋಗಿ ತನ್ನ ವಾಮ ಹಸ್ತದಿಂದ ಅದನ್ನು ಮೇಲಕ್ಕೆತ್ತಿ ಹಾಕಿದನು. ಆಗ ಶ್ರೀ ಪುಂಡರೀಕಾಕ್ಷನ ಕರಾಭಿಸ್ಪರ್ಶವಾಗಲು ತಕ್ಷಣ ತೊಂಡೆಯಕೇತದ ರೂಪವನ್ನು ಬಿಟ್ಟು ಪುಟಕ್ಕೆ ಹಾಕಿದ ಭಾಗಾರದ ಛಾಯೆಯಂತೆ ರೂಪವನ್ನು ತಾಳಿ ಸ್ವರ್ಗಲೋಕೋಚಿತವಾದ ವೇಷದಿಂದ ಮುಕುಂದನ ಪಾದಾರವಿಂದದಲ್ಲಿ ತನ್ನ ತಲೆಯನ್ನಿಟ್ಟು ಸಾಷ್ಟಾಂಗ ಪ್ರಣಾಮವನ್ನು ಮಾಡಿದನು. ಶ್ರೀಕೃಷ್ಣನು ಅವನನ್ನೆಬ್ಬಿಸಿ ಆ ಮನುಷ್ಯನ ಕರ್ಮಗಳೆಲ್ಲವನ್ನು ತಿಳಿದವನಾಗಿದ್ದರೂ ಜನಗಳಲ್ಲಿ ಖ್ಯಾತಿಪಡಿಸುವ ಉದ್ದೇಶದಿಂದ ಅವನನ್ನು ಪ್ರಶ್ನೆಮಾಡಿದನು.

ಎಲೈ ಮಹಾಭಾಗನೆ! ಉತ್ಕೃಷ್ಟವಾದ ರೂಪವುಳ್ಳವನಾದ ನೀನು ಯಾರು? ನಿನ್ನನ್ನು ನಾನು ದೇವೋತ್ತಮನೆಂದು ಖಂಡಿತವಾಗಿಯೂ ತಿಳಿದಿದ್ದೇನೆ. ನೀನು ಇಂತಹ ಅವಸ್ಥೆಯನ್ನು ಏನು ಕರ್ಮವನ್ನು ಮಾಡಿ ಹೊಂದಿದೆ? ಇಂತಹ ಕರ್ಮಕ್ಕೆ ನೀನು ಅರ್ಹನಲ್ಲವೆ? ನಿನ್ನ ಚರಿತ್ರೆಯನ್ನು ಕೇಳಬೇಕೆಂದು.

ಶ್ರೀಮನ್ಮಧ್ವಸಿದ್ಧಾಂತಪ್ರಕಾಶಿನೀ

ಆಶಿಪಡುತ್ತಿರುವ ನನ್ನ್ಮಗಳಿಗೆ ತಿಳಿಸು. ಈ ಪ್ರಕಾರ ಅನಂತರೂಪಿಯಾದ ಕೃಷ್ಣ ನಿಂದ ಕೇಳಿಸಿಕೊಂಡ ರಾಜನು ಒಪ್ಪಿಕೊಂಡು ಸೂರ್ಯನಂತೆ ಪ್ರಕಾಶಮಾನ ವಾದ ಕಿರೀಟವನ್ನು ಧರಿಸಿದ್ದ ಮೌಳಿಯಿಂದ ನಮಸ್ಕರಿಸಿ ಹೇಳುತ್ತಾನೆ.

ಎಲೈ ಪ್ರಭುವೆ ! ನಾನು ಇಕ್ಷ್ವಾಕುಪುತ್ರನಾದ ನೃಗಮಹಾರಾಜನು. ದಾನಮಾಡುವುದರಲ್ಲಿ ಶ್ರೇಷ್ಠರಾದವರನ್ನು ಎಣಿಕೆಮಾಡುವಾಗ ನನ್ನ ಹೆಸರೂ ನಿನ್ನ ಕಿವಿಗೆ ಬಿದ್ದಿರಬಹುದು. ಸರ್ವಭೂತ ಹೃದಯದಲ್ಲಿಯೂ ಸಾಕ್ಷಿಯಾಗಿ ರತಕ್ಕ ನಿನಗೆ ತಿಳಿಯದೆ ಇರಕಕ್ಕುದು ಯಾವುದೂ ಇಲ್ಲ. ಯಾವಕಾಲದಲ್ಲಿಯೂ ಜ್ಞಾನತಿರೋಧಾನಾದಿಗಳಿಲ್ಲದೆ ನಿರ್ದುಷ್ಟನಾದ ನಿನ್ನ ಆದೇಶಾನುಸಾರವಾ ಗಿಯೂ ನಾನುಮಾಡಿದ ದುಷ್ಕರ್ಮಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದಕ್ಕೂ ನನ್ನ ಚರಿತ್ರೆಯನ್ನು ಹೇಳುತ್ತೇನೆ. ನಾನು ಹಿಂದೆ ಭೂಮಿಯಲ್ಲಿ ಎಷ್ಟು ರೇಣು ಗಳಿವೆಯೋ, ಅಂತರಿಕ್ಷದಲ್ಲಿ ಎಷ್ಟು ನಕ್ಷತ್ರಗಳಿವೆಯೋ, ಮತ್ತು ಪರ್ಜನ್ಯರುವ ಕಾಲದಲ್ಲಿ ಬೀಳುವ ವರ್ಷಧಾರೆಗಳೆಷ್ಟು ಬೀಳುವುವೊ ಅಷ್ಟು ಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡಿದೆನೆ. ಆ ಗೋವುಗಳು ಹೇಗಿತ್ತೆಂದರೆ-ಹಾಲುಕರ ಯುತ್ತಿದ್ದುದು, ತಾರುಣ್ಯದಲ್ಲಿರುವುದು, ಶೀಲ-ರೂಪ-ಗುಣ ಸಂಪನ್ನವು, ಕಪಿಲ ವರ್ಣಯುಕ್ತವು, ಭಂಗಾರದ ಶೃಂಗಗಳುಳ್ಳದು, ನ್ಯಾಯವಾಗಿ ಆರ್ಜಿಸಿದುದು, ಬೆಳ್ಳಿಯಗೊರಸುಗಳುಳ್ಳದು, ಕರುವಿನಿಂದ ಕೂಡಿದುದು, ಬಟ್ಟೆ-ಮಾಲಿಕೆ-ಆಭ ರಣ ಇವುಗಳಿಂದ ಮಂಡಿತವಾದುದು ಆಗಿದ್ದವು. ಇಂತಹವುಗಳನ್ನು ಬ್ರಾಹ್ಮ ಣೋ ಚಿತವಾದ ಚಿಹ್ನಗಳನ್ನು ಧರಿಸಿದವರು, ಗುಣಶೀಲಸಂಪನ್ನರು, ಕುಟುಂಭಭರ ಣಾರ್ಥವಾಗಿ ಕಷ್ಟಪಡುತ್ತಿರುವರು, ಸತ್ಪಜ್ಞಾನವುಳ್ಳವರು, ತಪಸ್ಸು ವೇದಾ ಧ್ಯಯನ ಇವುಗಳಿಂದ ಶೋಭಿತರು, ದಾನಶೀಲರು ಆದ ಬ್ರಾಹ್ಮಣ ಶ್ರೀಕೃಷ್ಣ ಗೋಸ್ವರ ಮನಃಪೂರ್ವಕವಾಗಿ ದಾನಮಾಡಿದೆನೆ. ಇಷ್ಟೇ ಅಲ್ಲದೆ ಆ ಬ್ರಾ ಹ್ಮಣರುಗಳಿಗೆ ಎತ್ತುಗಳು-ಭೂಮಿ-ಮನೆ-ಕಾಸುರೆ -ಆನೆಗಳ-ದಾಸೆಯರಿಂದ ಸಹಿತರಾದ ಕನ್ನಿಕೆಯರು-ತಿಲ--ಬೆಳ್ಳಿ-ಭಂಗಾರ-ಪಾಸಿಗೆ-ಒಬ್ಬಿಗಳು-ರತ್ನಗಳು-ಡೇರೆಗಳು-ರಥಗಳು-ಯಜ್ಞೋಚಿತವಾದ ಸಾಮಗ್ರಿಗಳು ಮುಂತಾದವುಗಳನ್ನೂ ಕೊಟ್ಟಿದೆನೆ.

ಹೀಗಿರುವಾಗ ಒಂದಾನೊಂದುದಿನ ಒಬ್ಬ ಬ್ರಾಹ್ಮಣನ ಒಂದು ಗೌವು ನನ್ನ ಗೋಶಾಲೆಯಲ್ಲಿ ಹೇಗೋ ಬಂದು ಸೇರಿಬಿಟ್ಟಿತು. ಅದನ್ನು ನಾನು ತಿಳಿದು ಕೊಳ್ಳದೆ ಆ ಗೋವು ಸಹಿತವಾಗಿ ಅದಿನ ಮತ್ತೊಬ್ಬ ಬ್ರಾಹ್ಮಣನಿಗೆ ದಾನ

ಮಾಡಿಬಿಟ್ಟೆ. ಆ ಬ್ರಾಹ್ಮಣನು ಗೋವುಗಳನ್ನು ತೆಗೆದುಕೊಂಡು ಹೋಗುತ್ತಿರು ವಾಗ ಆ ಗೋವಿನ ಸ್ವಾಮಿಯು ಆ ಗೋವನ್ನು ಹಿಡಿದುಕೊಂಡು ' ಈ ಗೋವು ನನ್ನದು' ಎಂದು ಆ ಬ್ರಾಹ್ಮಣನನ್ನು ಕೇಳಿದನು. ಆ ಬ್ರಾಹ್ಮಣನು ಆ ಗೋವ ನ್ನು ಹಿಡಿದುಕೊಂಡು 'ಈ ಗೋವು ನನ್ನದು, ನನಗೆ ನೃಗಮಹಾರಾಜನು ಕೊಟ್ಟಿ ದಾನೆ ' ಎಂದು ಹೇಳಿದನು. ಹೀಗೆ ಆ ಬ್ರಾಹ್ಮಣರು ಜಗಳವಾಡುತ್ತಾ ನನ್ನ ಹತ್ತಿರಕ್ಕೆ ತೀರ್ಮಾನಕ್ಕಾಗಿ ಬಂದು ಹೇಳಿಕೊಂಡರು. ಎಲೈ ರಾಜನೆ ! ನೀನೇ ಕೊಟ್ಟು ನನ್ನ ಗೋವನ್ನು ಅಪಹರಿಸುವೆಯಾ ? ಎಂದು ದಾನವನ್ನು ಪಡದ ಇಬ್ಬರು ಬ್ರಾಹ್ಮಣರೂ ನನ್ನನು ಕುರಿತು ವಾತನಾಡಿದರು. ಈ ಮಾತನ್ನು ಕೇಳಿ ನನಗೆ ವಿಸ್ಮಯವುಂಟಾಯಿತು. ಧರ್ಮವಿಷಯದಲ್ಲಿ ಕೃಧ್ರವೆಂದರ ಕಷ್ಟ ವನ್ನು ಹೊಂದಿರುವ ನನ್ನಿಂದ ಸಮಾಧಾನವನ್ನು ಹೊಂದಿಸಲು ಆ ಬ್ರಾಹ್ಮಣರು ಸಾಧ್ಯರಾಗಲಿಲ್ಲ.

ಆಗ ನಾನು ಲಕ್ಷ ಗೋವುಗಳನ್ನು ಕೊಡುತ್ತೇನೆ. ಈ ಗೋವನ್ನು ಕೊಡ ಟ್ಟುಬಿಡಿ ಎಂದು ಕೇಳಿದೆ. ಇಬ್ಬರೆನ್ನು " ಅನುಗ್ರಹವಾಡಬೇಕು. ತಿಳಿಯದೆ ಮಾಡಿದಂತಹ ಕಿರಿಕರನ ತಪ್ಪನ್ನು ಕ್ಷಮಿಸಬೇಕು. ಅಲ್ಲದೆ ನಾನು ನರಕದಲ್ಲಿ ಬಿದ್ದು ಬಹು ಕಷ್ಟಪಡಬೇಕಾಗುತ್ತದೆ. ಆದುದರಿಂದ ಹೇಗಾದರೂ ಮಾಡಿ ನನ್ನನ್ನು ಉದ್ಧರಿಸಿ " ಎಂದು ಕೇಳಿಕೊಂಡೆ. ಆಗ ಆ ಬ್ರಾಹ್ಮಣನು ನನಗೆ ಯಾವದೂ ಬೇಡ. ಈ ಗೋವು ಮಾತ್ರವೇ ಬೇಕು. ಎಂದು ಹೇಳಿ ಅವನೂ ಹೊರಟುಹೋದನು. ಮತ್ತೊಬ್ಬನು ಅದರ ಮೇಲೂ ಹತ್ತುಸಾವಿರ ಹೆಚ್ಚಾಗಿ ಕೊಟ್ಟರೂ ಬೇಡ. ಈ ಗೋವೇ ಬೇಕು ಎಂದು ಹೇಳಿ ಅವನೂ ಹೊರಟು ಹೋದನು. ಅನಂತರ ಮೃತ್ಯುಕಾಲವು ಸಮೀಪಿಸಿತು. ಪರಮಾತ್ಮನ ಇಚ್ಛೆ ಯಿಂದ ನಾನು ಮೃತನಾದೆನು. ಆಗ ಯಮರಾಜನ ದೂತರು ಯಮಮಂದಿರ ವನ್ನು ಕುರಿತು ನನ್ನನು ಕರೆದುಕೊಂಡು ಹೋದರು. ಅಲ್ಲಿ ಯಮನು ನನ್ನನು ಕು ರಿತು, "ಎಲೈ ದೇವದೇವ! ನೈವತೆ! ನೀನು ಸ್ವಧರ್ಮವಲ್ಲ ಅಶುಭವಾದ ಪಾಪ ವನ್ನು ಅನುಭವಿಸುತ್ತೀಯಾ ? ಅಥವಾ ಪುಣ್ಯವನ್ನು ಅನುಭವಿಸುವೆಯಾ ? ನಿನ್ನ ದಾನ ಮತ್ತು ಧರ್ಮ ಇವುಗಳಿಗೆ ತಕ್ಕಂತಹ ಪ್ರಕಾಶಮಾನವಾದ ಲೋಕ ಗಳು ಅನಂತವಾಗಿವೆ " ಎಂದು ಹೇಳಲು, ನಾನು ಮೊದಲು ಪಾಪವನ್ನೆ ಅನು ಭವಿಸುವೆನೆಂದು ಹೇಳಿದೆ. ಆಗ ಯಮನು ಪುನಃ ಜನ್ಮವನ್ನು ಹೊಂದು. ಕೆಳಗೆ ಬೀಳು ಎಂದು ಹೇಳಿದನು. ಎಲೈ ಪ್ರಭುವೆ! ಬೀಳುತ್ತಿರುವ ನಾನು ನನ್ನ ದೇಹ

ವನ್ನು ನೋಡಿಕೊಂಡೆ. ಕೃಕಲಾಸ ರೂಪವಾಗಿತ್ತು. ಎಲೈ ಕೇಶವ! ಬ್ರಹ್ಮ ನಿಷ್ಠನು, ಮತ್ತು ದಾನಾಗ್ರಣಿಯು, ಆದ ನಿನ್ನ ಸಂದರ್ಶನಾರ್ಥಿಯಾದ ದಾಸ ನಿಗೆ ನಿನ್ನ ಸಂಬಂಧಿಯಾದ ಸ್ಮೃತಿಯು ಈಗಲೂ ಹೋಗಿರಲಿಲ್ಲ, ಎಂದು ಹೇಳಿ ಮುಂದೆ ಹೇಳುವ ಪ್ರಕಾರ ಸ್ತುತಿಮಾಡಲಾರಂಭಿಸಿದನು.

ಎಲೈ ದೇವದೇವ! ಜಗನ್ನಾಥ! ಗೋವಿಂದ! ಪುರುಷೋತ್ತಮ! ನಾರಾಯಣ! ಹೃಷೀಕೇಶ! ಪುಣ್ಯಶ್ಲೋಕ! ಅಚ್ಯುತ! ಅವ್ಯಯ! ಕೃಷ್ಣ! ನಾನು ದೇವತೆಗಳ ಸ್ಥಾನವಾದ ಸ್ವರ್ಗವನ್ನು ಕುರಿತು ಹೋಗುವು ದಕ್ಕೆ ಅಪ್ಪಣೆಯನ್ನು ಕೊಡು; ಮತ್ತು ನನಗೆ ಯಾವದಾದರೂ ಯೋನಿವಿಶೇಷ ದಲ್ಲಿ ಜನ್ಮವು ಪ್ರಾಪ್ತವಾದರೂ ನಿನ್ನ ಪಾದಸೇವನೆಯಲ್ಲಿ ಸ್ಮರಣವಿರುವಂತೆ ಮಾತ್ರ ಬುದ್ಧಿಯಿರುವಂತೆ ಮಾಡು ಎಂದು ನೃಗಚಕ್ರವರ್ತಿಯು ಪ್ರಾರ್ಥಿಸಿ, ಪಾದಸ್ಪರ್ಶವನ್ನು ತನ್ನ ಶಿರಸ್ಸಿನಿಂದಮಾಡಿ ಅಪ್ಪಣೆಯನ್ನು ಪಡೆದು ತನ ಗಾಗಿ ಬಂದು ಕಾದಿರುವ ವಿಮಾನದಲ್ಲಿ ಸಕಲಜನರೂ ನೋಡುತ್ತಿದ್ದ ಹಾಗೆಯೇ ಸ್ವರ್ಗಲೋಕವನ್ನು ಕುರಿತು ಹೊರಟುಹೋದನು.

ಹೀಗೆ ನಡೆದ ಸಂಭ್ರಮವನ್ನು ನೋಡುತ್ತಿದ್ದವರನ್ನು ಸಂಬೋಧಿಸಿ ದೇವಕೀಸುತನಾದ ಬ್ರಹ್ಮಜ್ಞಾನಿಗಳ ದೇವನೂ ಆದ ಶ್ರೀ ಕೃಷ್ಣನು ರಾಜರುಗ ಳನ್ನು ಶಿಕ್ಷೆಮಾಡುತ್ತಾ ಹೀಗೆ ಉಪದೇಶಮಾಡಿದನು. ಬ್ರಾಹ್ಮಣರ ಪದಾರ್ಥವು ಸ್ವಲ್ಪವಾಗಿದ್ದರೂ ಕೂಡ ಮಹಾ ತೇಜಸ್ವಿಯಾದ ಅಗ್ನಿಯಿಂದಲೂ ಜೀರ್ಣಿ ಸಲು ಶಕ್ಯವಲ್ಲ. ಇನ್ನು ಹೀಗಿರಲು ತಾವು ಯಜಮಾನರೆಂದು ತಿಳಿದುಕೊಂಡಿ ರುವ ರಾಜರುಗಳಿಗೆ ಜೀರ್ಣವಾಗುವುದಲ್ಲವೆಂದು ಹೇಳತಕ್ಕುದೇನು. ಹಾಲಾಹಲ ನಾಮಕವಾದ ವಿಷವು ವಿಷವೆಂದು ನಾನು ತಿಳಿಯಲಾರೆ. ಏಕೆ ಎಂದರೆ ಅಂತಹ ವಿಷಕ್ಕೂ ಪ್ರತಿಕ್ರಿಯೆಯುಂಟು. ಆದರೆ ಬ್ರಹ್ಮಸ್ವವೆಂಬುದೇ ವಿಷವೆಂದು ತಿಳಿ ಯಬೇಕಾಗಿದೆ. ಏಕೆಂದರೆ ಇದಕ್ಕೆ ಪ್ರತಿಕ್ರಿಯೆಯೇ ಭೂಮಿಯಲ್ಲಿಲ್ಲ. ಅರಿ ತವಿಷವೂ ಭುಜಿಸಿದ ಒಬ್ಬನನ್ನು ಕೊಲ್ಲಲು ಸಮರ್ಥವಾಗಿರುತ್ತದೆ. ಅಗ್ನಿ ಯಾದರೋ ನಿರುಬೀಳುವುದರಿಂದ ಅರಿಹೋಗಿರುತ್ತದೆ. ಆದರೆ ಬ್ರಹ್ಮಸ್ವವೆಂಬ ಅರಣಿಯಲ್ಲುದ್ಭವಿಸಿದ ಅಗ್ನಿಯು ಕುಲದಲ್ಲಿರತಕ್ಕ ಸಕಲರನ್ನೂ ಸುಟ್ಟುಬಿಡು ತ್ತದೆ. ಒಂದುವೇಳೆ ಇದು ಬ್ರಹ್ಮಸ್ವವೆಂದು ತಿಳಿಯದೆ ಭುಜಿಸಿದವನ ಕುಲದಲ್ಲಿ ಮೂರುತಲೆಯ ಪರ್ಯಂತವನ್ನಾದರೂ ನಾಶಮಾಡುವುದು. ಬಲಾತ್ಕಾರದಿಂದ ಬ್ರಹ್ಮಸ್ವವನ್ನು ಅಪಹರಿಸಿ ತಿಂದದ್ದೇ ಆದರೆ ಹಿಂದಿನ ಹತ್ತುತಲೆಗಳನ್ನು ನಾಶಮಾ

ಡುತ್ತದೆ. ಮುಂದೆಬರುವ ಹೆತ್ತು ತಲೆಗಳನ್ನು ನಾಶಮಾಡುತ್ತದೆ. ಬ್ರಹ್ಮಸ್ವಾ
ಪಹರಣ ಮಾಡಿದ ರಾಜರು ತಮ್ಮ ರಾಜ್ಯಲಕ್ಷ್ಮಿಯನ್ನು ಕಳೆದುಕೊಂಡು ನರಕ
ದಲ್ಲಿ ಬೀಳುತ್ತಾರೆ. ಅಲ್ಲದೆ ಬ್ರಹ್ಮಸ್ವವನ್ನು ಒಳ್ಳೆಯದೆಂದು ತಿಳಿಯತಕ್ಕವರು
ಕೇವಲ ಬಾಲಿಶರು ಎಂದರೆ ಏನೂ ತಿಳಿಯದೆ ಇರತಕ್ಕವರು. ದಾನಶೀಲರಾಗಿ
ಯು ಕುಟುಂಬಿಗಳಾಗಿಯು ಇರತಕ್ಕ ಬ್ರಾಹ್ಮಣರುಗಳ ವೃತ್ತಿಗಳನ್ನು ಅಪಹರಿ
ಸಿದ ತಮಗೆದುರಿಲ್ಲವೆಂಬ ರಾಜರುಗಳು ಅವರ ಕುಲದವರೂ ಸಹ ಬ್ರಾಹ್ಮಣರ
ದುಃಖದಿಂದ ಬಂದ ಕಣ್ಣೀರು ಭೂಮಿಯಲ್ಲಿ ಬಿದ್ದು ಎಷ್ಟೆಷ್ಟು ಧೂಳುಗಳನ್ನು
ತೋಯಿಸುತ್ತದೊ ಅಷ್ಟು ವರ್ಷಗಳು ಕುಂಭೀಪಾಕದಲ್ಲಿ ಬಿದ್ದು ದುಃಖಪಡು
ತ್ತಾರೆ. ಮತ್ತು ಈ ರಾಜರುಗಳು ತಾವೇ ಕೊಟ್ಟ ವೃತ್ತಿಗಳನ್ನಾದರೂ ಸರಿಯೇ
ಅಥವಾ ಪರಕೀಯರು ಕೊಟ್ಟ ವೃತ್ತಿಗಳನ್ನಾದರೂ ಸರಿಯೇ ಅಪಹರಿಸಿದ್ದೇ
ಆದರೆ ಅರವತ್ತುಸಾವಿರ ವರ್ಷಗಳು ಮಲದಲ್ಲಿ ಕೃಮಿಯಾಗಿ ಹುಟ್ಟುತ್ತಾರೆ.
ಆದ್ದರಿಂದ ಯಾವ ಬ್ರಾಹ್ಮಣರ ಧನವನ್ನು ತೆಗೆದುಕೊಂಡು ಭಕ್ಷಿಸಲಪೇಕ್ಷಿ
ಸುವರೋ ಅಂತಹ ನರರು ಅಲ್ಪಾಯುಷ್ಕರಾಗುವುದು ನಿಶ್ಚಿತವಾದುದರಿಂದ
ಅಂತಹ ಬ್ರಹ್ಮಸ್ವವನ್ನು ನಾನು ಖಂಡಿತವಾಗಿಯೂ ಅಪೇಕ್ಷಿಸುವುದಿಲ್ಲ. ಅದನ್ನು
ತೆಗೆದುಕೊಂಡ ಎಷ್ಟೋ ಜನ ರಾಜರುಗಳು ತಮ್ಮಗಿರುವ ಸ್ಥಾನಗಳಿಂದ
ಭ್ರಂಶವನ್ನು ಹೊಂದಿದಾರೆ. ಇನ್ನು ಯಾರಾದರೂ ತೆಗೆದುಕೊಳ್ಳಲು ಅಪೇಕ್ಷಿ
ಸಿದರೂ ನಾವು ಅದಕ್ಕೆ ಸಹಾಯವನ್ನು ಮಾಡಬಾರದು. ಎಲ್ಲ ನನ್ನ ಭಕ್ತರುಗಳಿರಾ! ನಿಮಗೆ ಒಳ್ಳೆಯದೇ ಆಗುವುದಕ್ಕಾಗಿ ಹೇಳುತ್ತೇನೆ. ಕೇಳಿರಿ! ಬ್ರಾ
ಹ್ಮಣನು ಎಷ್ಟು ಪಾಪಿಷ್ಟನಾಗಿದ್ದರೂ ಅವರನ್ನು ಅವಮಾನವನ್ನು ಪಡಿಸಬೇಡಿ.
ಬ್ರಾಹ್ಮಣರು ಪರರನ್ನ ಕೊಲ್ಲುವ ಸ್ವಭಾವದವರಾಗಿದ್ದರೂ ಸರಿಯೆ, ಸದಾ
ಇತರರನ್ನು ಶಪಿಸತಕ್ಕವರಾದರೂ ಸರಿಯೆ ನೀವು ನನ್ನ ಭಕ್ತರೇ ಆಗಿದ್ದರೆ ನಿತ್ಯದ
ಲ್ಲಿಯೂ ಅವರನ್ನೂ ಸಹ ನಮಸ್ಕರಿಸಿರಿ. ನಾನು ಹೇಗೆ ಬ್ರಾಹ್ಮಣರನ್ನು ಸರ್ವಕಾ
ಲದಲ್ಲಿಯೂ ಸಮಾಹಿತ ಮನಸ್ಕನಾಗಿ ನಮಿಸುವೆನೋ ಹಾಗೆಯೇ ನೀವುಗಳೂ ನ
ಮಸ್ಕರಿಸಿರಿ. ಹಾಗೆ ನೀವು ಮಾಡದೇಹೋದ ಪಕ್ಷದಲ್ಲಿ ನನ್ನ ಕ್ರೂರವಾದ ಶಾಸ
ನೆಗೆ ಗುರಿಯಾಗಬೇಕಾಗುತ್ತದೆ. ಬ್ರಾಹ್ಮಣರ ಹಣವನ್ನು ಅಪಹರಿಸಿದವನನ್ನು
ಅವನೆಷ್ಟು ಉನ್ನತಪದವಿಯಲ್ಲಿದ್ದರೂ ಕೂಡ ಕೆಳಗೆ ಕೆಡವಿಸುವ ಸಾಮರ್ಥ್ಯವು
ಬ್ರಹ್ಮಸ್ವಕ್ಕೆ ಉಂಟು. ಈಗಲೇ ನೀವು ಉದಾಹರಣೆಯನ್ನು ನೋಡಿರಿ.
ಬ್ರಾಹ್ಮಣನ ಗೌವು ತನ್ನ ಸಮುದಾಯದಲ್ಲಿ ಪುನಃ ನೀರಿದ್ದನ್ನು ತಿಳಿಯದೆ ದಾನ

ವ್ಯಾಸರು ಭಗವಂತನಾದ ಶ್ರೀಕೃಷ್ಣನ ವಿಷಯದಾಸಕ್ತರಾಗಿ

ಮಾಡಿದ್ದಕ್ಕಾಗಿ ದಾನಾಗ್ರಗಣ್ಯನು ಭಗವದಬ್ಭಕ್ತನು, ಜ್ಞಾನಿಯೂ ಆದ ಈ ನೃಗಮಹಾರಾಜನು ಎಷ್ಟು ಕಷ್ಟವನ್ನು ಪಟ್ಟಿದಾನೆ! ಎಂಬುದಾಗಿ ಸರ್ವಲೋಕಗಳನ್ನು ಪಾವನಮಾಡುವುದಕ್ಕಾಗಿ ಅವತಾರವಾಡಿದ ಶ್ರೀಕೃಷ್ಣನು ಸಕಲರಿಗೂ ಅಲ್ಲಿ ನರದ ರಾಜರುಗಳನ್ನು ಜನಗಳನ್ನು ಮುಂದೆವಾಡಿಕೊಂಡು ಸಕಲ ಲೋಕಕ್ಕೂ ಉಪದೇಶವಾಡಿ ತನ್ನ ಮನೆಯನ್ನು ಕುರಿತು ಹೊರಟು ಹೋದನು.

ಈ ವಿಷಯದಲ್ಲಿ ಭಗವದ್ಭಕ್ತರಾದ ಶುಕಾಚಾರ್ಯರೊ ಕೂಡ ಮೇಲೆ ಶ್ರೀಕೃಷ್ಣನು ನಿರೂಪಿಸಿದ ನ್ಯಾಯೋಯದ ಸಾರಾಂಶವನ್ನೂ ಈಗಿನಕಾಲದ ಜನಕೆ ಉದ್ಧಾರಾರ್ಥವಾಗಿ ಉಪದೇಶವಾದಿದಾರೆ—ಎಲ್ಲೆ ವರಿಕ್ಷಿದ್ರಾಜನೆ! ಸಜ್ಜನರೆ ಸಮಾಗಮವು ಯಾವಾಗಲೂ ನಿಷ್ಫಲವಾಗುವುದಿಲ್ಲ. ಸಾಧುಜನಕೆ ಸಮಾಗಮದಿಂದ ಈ ನೃಗಚಕ್ರವರ್ತಿಯು ತನ್ನ ಪಾಪದಿಂದ ಬಿಡುಗೆಡಯನ್ನು ಹೊಂದಿ ದಿವ್ಯರೂಪದಿಂದ ಉತ್ತಮವಾದ ಸೌಖ್ಯವನ್ನು ಪಡೆದನು. ಆದುದರಿಂದ ನಾನು ಹೇಳುವುದೆಂನೆಂದರೆ—ತೀರ್ಥಯಾತ್ರಾದಿಗಳಿಂದ ನಾವು ಹೇಗೆ ಪುನೀತರಾಗುವೆನೋ ಹಾಗೆಯೇ ಭಗವದ್ಭಕ್ತರ ದರ್ಶನ, ಸ್ಪರ್ಶನ, ಅವರೆ ಕೀರ್ತನ, ಮತ್ತು ಸ್ಮರಣಗಳೂ ಕೂಡ ನಮ್ಮನ್ನು ಪಾವನಮಾಡಶಕ್ಯವುಗಳಾಗಿರುತ್ತವೆ. ಆದುದರಿಂದ ನೀವುಗಳು ಭಕ್ತರನ್ನು ಸದಾ ಸೇವನೆ ಮಾಡಿರಿ. ಆದರೆ ಮಹಾಪಾತಕರವಾದ ಬ್ರಹ್ಮಸ್ವವನ್ನು ಮಾತ್ರ ಅಪಹರಿಸಜೀಡಿರಿ. ಏಕೆಂದರೆ ಆ ಬ್ರಹ್ಮಸ್ವವು ನಮ್ಮ ಪರಲೋಕದ ಸುಖಗಳನ್ನು ಇಹಲೋಕದ ಸುಖಗಳನ್ನೂ ನಾಶಮಾಡುತ್ತದೆ. ಆದುದರಿಂದ ಪರಮಾತ್ಮನ ಪ್ರಸಾದವನ್ನೆಪೇಕ್ಷಿಸುವರು ಶ್ರೀಕೃಷ್ಣನ ಉಪದೇಶವನ್ನು ದ್ವೇಷಬುದ್ಧಿಯಿಂದ ತಿರಸ್ಕರಿಸದೆ ಸಾಧುಭಾವದಿರಿದ ಗ್ರಹಿಸಬೇಕೆರೆದು ಶುಕಾಚಾರ್ಯರ ಅಭಿಪ್ರಾಯ.

ವಾಚಕಮಹಾಶಯರಂ! ಈ ಪ್ರಕಾರ ಶ್ರೀಮದ್ಭಾಗವತದಲ್ಲಿ ನಿರೂಪಿಸಲ್ಪಟ್ಟಿರುವ ನೈಗೊಪಾಖ್ಯಾನದ ಸಾರಾಂಶವನ್ನು ಗ್ರಹಿಸಿರುವಿರಿಷ್ಟೆ. ಈ ವಿಷಯದಲ್ಲಿ ನಿಮ್ಮಗಳಿಗೆ ಕೆಲವುಮಟ್ಟಿಗೆ ಆಧುನಿಕರಾದ ಸವನಾಗರಿಕರ ಸಹವಾಸದಿಂದಲೂ ಸಂಭಾಷಣದಿಂದಲೂ ತಕ್ಕಮಟ್ಟು ನಂಬಿಕೆಯು ಹುಟ್ಟದೇ ಹೋಗಬಹುದೆಂದು ಕಾಣುತ್ತದೆ. ಹೇಗೆಂದರೆ—ಈಗಿನ ಒನರು ಬ್ರಾಹ್ಮಣರು ಮನುಷ್ಯವರ್ಗದಲ್ಲಿ ಶ್ರೇಷ್ಠರೆಂಬ ಮಾತನ್ನು ಸಹಿಸದೆ ಸರ್ವಪ್ರಾಣಿಗಳೂ ಸಮವೆಂದು ವಾದಿಸುತ್ತಾ ಉಚ್ಚೃಂಖಲವಾಗಿ ಬ್ರಾಹ್ಮಣರನ್ನು ಅವಮಾ

ನಿಸಲು ಇದ್ಧಕ್ಕಂಕಣರಾಗಿರುವರಂಬುದು ನರಿಯಷ್ಟೆ. ಬ್ರಾಹ್ಮಣರಲ್ಲಿ ಕೂಡ ಧವೀನವಿದ್ಯೆಯನ್ನು ಕಲಿತು, ತಮ್ಮ ತಮ್ಮ ವೇದ-ಶಾಸ್ತ್ರ-ಪುರಾಣಾದಿಗಳಲ್ಲಿ ಹೇಳಿರುವ ತತ್ತ್ವಗಳಲ್ಲಿ ನಂಬಿಕೆಯಲ್ಲದೆ ಇಂತಹ ವಾದಿಗಳನ್ನು ಆಧರಿಸುವವರಾಗಿರುತ್ತಾರೆ. ಹೀಗಿರುವಲ್ಲಿ ಸಾತ್ವಿಕರಾಗಿರುವ ಜನರು ಕೆಲವರಿದ್ದರೂ ಅಂತಹವರಿಗೂ ಕೂಡ ವೇದಪುರಾಣಾದಿಗಳಲ್ಲಿ ಹೇಳಿರುವ ತತ್ತ್ವಗಳ ವಿಷಯದಲ್ಲಿ ವಿಶ್ವಾಸವುಂಟಾಗುವುದು ಕಷ್ಟವಾಗಿದೆ. ದ್ರವ್ಯವೆಂಬುದು ಕಷ್ಟಪೊರತು ಲಭಿಸುವುದಿಲ್ಲ. ಬ್ರಾಹ್ಮಣನಾಗಲೀ ಬ್ರಾಹ್ಮಣೇತರನಾಗಲೀ ಬಹುಕಷ್ಟದಿಂದಲೇ ದ್ರವ್ಯಾರ್ಜನೆಯನ್ನು ಮಾಡಿರುತ್ತಾನೆ, ಹೀಗಿರುವಲ್ಲಿ ಬ್ರಾಹ್ಮಣನ ಸ್ವತ್ತನ್ನು ಮಾತ್ರ ಹೇಗಾದರೂ ಅಪಹರಿಸಬಾರದು. ಇದರಿಂದ ಮಹಾನರ್ಥವುಂಟೆಂದು ಬೋಧಿಸುವುದು ಹೇಗೆ ಯುಕ್ತ? ಬ್ರಾಹ್ಮಣೇತರರ ಸ್ವತ್ತುಗಳನ್ನು ಧಾರಾಳ ಅಪಹರಿಸಬಹುದೊ? ಅದನ್ನು ಅಪಹರಿಸುವುದರಿಂದ ಅನರ್ಥವಿಲ್ಲವೊ? ಕಷ್ಟಪಟ್ಟು ಸಂಪಾದನೆ ಮಾಡಿದ ಪುರುಷನಿಗೆ ತನ್ನ ಸ್ವತ್ತು ಅಪಹರಿಸಲ್ಪಟ್ಟರೆ, ಬ್ರಾಹ್ಮಣನಿಗಾಗಲಿ ಬ್ರಾಹ್ಮಣೇತರನಿಗಾಗಲಿ ದುಃಖವಾಗದಿರುವುದುಂಟೊ? ಒಬ್ಬರನ್ನು ದುಃಖಪಡಿಸುವ ಕೆಲಸವನ್ನು ಮಾಡಿದವ ಅಂತಹ ಕೃತ್ಯವನ್ನು ನಡಿಸಿದವನಿಗೆ ಪಾಪವಿಲ್ಲವೆಂದು, ಹೇಳುವುದು ಹೇಗೆ?

ಈ ಕಾರಣಗಳಿಂದ ಪುರಾಣಾದಿಗಳಲ್ಲಿರುವ ಮೇಲೆ ಹೇಳಿದಂತಹ ಬೋಧನೆಗಳು ಅತ್ಯಂತ ವಿರುದ್ಧವಾಗಿರುವುದರಿಂದ ವಿಶ್ವಾಸಮಾಡಲರ್ಹವಲ್ಲವೆಂಬುದು ಮೊದಲಾದ ಶಂಕೆಗಳು ಬರುತ್ತವೆ. ಇವುಗಳಿಗೆ ಸಮಾಧಾನವನ್ನು ಈ ಕೆಳಗೆ ಹೇಳುವಂತೆ ತಿಳಿದುಕಳ್ಳುದು. ಒಬ್ಬರ ಸ್ವತ್ತನ್ನು ಒಬ್ಬರು ಅಪಹರಿಸುವುದು ಎತ್ತುವಾತ್ರವೂ ಯುಕ್ತವಲ್ಲ. ಬ್ರಾಹ್ಮಣನ ಸ್ವತ್ತಾಗಲೀ ಬ್ರಾಹ್ಮಣೇತರರ ಸ್ವತ್ತಾಗಲೀ ಅವಹರಿಸಿದ ಪುರುಷನಿಗೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಮಹಾ ಹಾನಿವುಂಟೆಂದು ವೇದಪುರಾಣಾದಿಗಳು ಸಾರುತ್ತವೆ. ಆದುದರಿಂದ ಬ್ರಹ್ಮಸ್ವವನ್ನು ಅಪಹರಿಸಿದವನಿಗೆ ದೋಷವನ್ನು ನಿರೂಪಿಸುವ ಈ ಕಥೆಗಳು ಎತ್ತುವಾತ್ರವೂ ಅಪ್ರಾಮಾಣಿಕವಲ್ಲವೆಂದು ತಿಳಿಯುವುದು. ಆದರೆ ಪರಸ್ವಾಪಹಾರದಲ್ಲಿ ವಿಶೇಷವನ್ನು ಪ್ರತಿಪಾದಿಸುವ ಈ ಕಥೆಗಳಿಗೆ ಪ್ರಾಮಾಣ್ಯವು ಹೇಗೆ ಕೂಡುತ್ತದೆಂದು ಕೇಳಬಹುದು. ಸಾವಧಾನದಿಂದ ತಿಳಿದುಕೊಳ್ಳಬೇಕು. ದೋಷತಾರತಮ್ಯಕ್ಕೆ ಕಾರಣಗಳುಂಟು. ಈಶ್ವರನಿಂದಸೃಜಿಸಲ್ಪಟ್ಟಿರುವ ಜೀವನ ವರ್ಗದಲ್ಲಿ ಮನುಷ್ಯನೆಲ್ಲರೂ ಸಮರೆಂದು ಹೇಳುವುದು ಬುದ್ಧಿಮಂತರೂಪ್ಪತಕ್ಕುದಲ್ಲ

ವ್ಯಾಸರಲ್ಲಿ ಕೆಲವು ಶಂಗಕಗಳಿಗೆ ಕೆಲವು ವಿಷಯಗಳಿಗೆ ಹೊರ

ದಲ್ಲ. ಕೆಲವರು ಶಾಂತರಾಗಿ ಲೋಕಹಿತವನ್ನು ಬಯಿಸುತ್ತಾ ಪರಲೋಕ ಸುಖಕ್ಕೆ ಸಾಧನಗಳನ್ನು ಆಚರಿಸುತ್ತಾ ಒಬ್ಬರಿಗೂ ಹಿಂಸೆಯನ್ನು ಮಾಡದೆ ಜೀವಿಸುವರು. ಕೆಲವರು ಅಧರ್ಮಶೆಯಿಂದ ಅನೇಕ ವಿಧವಾದ ಅಕಾರ್ಯಗಳನ್ನು ಮಾಡುತ್ತಾ ಪರರಿಗೆ ಅನೇಕ ದುಃಖಗಳನ್ನುಂಟುಮಾಡಿಸುತ್ತಾ ಜೀವಿಸುವರು. ಈ ವಿಧದಲ್ಲಿ ಜನಗಳು ಸೃಷ್ಟಿಗೆ ಕಾರಣವನ್ನು ಯೋಚಿಸಿದರೆ ಬ್ರಾಹ್ಮಣರುಗಳು ವೇದಶಾಸ್ತ್ರಗಳಲ್ಲಿ ಉಕ್ತವಾದ ವಿಧಿಗೆ ಬದ್ಧರಾಗಿ ಅಕಾರ್ಯಗಳನ್ನು ಮಾಡದೆ ಧರ್ಮದಿಂದ ದ್ರವ್ಯಾರ್ಜನೆಯನ್ನುಮಾಡಿತಮ್ಮ ಜೀವನಮಾತ್ರದಿಂದ ತೃಪ್ತರಾಗಿ ಪ್ರಾಮಿಕವಾಗಿರುವರು. ಇತರರು ವೇದಶಾಸ್ತ್ರಗಳ ಅಧ್ಯಯನವಿಲ್ಲದಿರುವುದರಿಂದ ಕಾರ್ಯಾಕಾರ್ಯವಿವೇಕವಿಲ್ಲದೆ ನ್ಯಾಯಾನ್ಯಾಯ ಮಾರ್ಗಗಳನ್ನು ಆಲೋಚಿಸದೆ ಧನಾರ್ಜನೆಯನ್ನು ಮಾಡುವರು. ಅಲ್ಲದೆ ಬ್ರಾಹ್ಮಣರುಗಳು ವೇದಶಾಸ್ತ್ರಗಳ ಅಧ್ಯಯನ, ತಪಸ್ಸು, ಯಜ್ಞಾದಿಗಳು ಇವುಗಳಲ್ಲಿ ಆಸಕ್ತರಾಗಿ ವ್ಯರ್ಥವಾಗಿ ಕಾಲವನ್ನು ಕಳೆಯುತ್ತಿರಲ್ಲ. ಇತರರು ದ್ರವ್ಯಾರ್ಜನೆಯೇ ಮುಖ್ಯವೆಂದು ಸರ್ವಕಾಲವನ್ನು ಅದರ ಉಪಾಯಚಿಂತನದಲ್ಲಿಯೂ ಅದಕ್ಕಾಗಿ ಶ್ರಮಪಡುವುದರಲ್ಲಿಯೂ ಇರುವರು. ಅಲ್ಲದೆ ಬ್ರಾಹ್ಮಣರಲ್ಲಿ ಅವರ ಜೀವಕ್ಕೆ ಸಾಕುಸಾಲದಷ್ಟು ಮಾತ್ರವಿರುವುದು. ಇತರರಲ್ಲಿ ಅತ್ಯಧಿಕವಾಗಿ ದ್ರವ್ಯವು ಸೇರಿರುವುದು. ಹೀಗಿರುವುದರಿಂದ ಅತ್ಯಲ್ಪವಾದ ಬ್ರಾಹ್ಮಣರ ಸ್ವತ್ತು ಅಪಹರಿಸಲ್ಪಟ್ಟರೆ ಆ ಸ್ವತ್ತಿಗೆ ಸ್ವಾಮಿಯಾದ ಬ್ರಾಹ್ಮಣನಿಗೆ ಮಹಾದುಃಖವುಂಟಾಗುವುದಲ್ಲದೆ ಪುನಃ ಆ ದ್ರವ್ಯವನ್ನು ಆರ್ಜಿಸಬೇಕಾದರೆ ಬಹುಶ್ರಮವೆ ಇರುತ್ತದಾದ ಕಾರಣ ಬ್ರಹ್ಮಸ್ವಾಪಹಾರದಲ್ಲಿ ದೋಷವೆಷ್ಟೆಂತಲೂ ಇತರರ ಸ್ವತ್ತನ್ನು ಅಪಹರಿಸಿದರೆ ದೋಷವಿದ್ದರೂ ಕೂಡ ತಾರತಮ್ಯವುಂಟೆಂತಲೂ ಹೇಳುವುದು ಯುಕ್ತವಿಸಿದ್ಧವು. ಇದರಿಂದ ದೋಷಾಧಿಕ್ಯವು ಪುರಾಣಾದಿಗಳಲ್ಲಿ ಹೇಳಿರುವುದು, ಶ್ರದ್ಧೇಯವೇ ಹೊರತು ಅಯುಕ್ತವೆಂದು ಆಕ್ಷೇಪಿಸಲರ್ಹವಲ್ಲ. ಈ ನ್ಯಾಯವು ಈಗಿನ ವ್ಯಭುತ್ವದವರ ನ್ಯಾಯಪರಿಶೀಲನಕ್ಕನುಸಾರ ಒಪ್ಪತಕ್ಕುದಾಗಿದೆ. ಯಾವದಾದರೊಂದು ದೇಶದಲ್ಲಿ ಅತಿವೃಷ್ಟಿಯಿಂದಲೋ, ಅಗ್ನಿಯಿಂದಲೊ, ಭೂಕಂಪಾದಿಗಳಿಂದಲೋ ಅಪಾಯಗಳು ಸಂಭವಿಸಿದಾಗ, ನಷ್ಟಪಡದ ಜನರಲ್ಲಿ ಅಗತಿಕರಾದ ಜನರಿಗೆ ಮಾತ್ರ ಸರ್ಕಾರಗಳಿಂದ ಸಹಾಯಗಳು ಲಭಿಸುತ್ತಿವೆಯೇ ಹೊರತು, ಸಂಪನ್ನರಾದ ಜನರಿಗೆ ಈ ವಿಧವಾದ ಸಹಾಯಗಳು ಲಭಿಸುತ್ತಿರುವುದಿಲ್ಲ. ಇದೇ ನ್ಯಾಯವು ಈ ಪುರಾಣಾದಿಗಳಲ್ಲಿ ಹೇಳಿರುವ ವಿಷಯಗಳನ್ನು ಸಮಂಜಸವಾಡಿಕೊಂಡರೆ ಸರಿಹೋಗುವುದು.

ಈಗ ಹರಡುತ್ತಿರುವ ತತ್ತ್ವಸಂಕರವು.

——:೧:——

'ಈಶ್ವರ' ಎಂದರೆ ಜಗತ್ಕರ್ತನು. 'ಪರಲೋಕ' ಎಂದರೆ ಸ್ವರ್ಗ ನರಕಾದಿಗಳು. ಧರ್ಮಾಧರ್ಮಗಳು ಮೊದಲಾದ ವಿಷಯಗಳಲ್ಲಿ ಅನಾದಿ ಕಾಲದಿಂದಲೂ ಆಯಾ ಜನಗಳಲ್ಲಿ ಬಂದಿರುವ ನಿಶ್ಚಯವು ತತ್ತ್ವನಿಶ್ಚಯವೆಂದು ಕರೆಯಲ್ಪಡುತ್ತದೆ. ಮೇಲೆ ಹೇಳಿದ ವಿಷಯಗಳು ಪ್ರತ್ಯಕ್ಷ ಪ್ರಮಾಣದಿಂದ ನಿಶ್ಚಯಿಸಲು ಶಕ್ಯವಲ್ಲದಿರುವುದರಿಂದ ಅನಾದಿಕಾಲದಿಂದಲೂ ಅವರವರಿಂದ ಆದರಿಸಲ್ಪಡುತ್ತಿರುವ ವೇದ ಮೊದಲಾದ ಶಾಸ್ತ್ರಗಳ ಅವಲಂಬನೆಯಿಂದ ಇಂತಹ ತತ್ತ್ವನಿಶ್ಚಯವು ಆಗಬೇಕಾಗಿರುತ್ತದೆ. ಬ್ರಾಹ್ಮಣರಲ್ಲಿ ಎಂದರೆ ಸಾಮಾನ್ಯವಾಗಿ ಹಿಂದುಗಳಲ್ಲಿ ವೇದವು ಬಹು ಮುಖ್ಯಪ್ರಮಾಣವಾಗಿರುತ್ತದೆ. ಇದರಿಂದ ತತ್ತ್ವನಿರ್ಣಯವು ಆಗಬೇಕಾದರೆ ಆ ವೇದವನ್ನು ನಂಬಿದ ಅನೇಕ ದೊಡ್ಡದೊಡ್ಡ ಪಂಡಿತರುಗಳಿಂದ ರಚಿಸಲ್ಪಟ್ಟ ಮತಗ್ರಂಥಗಳು ಸಹಾಯಭೂತವಾಗಿರುತ್ತವೆ. ಆ ಮತಗಳು ಬೇರೆಬೇರೆ ಅಭಿಪ್ರಾಯಗಳುಳ್ಳ ಪಂಡಿತರಿಂದ ಸ್ಥಾಪಿಸಲ್ಪಟ್ಟು ಅವರಲ್ಲಿ ವಿಶ್ವಾಸವುಳ್ಳ ಜನರಿಂದ ಆದರಿಸಲ್ಪಡುತ್ತಿರುವುದಾದ ಕಾರಣ ಒಂದು ಮತವೇ ಸರ್ವರ ಮತವಾಗಿ ಏರ್ಪಟ್ಟಿರುವುದಿಲ್ಲ. ಆಯಾ ಮಹಾ ಪುರುಷರಲ್ಲಿ ವಿಶ್ವಾಸವುಳ್ಳ ಜನರಾಗಿ ಅವರ ಉಪದೇಶವನ್ನೇ ಮುಖ್ಯವಾಗಿ ಗ್ರಹಿಸುವ ಜನರು ಅನೇಕರಿರುವುದರಿಂದ ಈ ಭರತಖಂಡದಲ್ಲಿ ಬಹುಕಾಲದಿಂದಲೂ ವೇದವನ್ನು ಅನುಸರಿಸಿದ ಮತಗಳೇ ಅನೇಕವಾಗಿರುವುವು. ವೇದವನ್ನನುಸರಿಸದ ಮತಗಳು ಕೂಡ ಅನೇಕವಾಗಿಯೇ ಇರುವುವು. ಅದರಲ್ಲಿ ಬೌದ್ಧ, ಜೈನಾದಿ ಮತಗಳು ಬೇರೆಬೇರೆ ಆಗಮಗಳನ್ನು ತಮ್ಮ ತಮ್ಮ ಮತಗಳಿಗೆ ಮೂಲಪ್ರಮಾಣವಾಗಿ ಅವಲಂಬಿಸಿರುವುದರಿಂದ ಅವೈದಿಕದರ್ಶನಗಳೆಂದು ಕರೆಯಲ್ಪಡುವುವು. ನ್ಯಾಯ್ಯಾಯಿಕ-ವೈಶೇಷಿಕ-ಸಾಂಖ್ಯ-ಯೋಗ-ಪೂರ್ವೋತ್ತರ ಮೀಮಾಂಸಾದಿಗಳು ವೇದಾವಲಂಬನದಿಂದ ಪ್ರವೃತ್ತವಾದ ಕಾರಣ ವೈದಿಕದರ್ಶನಗಳೆಂದು ಕರೆಯಲ್ಪಡುವುವು. ಈ ವಿಧದಲ್ಲಿ ಪ್ರವೃತ್ತವಾಗಿ ನೆಲೆಗೊಂಡಿರುವ ಮತ

ಬ್ಲಾಗಿಲು ಪ್ರಾರಂಭಕ್ಕಾಗಿ ಕನಕದಾಸ ವಿಜಯದಾಸರ ಮೊರ

ಗಳಿಗೆ ಅಭಿಮಾನಿ ಜನಗಳ ಸಂಖ್ಯೆಯು ತಾರತಮ್ಯದಿಂದ ಉಚ್ಚಾವ
ಚಯವೂ ಹೀನಸ್ಥಿತಿಯೂ ಕೂಡ ಸಂಭವಿಸುತ್ತಾ ಬಂದಿವೆ.

ಹೀಗೆಯೇ ಸಾಂಖ್ಯ-ತರ್ಕ ಮೊದಲಾದ ದರ್ಶನಗಳಿಗೆ ಅಭಿಮಾನಿಗಳು ಕಡಿಮೆಯಾದುದರಿಂದ ಆಯಾ ಮತಗಳು ಪೂರ್ವದಷ್ಟು ಪ್ರಚಾರದಲ್ಲಿರುವುದಿಲ್ಲ. ಆದರೂ ಕೂಡ ನ್ಯಾಯವೈಶೇಷಿಕ ದರ್ಶನಗಳು ಮತ್ತು ಪಾಣಿನೀಯವಾದ ವ್ಯಾಕರಣವು ಪ್ರಾಯಿಕವಾಗಿ ಸಂಸ್ಕೃತಾಭ್ಯಾಸಮಾಡುವ ಸರ್ವಜನರಿಗೂ ವ್ಯಾಸಂಗಾದಿಗಳಿಂದ ಆದರಣೀಯವಾಗಿರುತ್ತವೆ. ಆದರೂ ಆ ಮತದವರು ನಾವೆಂದು ಹೇಳಿಕೊಳ್ಳುವರು ಯಾರೂ ಇರುವುದಿಲ್ಲ. ಹೀಗಲ್ಲದೆ ಭರತಖಂಡದಲ್ಲಿ ಎಲ್ಲಾ ಪ್ರದೇಶಗಳಲ್ಲಿಯೂ ವ್ಯಾಪ್ತವಾಗಿರುವ ಮತಗಳು ವೇದಾಂತವೆಂದು ಕರೆಸಿಕೊಳ್ಳುತ್ತಾ ಮೂರು ವಿಧವಾಗಿರುತ್ತವೆ. ಅದ್ವೈತ ವೇದಾಂತವು ಶ್ರೀಮಚ್ಛಂಕರಾಚಾರ್ಯರಿಂದ ಸ್ಥಾಪಿತವಾಗಿ ಪ್ರಚಾರದಲ್ಲಿರುತ್ತದೆ. ವಿಶಿಷ್ಟಾದ್ವೈತ ವೇದಾಂತವು ಶ್ರೀರಾಮಾನುಜಾಚಾರ್ಯರಿಂದ ಸ್ಥಾಪಿತವಾಗಿ ಪ್ರಚಾರದಲ್ಲಿರುತ್ತದೆ. ದ್ವೈತವೇದಾಂತವು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಸ್ಥಾಪಿತವಾಗಿ ಪ್ರಚಾರದಲ್ಲಿರುತ್ತದೆ. ಇವುಗಳಲ್ಲಿ ಅದ್ವೈತ ಮತಾನುಯಾಯಿಗಳ ಸಂಖ್ಯೆಯು ಸರ್ವಪ್ರಾಂತ್ಯಗಳಲ್ಲಿಯೂ ಹೆಚ್ಚಾಗಿರುವುದು. ಉಳಿದ ಎರಡು ಮತಗಳ ಅನುಯಾಯಿ ಜನಗಳು ವಿಂಧ್ಯಕ್ಕೆ ದಕ್ಷಿಣದೇಶದಲ್ಲಿ ಹೆಚ್ಚಾಗಿಯೂ, ಉತ್ತರದೇಶದಲ್ಲಿ ಕಡಿಮೆಯಾಗಿಯೂ ಇರುತ್ತಾರೆ. ಜನಗಳ ಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಇದ್ದರೂ ಮೇಲೆ ಹೇಳಿದ ಮತತ್ರಯಕ್ಕೆ ಸಂಬಂಧಿಸಿದ ಜನಗಳಲ್ಲಿ 'ವೇದಶಾಸ್ತ್ರಗಳಲ್ಲಿ ಆದರವು, ಈಶ್ವರಭಕ್ತಿಯು, ಮತ ಪ್ರವರ್ತಕ ಆಚಾರ್ಯರುಗಳಲ್ಲಿ ಭಕ್ತಿಯು, ಮತಗ್ರಂಥಗಳನ್ನು ಅಧ್ಯಯನಾದಿಗಳಿಂದ ಪ್ರಚಾರಗೊಳಿಸುವುದರಲ್ಲಿ ಆಸಕ್ತಿಯು, ಸಾಮಾನ್ಯವಾದ ವೈದಿಕಧರ್ಮಗಳಲ್ಲಿ ಶ್ರದ್ಧೆಯು ಬಲಿಷ್ಠವಾಗಿರುವುದರಿಂದ ಜನಗಳು ಮತತ್ರಯದವರೆಂದು ವಿಭಕ್ತರಾಗಿರುತ್ತಾರೆ.

ಈ ಪ್ರಕಾರ ಭರತಖಂಡದಲ್ಲಿ ಪ್ರಚಾರವನ್ನು ಪಡೆದಿರುವ ಮತತ್ರಯದ ಜನರಲ್ಲಿ ಬ್ರಾಹ್ಮಣರು ಪ್ರಾಯಿಕವಾಗಿ ಸಂಸ್ಕೃತಭಾಷೆ

ಯನ್ನು ಬಾಲ್ಯದಿಂದಲೂ ಅಭ್ಯಾಸ ಮಾಡುತ್ತಾ ಉಪನಯನಾನಂತರದಲ್ಲಿ ಗುರುಕುಲವಾಸ ಪೂರ್ವಕವಾಗಿ ವೇದಾಧ್ಯಯನವನ್ನು ಮಾಡುತ್ತಾ ಉಪಯುಕ್ತ ಕಾವ್ಯ-ವ್ಯಾಕರಣಾದಿಗಳನ್ನು ಅಭ್ಯಸಿಸುತ್ತಾ ವೇದಾಂತ ಪ್ರಾಯಸ ಗದಿಂದ ವೇದಾರ್ಥಗಳನ್ನು ನಿರ್ಣಯಿಸಿಕೊಂಡು ಪುರಾಣ ಧರ್ಮ ಶಾಸ್ತ್ರಾದಿಗಳಲ್ಲಿ ಉಕ್ತವಾದ ರೀತಿಯಿಂದ ಧರ್ಮಾಚರಣೆಗಳನ್ನು ಮಾಡುತ್ತಾ ನಿಜಮಾನುಗುಣವಾಗಿ ಕೌತಧರ್ಮಗಳನ್ನು ಎಂದರೆ ಯಾಗಾದಿಗಳನ್ನು ಅನುಷ್ಠಿಸುತ್ತಾ ಧರ್ಮವರರಾಗಿ ಆಯುಸ್ಸನ್ನು ಕಳೆಯುತ್ತಿದ್ದರು. ಪ್ರಾಯಿಕವಾಗಿ ಬ್ರಾಹ್ಮಣರು ಜನನಿಬಿಡವಾದ ದೇಶಗಳಲ್ಲಿ ವಾಸಮಾಡದೇ ಅರಣ್ಯಾದಿಗಳಲ್ಲಿಯೇ ಇದ್ದುಕೊಂಡು ಜೀವಿಸುತ್ತಿದ್ದರು. ಆ ಕಾಲದಲ್ಲಿ ಕ್ಷತ್ರಿಯಾದಿಗಳು ಆ ಬ್ರಾಹ್ಮಣರಲ್ಲಿ ಭಕ್ತಿಯುಕ್ತರಾಗಿ ಅವರು ನಡಿಸುವ ಸತ್ಕಾರ್ಯಗಳಿಗೆ ಅವರಿದ್ದೆಡೆಗಳಲ್ಲಿಯೇ ಹೋಗಿ ತಮ್ಮಿಂದ ಸಾಧ್ಯವಾದ ಅನುಕೂಲಗಳನ್ನು ಒದಗಿಸಿಕೊಡುತ್ತಾ, ಅವರ ಧರ್ಮಾಚರಣೆಯನ್ನು ಅಭಿವೃದ್ಧಿಪಡಿಸುತ್ತಿದ್ದರು. ಕಾಲಕ್ರಮದಿಂದ ದೇಶಾಂತರಗಳಿಂದ ಭರತಖಂಡವರ ಧರ್ಮಗಳನ್ನು ಅವಲಂಬಿಸಿದ ಬಲಶಾಲಿ ಜನಗಳು ಭರತಖಂಡಕ್ಕೆ ಬರುವುದು ಹೆಚ್ಚುತ್ತಾ ಬಂದು ಭರತಖಂಡದ ಎಲ್ಲಾ ಪ್ರದೇಶಗಳಲ್ಲಿಯೂ ನೆಲೆಗೊಂಡಿದ್ದ ಕ್ಷತ್ರಿಯ ಸಂತತಿಯವರ ರಾಜ್ಯಗಳು ದೇಶಾಂತರಗಳ ಬಲಿಷ್ಟಜನರ ಕೈವಶವಾಗಿರುತ್ತಾ ಬಂದುವು. ಅನ್ಯರಾಜರುಗಳು ಪ್ರಬಲಿಸಿದಹಾಗೆಲ್ಲಾ ಭರತಖಂಡದ ಧರ್ಮಗಳಲ್ಲಿ ಬದಲಾವಣೆಗಳು ತಲೆದೋರುತ್ತ ಬಂದುವು.

ಹಾಗಿದ್ದರೂ ಕೂಡ ಬಹುಕಾಲದಿಂದಲೂ ಬಂದಿರುವ ಧರ್ಮಾಭಿಮಾನವು ಭರತಖಂಡದ ಚತುರ್ವರ್ಣದ ಜನರಿಗೆ ಸುಲಭವಾಗಿ ಕಡಿಮೆಯಾಗಲಿಲ್ಲ. ಈ ಕಾಲಕ್ಕೆ ಸುಮಾರು ೫೦೦ ವರ್ಷಗಳ ಕಾಲದವರೆಗೂ ಜನರೆಲ್ಲರೂ ಧರ್ಮನಿಷ್ಠರಾಗಿಯೇ ಪೂರ್ವದಷ್ಟು ಅಲ್ಲದಿದ್ದರೂ ತಕ್ಕ ಮಟ್ಟಿಗೆ ಆಸ್ತಿಕ್ಯವನ್ನು ಕಾಪಾಡಿಕೊಳ್ಳುತ್ತಿದ್ದರು. ಅರಣ್ಯವಾಸವನ್ನು ಬಿಟ್ಟು ಗ್ರಾಮಗಳು ಮೊದಲಾದ ಸ್ಥಳಗಳಲ್ಲಿ ಬ್ರಾಹ್ಮಣಾದಿಗಳು ವಾಸಮಾಡತೊಡಗಿದರೂ ಕೂಡ ಧರ್ಮವ್ಯತ್ಯಾಸವನ್ನು, ಮತಭ್ರಷ್ಟ

ವ್ಯಾಸರಾಯ ಪ್ರತಿಷ್ಠಾಪನೆಯಾದ ಕನಕಗಿರಿಯ ವಿಜಯವಿಠ್ಠಲ ದೇವರ

ಕವನ್ನೂ. ಅನ್ಯಧರ್ಮಗಳಲ್ಲಿ ಅನುರಾಗವನ್ನೂ ಹೊಂದುತ್ತಿರಲಿಲ್ಲ. ಯಾವ ಗ್ರಾಮದಲ್ಲಿ ನೋಡಿದರೂ ಬ್ರಾಹ್ಮಣರೆಲ್ಲರೂ ವೇದಾಧ್ಯಯನ ಸಂಪನ್ನರಾಗಿ ಸಂಸ್ಕೃತಭಾಷೆಯಲ್ಲಿ ಸಾಧ್ವನಾದಷ್ಟು ವ್ಯುತ್ಪತ್ತಿಯನ್ನೂ ಪಾಂಡಿತ್ಯವನ್ನೂ ಪಡೆದು ಇತರರಿಗೆ ಪಾಠಪ್ರವಚನಾದಿಗಳನ್ನು ಮಾಡಿಸುತ್ತಾ ಧರ್ಮಾನಿಷ್ಠರಾಗಿದ್ದರು. ಬ್ರಾಹ್ಮಣರುಮಾತ್ರವೇಕೆ? ಆ ಕಾಲದಲ್ಲಿ ಕ್ಷತ್ರಿಯಾದಿಗಳು ಕೂಡ ಅವರವರಿಗೆ ಸಾಧ್ಯವಾದಷ್ಟು ಸಂಸ್ಕೃತಭಾಷಾ ವ್ಯಾಸಂಗವನ್ನು ಮಾಡುತ್ತಿದ್ದರು. ಬ್ರಾಹ್ಮಣರಿಂದ ಉಪದೇಶವನ್ನು ಪಡೆಯುತ್ತಿದ್ದರು. ಬ್ರಾಹ್ಮಣರನ್ನೇ ಪರದೇವತೆಯಂತೆ ಕಾಣುತ್ತಿದ್ದರು. ಅವರ ಮಾತುಗಳಿಗೆ ವಿರುದ್ಧವಾಗಿ ನಡಿಯುತ್ತಿರಲಿಲ್ಲ. ಗ್ರಾಮಗಳಲ್ಲಿರುವ ಜನರು ಮಾತ್ರ ಹೀಗಿದ್ದರೆಂತಲ್ಲ. ನಗರವಾಸಿಗಳು ಕೂಡ ಹೀಗೆಯೇ ವರ್ತಿಸುತ್ತಿದ್ದರು. ಇದಕ್ಕೆ ನಿದರ್ಶನಗಳಾಗಿ ಅಲ್ಲಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಮಾಡಿರುವ ಸ್ಥಿರವಾದ ಧರ್ಮಕಾರ್ಯಗಳು ಈಗಲೂ ಸಾಕ್ಷಿಯಾಗಿರುತ್ತವೆ.

ಎಷ್ಟೋ ದೇವಾಲಯಗಳು, ಅನ್ನದಾನಸತ್ರಗಳು, ಪಾಠಶಾಲೆಗಳು ಮೊದಲಾದುವು ಅನೇಕ ಸ್ಥಳಗಳಲ್ಲಿರುತ್ತವೆ. ಪ್ರತಿಮತದ ಮಠಾಧಿಪತಿಗಳ ಮೂಲಕವಾಗಿ ಅನೇಕ ಧರ್ಮಗಳನ್ನು ಸರ್ವಸಮರ್ಥರವರೂ ನಡಿಸಿರುತ್ತಾರೆ. ಈಗಲೂ ಎಷ್ಟು ಶಿಲವಾದರೂ ಕೂಡ ಆ ಸ್ಥಳಗಳಲ್ಲಿ ಅಸಾಧಾರಣವಾಗಿ ಧರ್ಮಗಳು ನಡಿಯುತ್ತಿವೆ. ರಾಜಸ್ಥಾನಗಳಲ್ಲಂತೂ ಪೂರ್ವದಲ್ಲಿ ವೇದಾಶಿಕ್ಷಾಸ್ತ್ರ ವ್ಯಾಸಂಗವು ವಿದ್ಯಾರ್ಥಿಗಳ ಪೋಷಣೆಯು, ಅಂಧ, ಬಧಿರಾದಿ ಜನಗಳ ಪೋಷಣೆಯು ಧರ್ಮಪ್ರವರ್ತನೆಯು, ಆಗಂತುಕಜನರಿಗೆ ಆದರಣೆಯು ಅತ್ಯಧಿಕವಾಗಿ ನಡಿಯುವುದಕ್ಕೆ ತಕ್ಕಷ್ಟು ಸರ್ಕಾರದಿಂದಲೂ ಸಾಮಾನ್ಯಜನಗಳ ಮೂಲಕವಾಗಿಯೂ ಏರ್ಪಾಟುಗಳು ಇದ್ದವು. ಈಗಲೂ ಕೆಲವು ಸಂಸ್ಥಾನಗಳಲ್ಲಿ ಈ ವಿಧವಾದ ಆದರಣೆಗಳು ಜನರಿಗೆ ಲಭಿಸುತ್ತಿವೆ.

ಇಷ್ಟು ದೂರವೇಕೆ? ನಮ್ಮ ಮೈಸೂರು ಸಂಸ್ಥಾನವನ್ನೇ ಸಕಲಧರ್ಮಗಳಿಗೂ ಮುಖ್ಯಸ್ಥಾನವನ್ನಾಗಿ ಉದಾಹರಣೆಗೆ ತೆಗೆದುಕೊ

ಳುವ. ನವ್ಯನ್ನಾಳುವ ಶ್ರೀಮನ್ಮಹಾರಾಜರವರು ಪೂರ್ವದ ಬ್ರಾಹ್ಮಣಕ್ರೀಷ್ಟರನ್ನು ಸ್ನಾನಸಂಧ್ಯಾ ದೇವತಾರ್ಚನಾದಿ ನಿಯಮಗಳನ್ನು ದುರಾಹಾರಾದಿ ವರ್ಜನವನ್ನು ಸ್ವಯಂ ಆಚರಿಸುತ್ತಾ ಧರ್ಮಾಸಕ್ತರಾದ ಸರ್ವಜನರಿಗೂ ತಾವೇ ಆದರ್ಶಪ್ರಾಯರಾಗಿರುವರೆಂಬುದು ಎಲ್ಲರಿಗೂ ವಿದಿತವೆ. ಇವರ ಸೌಜನ್ಯವು ಲೋಕೋತ್ತರವು. ಕೌರ್ಯದ ಪರಮಾಣುವೂ ಕೂಡ ಇವರ ಶರೀರದಲ್ಲಿ ಸೇರಿರುವುದಿಲ್ಲ. ಭೂತದಯವೇ ಇವರ ಮೂರ್ತಿಯಾಗಿದೆ. ಸುಗುಣಗಳು ಇವರ ಶರೀರಕ್ಕೆ ಸ್ವಾಭಾವಿಕಾಲಂಕಾರಗಳಾಗಿವೆ. ಇಷ್ಟೈಶ್ವರ್ಯವಿರುವ ಕೂಡ ರಾಜ್ಯಪರಿಪಾಲನೆಯ ದರ್ಪವು ಪೂರ್ವದಲ್ಲಿ ಪ್ರಸಿದ್ಧರಾದ ಸುಗ್ರೀವಾದಿಗಳಲ್ಲಿ ನೆಲೆಗೊಂಡಿದ್ದ ದರ್ಪವನ್ನು ಅತಿಕಯಿಸುತ್ತದೆ. ಇವರ ಪ್ರಾಚೀನವಿದ್ಯಾಭಿಮಾನವು ಲೋಕಾತಿಶಾಯಿಯಾಗಿರುತ್ತದೆ. ರಾಜಧಾನಿಯಲ್ಲಿ ಮತ್ತು ಉಪರಿಜಧಾನಿಯಾದ ಬೆಂಗಳೂರಲ್ಲಿಯೂ ಸಂಸ್ಕೃತ ವಿದ್ಯಾಭಿವೃದ್ಧಿಯು ಅತಿಕಯಿತವಾಗಿ ನಡಿಯುವಂತೆ ಎರಡು ಸಂಸ್ಕೃತ ಪಾಠಶಾಲೆಗಳು (ಕಾಲೇಜುಗಳು) ಅಭಿವೃದ್ಧವಾಗಿರುತ್ತವೆ. ಈ ಪಾಠಶಾಲೆಗಳಲ್ಲಿ ಬಾಲ್ಯಶಿಕ್ಷಣವನ್ನಾರಂಭಿಸಿ ವೇದಾದಿಗಳನ್ನು ಕಲಿಸುತ್ತಾ ಶಾಸ್ತ್ರಗಳಲ್ಲಿ ಪಾರಂಗತರಾಗುವ ಪರ್ಯಂತ ಸರ್ವಶಾಖೆಗಳಲ್ಲಿಯೂ ಅಭ್ಯಾಸ ಮಾಡುವುದಕ್ಕೆ ಬ್ರಾಹ್ಮಣ ಸಾಮಾನ್ಯಕ್ಕೂ ಅವಕಾಶವು ಸುಲಭವಾಗಿದೆ ಪ್ರತಿವರ್ಷಗಳಲ್ಲಿಯೂ ಶಾಸ್ತ್ರಗಳಲ್ಲಿ ಪರೀಕ್ಷೆಗಳನ್ನು ನಡಿಸಿ ಸನ್ಮಾನಗಳನ್ನು ಪಾರಿತೋಷಿಕರೂಪವಾಗಿ ಕೊಡಿಸುತ್ತಾ ಅರ್ಹರಾದ ಜನರನ್ನು ಉತ್ಸಾಹಪಡಿಸುತ್ತಿದಾರೆ. ಅಲ್ಲದೆ ಪ್ರತಿಯೊಂದು ಶಾಸ್ತ್ರದಲ್ಲಿಯೂ ವಿದ್ವತ್ಪರೀಕ್ಷೆ ಎಂಬ (ಪಬ್ಲಿಕ್ ಎಗ್ಸಾಮಿನೇಷನ್) ಸುಪ್ರಸಿದ್ಧ ಪರೀಕ್ಷೆಯನ್ನು ಪ್ರತಿವರ್ಷವೂ ನಡಿಸುತ್ತಾ ನವರಾತ್ರಿಯ ದರ್ಬಾರಿನಲ್ಲಿ ಖುದ್ದು ಶ್ರೀಮಹಾರಾಜರವರೇ ಪಾರಿತೋಷಿಕಗಳನ್ನು ದಯಪಾಲಿಸುತ್ತಿದಾರೆ. ಇದೆಷ್ಟು ಪ್ರಾಚೀನವಿದ್ಯಾಪ್ರೇಮವೆಂಬುದನ್ನು ಪರಮಾವಧಿಯೋ ಅಭಿಜ್ಞರು ಯೋಚಿಸಬಹುದು.

ಈಪ್ರಕಾರ ಪ್ರಾಚೀನಪದ್ಧತಿಯನ್ನನುಸರಿಸಿ ವೇದಾದಿಶಾಸ್ತ್ರಗಳನ್ನು ಬ್ರಾಹ್ಮಣರು ಮಾತ್ರ ಅಭ್ಯಾಸ ಮಾಡುವುದಕ್ಕೆ ಈ ಮೇಲಿ

ಹೇಳಿದ ಮುಖ್ಯಸ್ಥಾನಗಳು ಏರ್ಪಟ್ಟಿವೆ ಎಂಬುದು ಈ ಸ್ಥಾನಗಳ ಉತ್ಪತ್ತಿಕ್ರಮವನ್ನು ಬಲ್ಲವರಿಗೆ ಸ್ಪಷ್ಟವಿದೆ. ಇಲ್ಲಿ ಓದುವ ವಿದ್ಯಾರ್ಥಿ ಜನರಿಗೆ ವಾಸಕ್ಕೂ, ಅನ್ನಪಾನಾದಿಗಳಿಗೂ ಕೆಲವುಮಟ್ಟಿಗೆ ವಸತಿಯು ಸರ್ಕಾರದಿಂದಲೇ ಕಲ್ಪಿಸಲ್ಪಟ್ಟಿದೆ. ಆದರೂ ಈಗಿರುವ ವಸತಿಯು ಸಾಲದೆಂಬಭಿಪ್ರಾಯದಿಂದ ಬ್ರಾಹ್ಮಣರಲ್ಲಿ ಕೆಲವು ಮಹನೀಯರು "ಶ್ರೀವೇದಶಾಸ್ತ್ರೋತ್ತೇಜಿನೀ" ಎಂಬ ಹೆಸರಿನಿಂದೊಂದು ಸಭೆಯನ್ನು ರಾಜಧಾನಿಯಲ್ಲಿ ಸ್ಥಾಪಿಸಿ ಹೆಚ್ಚುವೇದಶಾಸ್ತ್ರಾಭ್ಯಾಸಕ್ಕೆ ಉತ್ತೇಜನಕವಾದ ಏರ್ಪಾಟುಗಳನ್ನು ಮಾಡಲುದ್ದೇಶದಿಂದ ಅನೇಕ ಪ್ರಯತ್ನಗಳನ್ನು ಮಾಡುತ್ತಲಿವಾಲೆ. ಆ ಸಭೆಯವರು ಮಾಡುವ ಕಾರ್ಯಗಳಿಗೆಲ್ಲವೂ ತಕ್ಕಷ್ಟು ಸಹಾಯವು ನಮ್ಮ ಶ್ರೀಮನ್ ಮಹಾರಾಜರವರ ಸರ್ಕಾರದಿಂದಲೂ ಮತ್ತು ಅರಮನೆಯ ಅಧಿಕಾರಿಗಳಿಂದಲೂ ಲಭಿಸುತ್ತಲಿವೆ. ಮುಂದೆಯೂ ಇವರ ಪ್ರಯತ್ನಗಳೆಲ್ಲವೂ ನೆರವೇರುವುದಕ್ಕೆ ತಕ್ಕಷ್ಟು ಸರ್ಕಾರದ ಅವಲಂಬನೆಯು ಸಿಗುವ ಭರವಸೆ ಇದೆ.

ಅಲ್ಲದೆ ಮೇಲೆ ಹೇಳುವ ಕಾಲೇಜುಗಳಲ್ಲಿ ಬ್ರಾಹ್ಮಣರಿಗೆ ಮಾತ್ರ ಸಂಸ್ಕೃತವಿದ್ಯಾಭ್ಯಾಸ ಲಭಿಸುವುದನ್ನು ಸಹಿಸದೇ ಕೆಲವು ಬ್ರಾಹ್ಮಣೇತರರಲ್ಲಿ ನವನಾಗರಿಕರು ತಮಗೂ ಈ ಸ್ಥಾನಗಳಲ್ಲಿ ವಿದ್ಯಾಭ್ಯಾಸಕ್ಕೆ ಅವಕಾಶವನ್ನು ಕೊಡಿಸಬೇಕೆಂದು ವ್ಯರ್ಥನಾವ್ಯಾಜದಿಂದ ಈ ಸ್ಥಾನಗಳಲ್ಲಿ ನಡೆಯುವ ವಿದ್ಯಾಭಿವೃದ್ಧಿಗೆ ಕೊರತೆಯನ್ನುಟುಮಾಡುವ ಉದ್ದೇಶವುಳ್ಳವರಾಗಿ ಆಗಾಗ ಮಾಡುತ್ತಿರುವ ವ್ಯರ್ಥನೆಗಳು ಸಂಪ್ರದಾಯ ವಿರುದ್ಧವಾದಕಾರಣ ಪೂರ್ವದಲ್ಲಿ ಅನೇಕಾವರ್ತಿಗಳೆಂದು ವಿನವರಿಂದ ನಿರಾಕರಿಸಲ್ಪಟ್ಟಿವೆ. ಈಗಲೂ ಇಂತಹ ವ್ಯರ್ಥನೆಗಳು ಶ್ರೀಮನ್ ಮಹಾರಾಜರವರ ದಿವ್ಯಚಿತ್ತದಲ್ಲಿ ಅವಕಾಶವನ್ನು ಪಡೆಯುವಾರವೆಂದು ನಂಬಬಹುದಾಗಿದೆ. ಈ ಸ್ಥಾನಗಳು ಪೂರ್ವದಿಂದಲೂ ಬಂದಿರುವ ಸಂಪ್ರದಾಯಾನುಸಾರವಾಗಿ ಬ್ರಾಹ್ಮಣರಿಗೆ ಮಾತ್ರ ವಿದ್ಯಾಸ್ಥಾನವಾಗಿ ಅಭಿವೃದ್ಧಿಯಲ್ಲಿರಬೇಕೆಂದು ವೇದಶಾಸ್ತ್ರಾಭಿಮಾನಿಗಳ ಸರ್ವರ ಪ್ರಾರ್ಥನೆಯು ಎಂದಿಗೂ ವ್ಯರ್ಥವಾಗಲಾರದು.

ಇದಲ್ಲವೆ ಪುರಾತನ ದರ್ಮಗಳು ಶ್ರೀಮನ್ಮಹಾರಾಜರವರ ಅರಮನೆಯಲ್ಲಿಯೂ, ಅನಂರಿಂದ ಪಾಲಿಸಲ್ಪಡುವ ದೇಶದಲ್ಲಿಯೂ ಪೂರ್ವದಿಂದಲೂ ನಡಯುಬರುತ್ತಿರುವ ಪ್ರಕಾರವಾಗಿ ನಡಿಯುವುದಕ್ಕೆ ಏರ್ಪಾಟುಗಳು ಏರ್ಪಡವಾಗಿವೆ. ಆದುದರಿಂದ ಈ ಸರ್ಕಾರದ ನಿದರ್ಶನದಿಂದಲೇ ಭರತಖಂಡದಲ್ಲಿರುವ ಧರ್ಮಾಭಿಮಾನವು ಎಷ್ಟು ಉತ್ತಮವೆಂಬುದು ಸರ್ವರಿಗೂ ತಿಳಿದುಬರುತ್ತದೆ. ಇನ್ನು ಪ್ರಾಚೀನಸ್ಥಿತಿಯನ್ನು ವರ್ಣಸುವುದನ್ನ ಹೆಚ್ಚಾಗಿ ಬೆಳಿಸದೇ ತತ್ಕಾಲಸ್ಥಿತಿಯನ್ನು ನಿರೂಪಿಸುತ್ತೇವೆ.

ಈ ಮಧ್ಯದಲ್ಲಾದರೋ ಪೂರ್ವಸ್ಥಿತಿಗೆ ಅತ್ಯಂತ ವಿರುದ್ಧವಾಗಿ ಜನರ ಆಚರಣೆ ಇರುತ್ತದೆ. ಬ್ರಾಹ್ಮಣಸಂತತಿಯಲ್ಲಿ ಹುಟ್ಟಿದ ಮಕ್ಕಳಿಗೆಲ್ಲರಿಗೂ ಸಾಮಾನ್ಯವಾಗಿ ಆಯಾ ಕಾಲಗಳಲ್ಲಿ ನಡಿಯಬೇಕೆಂದು ಶ್ರುತಿ-ಸ್ಮೃತಿಗಳಲ್ಲಿ ವಿಧಿಸಲ್ಪಟ್ಟಿರುವ ಸಂಸ್ಕಾರಗಳು ಎಂದರೆ ಜಾತಕರ್ಮ – ನಾಮಕರಣ – ಅನ್ನಪ್ರಾಶನಾದಿಗಳು ತತ್ತತ್ಕಾಲಗಳಲ್ಲಿ ಪ್ರಾಯಿಕವಾಗಿ ನಡಿಯುತ್ತಿರುವುದಿಲ್ಲ. ಆವುದಾದರೂ ನಡೆದರೆ ಊಟ-ಉಡುಗರೆ ಇವುಗಳಿಗಾಗಿ ನಡಿಯುತ್ತಿದೆಯೇ ಹೊರ್ತು ಶಾಸ್ತ್ರವಿಹಿತರೀತಿಯಿಂದ ಶ್ರದ್ಧಾಪೂರ್ವಕವಾಗಿ ನಡಿಯುತ್ತಿರುವುದಿಲ್ಲ. ಅಕ್ಷರಾಭ್ಯಾಸವೂ ಕೂಡ ವಿಧಿವತ್ತಾಗಿ ನಡೆಯುವುದಿಲ್ಲ. ಚೌಲೋಪನಯನಾದಿಗಳು ಕಾಲಾನುಗುಣವಾಗಿ ಜರಗುವುದಿಲ್ಲ. ಬ್ರಾಹ್ಮಣರಿಗೆ ಉಪನಯನವು ಎಂಟನೆಯ ವರ್ಷ ಮೊದಲುಗೊಂಡು ಐದಿಸಾರು ವರ್ಷಗಳ ವರೆಗೂ ನಡೆಯಬಹುದೆಂತಲೂ, ಅದರಮೇಲೆ ವೇದಾಧಿಕಾರ ರಹಿತರಾಗಿ ಬ್ರಾಹ್ಮಣ್ಯದಿಂದ ಭ್ರಷ್ಟರಾಗುತ್ತಾರೆಂದೂ ಶಾಸ್ತ್ರವು ಹೇಳುತ್ತದೆ. ಎಂಟುವರ್ಷಗಳ ಮೇಲೆ ಐದಿನಾರು ವರ್ಷಗಳ ಒಳಗೂ ಕೂಡ ವರ್ಷಗಳು ಹೆಚ್ಚಿದಹಾಗೆಲ್ಲಾ ದೋಷವು ಹೇಳಲ್ಪಟ್ಟಿದೆ. ಈಗಲಾದರೋ ಮುಖ್ಯಕಾಲದಲ್ಲಿ ಉಪನಯನವನ್ನು ಹೊಂದುತ್ತಿರುವ ಬಾಲಕರು ಬಹುದುರ್ಲಭರಾಗಿರುತ್ತಾರೆ. ಅನೇಕರು ಐದಿನಾರು ವರ್ಷಗಳು ಕಳೆದಮೇಲೆಯೇ ನೆವಕ್ಕೆ ಉಪನಯನವನ್ನು ಮಾಡಿಕೊಂಡು ಬ್ರಾಹ್ಮಣರೆಂದು ಹೇಳಿಕೊಳ್ಳುತ್ತಿರುತ್ತಾರೆ. ಉಪನಯನವಾದ ನಂತರದಲ್ಲಿ

ಸಂಧ್ಯಾವಂದನವು ಸಾಯಂಪ್ರಾತರಗ್ನಿಕಾರ್ಯಗಳು, ಭಿಕ್ಷಾಚರಣೆಯು ಅದರಿಂದ ಬಂದ ಅನ್ನವನ್ನ ಭುಜಿಸುವುದು, ಗುರುಕುಲವಾಸವು, ವೇದಾಧ್ಯಯನವು ಇವೇ ಮೊದಲಾದ ಬ್ರಹ್ಮಚಾರಿ ಧರ್ಮಗಳೆಂತು ಎಲ್ಲಿವೆಯೋ ಬಹು ಶೋಧನೆ ಮಾಡಿದರೂ ತಿಳಿಯುವುದಿಲ್ಲ.

ಇದೇ ರೀತಿಯಲ್ಲಿ ಬ್ರಾಹ್ಮಣ ಕನ್ಯೆಯರಿಗೆ ಶಾಸ್ತ್ರೋಕ್ತವಾದ ಯುಕ್ತಕಾಲ ವಿವಾಹವು, ವಿವಾಹಿತರಾದ ಸ್ತ್ರೀಯರಿಗೆ ಪತಿಸೇವಾದಿ ಧರ್ಮಗಳೂ ಲೋಪವನ್ನು ಹೊಂದಿವೆ. ಎಲ್ಲಿ ನೋಡಿದರೂ ಸುಸ್ಪೃತಾಭ್ಯಾಸವು, ವೇದಾಧ್ಯಯನಗಳು, ಬಾಲಕರಿಗೆ ಬಾಲ್ಯದಲ್ಲಿ ನಡಿಯುವುದಿಲ್ಲ. ಜೀವಿಕೋಪಯುಕ್ತವಾದ ಅಯಾ ದೇಶಭಾಷೆಗಳಲ್ಲಿ ಕೆಲವು ಮಟ್ಟಿಗೆ ಪರಿಚಯವಾದ ಕೂಡಲೇ ಇಂಗ್ಲೀಷು ಭಾಷೆಯ ಅಭ್ಯಾಸಕ್ಕೆ ಆರಂಭವಾಗುತ್ತಿದೆ. ಬಾಲ್ಯದಲ್ಲಿ ಕಲಿಸುವ ದೇಶಭಾಷೆಯ ಪುಸ್ತಕಗಳಲ್ಲಿಯೂ ಇಂಗ್ಲೀಷುಪಾಠ ಪುಸ್ತಕಗಳಲ್ಲಿಯೂ ಅಪೂರ್ವವಾಗಿ ಬಂದೊಂದು ಪಾಠವಾದರೂ ಧರ್ಮಬೋಧಕವಾಗಿಯೂ, ಜಗದೀಶ್ವರನ ಗುಣಗಳನ್ನು ವರ್ಣಿಸುವ್ರದಾಗಿಯೂ ಕಾಣಬರುವುದಿಲ್ಲ. ಈ ಪ್ರಕಾರವಿರುವ್ರುದರಿಂದ ಹಿಂದೂ ಬಾಲಕರಿಗೆ ಅವರವರ ದೇವತೆಯ ಮತ್ತು ಧರ್ಮದ ನಡೆನುಡಿಗಳ ಜ್ಞಾನದ ಪ್ರಸಕ್ತಿಯೇ ಇಲ್ಲದೆಹೋಗಿದೆ. ವಯಸ್ಸು ಹೆಚ್ಚಿದಮೇಲೆಲ್ಲ ಮೇಲಿಮೇಲೆ ಕ್ಲಾಸುಗಳಿಗೆ ಹೋಗಿ ಹೆಚ್ಚು ಲೌಕಿಕ ವಿದ್ಯೆಯನ್ನು ಸಂಪಾದಿಸಬೇಕಾದ ಆವಶ್ಯಕತೆಯು ಇರುವುದರಿಂದ ಪೂರ್ಣವಿದ್ಯಾವಂತರಾಗುವ ಜನರಿಗೆ ಬಾಲ್ಯದಿಂದಲೂ ೨೦-೨೫ ವರ್ಷ ವಯಸ್ಸುಪ್ರಾಪ್ತವಾಗುವ ವರೆಗೂ ತಮ್ಮ ಪೂರ್ವಜರು ಸಂಪಾದಿಸುತ್ತಿದ್ದ ಜ್ಞಾನದ ಪ್ರಾಪ್ತಿಗೆ ಎಷ್ಟುಮಾತ್ರವೂ ಅವಕಾಶವಿರುವುದಿಲ್ಲ. ಮಧ್ಯದಲ್ಲಿಯೇ ವಿದ್ಯಾವ್ಯಾಸಂಗವನ್ನು ಬಿಟ್ಟುಬಿಡುವ ಪ್ರೌಢೀದನಗಳ ಸ್ಥಿತಿಯಂತೂ ಏನೆಂದು ಹೇಳೋಣ. ದೊಡ್ಡದೊಡ್ಡ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಯೌವನದೆಶೆಯನ್ನು ಹೊಂದಿರುವ ಯುವಕರಿಗೆ ತಮಗನುರೂಪವಾದ ಲೌಕಿಕಾಧಿಕಾರಾದಿಗಳಲ್ಲಿ ಅಭಿಲಾಷೆಯು ತೆತ್ಪ್ರಾಪ್ತಿಗಾಗಿ ಪ್ರಯತ್ನವು ಅವಶ್ಯವಾಗಿ ನಡಿಯಬೇಕಾಗಿರುತ್ತ್ತದಾದ ಕಾರಣ ಕುಲಾಚಾರಾದಿಗಳಲ್ಲಿ ಅಭಿಮಾನವೇ ಹುಟ್ಟುವುದಿಲ್ಲ.

OFFICE OF THE INSPECTOR GENEARAL OF EDUCATION IN MYSORE.

—:o:—

Notification D. No. 131 Dated 21st. May 1923.

The Monthly Journal Madhvasiddhanta Prakasini Published by the Madhvasiddhanta Prakasini Sabha, Mysore, is recomended for use in libraries and reading rooms of A. V. High and Normal Schools subordinate. The Journal can be had from the Hon. Secretary, Madhvasiddhanta Prakasini Sabha, Mysore the annual Subscription being Rs. 2-4-o only.

Sd/-C. S. BALASUNDARAM IYER,
Inspector Genaral of Education.

ಪ್ರಕಟನೆ.

ನಮ್ಮ ಪತ್ರಿಕೆಯು ಅನರ್ಘ್ಯ ವಿಷಯಗಳಿಂದ ಕೂಡಿರುತ್ತದೆಂದು ಪತ್ರಿಕೆ ತರಿಸ್ಕೊಂಡಿದವರಿಗೆಲ್ಲರಿಗೂ ವಿದಿತವೆ. ಇಂತಹ ವಿಷಯಗಳು ಇನ್ನಾವ ಪತ್ರಿಕೆಯಲ್ಲಿಯೂ ದೊರೆಯಲಾರವೆಂದು ನಾವು ಒತ್ತಿಹೇಳುತ್ತೇವೆ. ಆದುದರಿಂದ ಸ್ವರೂ ಈ ಪತ್ರಿಕೆಯ ಪ್ರತಿಯೆನ್ನು ತರಿಸಿ ಓದಿ ಆನಂದವನ್ನು ಪಡೆಯಬೇಕೆಂದು ಸಕಲ ಸದ್ವೈಷ್ಣವರನ್ನೂ ಪ್ರಾರ್ಥಿಸುತ್ತೇವೆ. ಹೊಸದಾಗಿ ಇಂದಾ ಕರರಾಗಬಯಕ್ಕವರು ಹಳೆಯ ಸಂಪುಟವನ್ನು ಅಪೇಕ್ಷಿಸುವೆವಾದರೆ ಕೆಳಕಂಡಂತೆ ಲಭ್ಯ ಕ್ರಯಕ್ಕೆ ಕೊಡುತ್ತೇವೆ.

1 ನೆಯ ಸಂಪುಟ ಇರಿಂದ 12 ರವರೆಗೂ 0—8-0 2ನೆಯ ಸಂಪುಟ 1-0-0. ನೆಯ ಸಂಪುಟ 1-4-0. 4 ನೆಯ ಸಂಪುಟ 1-8-0. 5 ನೆಯ ಸಂಪುಟ 1-12-0, ನೆಯ ಸಂಪುಟ 2-0-0, ಉಟ್ಟು ರೂಪಾಯಿಗಳು 8—0-0.

ಅನಂತಸದ್ಮನಾಭವ್ರತಕಥಾ ಕ್ರಯ 3 ಆಣೆ. ವರಮಹಾಲಕ್ಷ್ಮೀವ್ರತಕಥಾ ಆಣೆ. ಕೃಷ್ಣಾಷ್ಟಮಿವ್ರತಕಥಾ 2½ ಆಣೆ. ಸ್ವರ್ಣಗೌರೀವ್ರತಕಥಾ 1½ ಆಣೆ. ನಾಯಕವ್ರತಕಥಾ 2½ ಆಣೆ. ಪತ್ರಿಕೆಯ ವಾರ್ಷಿಕಚಂದಾ ರೂ. 2-4-0

ಟವ್ಯಾಲುಫ್ರಾಜ್ ಚೆಂರೆ

ಕೆ. ವ್ಯಾಸಾಚಾರ್ಯ ಬಿ. ಎ. ಕಾರ್ಯದರ್ಶಿ,
ಮಧ್ವಸಿದ್ಧಾಂತ ಪ್ರಕಾಶಿನೀ ಸಭಾ ಮೈಸೂರು.

ವ್ಯಾಪಿಗಾಲ ಕೆ ಬಂಗಾಳಕಾಲ ಕ್ಷಾಪ್ಟಾಗಾಲ ಬಂಬಾಲ ಗಾಲಗಳ್ ಬಿಂಗ

ಆರೋಗ್ಯಚಂದ್ರಿಕೆ.

ಮದ್ರಾಸ್.

ಸಂಪಾದಕರು ಡಾಕ್ಟರ್ ಯು. ರಾಮರಾವ್ ಎಮ್. ಎಲ್. ಸಿ. ಯವರು.

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯವಾಗಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣೆ ದೊರಯುವುದಕ್ಕಾಗಿ ಏರ್ಪಡಿಸಿದ

ಬ್ಲಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ. ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮುಖ್ಯ ಲಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವುದು.

'ಹೆಲ್ತ್' ಎಂಬ ನಮ್ಮ ಇಂಗೀಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡಮನುಷ್ಯರ ಪ್ರೋತ್ಸಾಹದ ಮೇರೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿದೆ. ಅದರ ಪ್ರಥಮ ಸಂಚಿಕೆಯು ಜೂಲೈನಲ್ಲಿ ಪ್ರಕಟವಾಗಿರುವುದು.

ಈ ನಮ್ಮ ಮೊದಲನೇ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಜನಾಭಿಪ್ರಾಯಗಳು—1. ಸ್ವವಿಷಯ. 2. ಆರೋಗ್ಯವೇ ಭಾಗ್ಯ, 3. "ಮಲೇರಿಯಾ" ಎಂಬ ಮೊರೆಪ್ಪರಗಳ ನಿವಾರಣೆ, 4. ಮರುಕೊಳಿಸುವ ಜ್ವರ, 5. ಗರ್ಭಿಣಿಯರ ಆರೋಗ್ಯ, 6. ಎಳಮಕ್ಕಳಿಗೆ ಆಹಾರಕೊಡುವುದು, 7. ಕೂಸುಗಳಿಗೆ ಬರುವ ನೆಳವು, ಅದರ ಲಕ್ಷಣಗಳು ಮತ್ತು ಚಿಕಿತ್ಸೆ, 8. ಕೂಸು ಅಳುವುದೇಕೆ ? 9. ಕಣ್ಣುಗಳಿಗೆ ವಿಶ್ರಾಂತಿ, 10. ಹಲ್ಲುಗಳು, 11. ಕೊದಲಿನ ಪೋಷಣೆ, 12. ಸಾರಾಯವೆಂದರೇನು ? 13. ನೊಣಗಳಿಂದಾಗ್ಗುವ ಅಪಾಯಗಳು, 14. ಕಾಪಿ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ, 1-8-0. ಬಿಡುಪತ್ರಿಕೆ ಒಂದಕ್ಕೆ 0-2-0.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವದು ಲಾಭಕರ.

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯ ಚಂದ್ರಿಕೆ' ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರ ವಿಳಾಸ—ಮ್ಯಾನೇಜರ್,

'ಹೆಲ್ತ್' ಅಥವಾ 'ಆರೋಗ್ಯ ಚಂದ್ರಿಕೆ' ಆಫೀಸ್,

ಟಪ್ಪಾಲುಪೆಟ್ಟಿಗೆ ನಂ. 166, 323, ತಂಬುಚೆಟ್ಟಿ ಬೀದಿ, ಮದರಾಸ್.

"శ్రీదత్తమాహాత్మ్యప్రకాశ"
An extract from the Gurumahatmya Prakasika by Janardanacharya of Kopra

నీ పెళ్ళి భోగిపళ్ళకొంతకాలమైయ తరువాత నీకారాములాంటికొడుకు పుట్టగానే అవారపుపల్లెయు శాస్త్రి నిశ్చయించుకొనక పోయినట్లయితే కేడ్వ్ గ్రంథము.

పల్లె రాయుళ్ళంతా నీ వారసులుంటున్నంతవరకు పల్లెలో ఎవరికీ ఏ ప్రమాదమూ లేదు. కాబట్టి నీవు ఎక్కడికీ వెళ్ళకూడదు. నువ్వు లేకపోతే మా పల్లెకు ఎవరు దిక్కు? అని ఎంతో ప్రేమతో అడిగారు. ఆ మాటలు విని ఆనందించాలో, ఏడవాలో తెలియని పరిస్థితిలో పడిపోయాడు. ఆ రాత్రి అంతా ఆలోచించి, ఆలోచించి ఒక నిర్ణయానికి వచ్చాడు. ఆ నిర్ణయం ఏమిటో తెలుసుకోవాలని ఉందా? అయితే ఈ కథ చదవండి.

Vidyaraja next ordained Kavendra as the VIII.

Rajendra who failing to succeed in Uttaradimut established anew mut called then Rajendra's mut but subsequently (from the famous and remote successor Vyasaraja) Vyasarajasmut when Vyasaraja eclipsed all the predecessors of his in the new branch.

Enclosure D3

गुरुपरंपरामृतम्

पंचमः स्तवकः

ततोऽयमो व्याघ्रपुरीलापुरं मुनि
र्युक्तः स्वकीयैर्विभवैर्महीयान् ॥
तत्र स्ववर्गीयजनैर्महादरा
त्समर्चितोऽभूद्भुवराजडिंडिमः ॥ १ ॥

हे एकदां दिग्विजयार्थ पर्तगाली हून निघाले ते व्याघ्रपुरी लापुर (हुलेकल्) ए थें जाऊन पोंहोंचले; ते हां ते थील स्व गीय लोकांनी यांचा बहुमान करून त्यांस निकडील मठांत ने ऊन चे तले ॥ १ ॥

Once this swamy (Bhoo Vijaya Ramachendra Theertha) of Gowdasaraswat Brahmin mut at Gokarna and Partagalee etc) went to Hulikal and was honored by the people of his sect and placed in his mut at the place.

अथैनागत्य श्रुत्वा व्यासराजमठालयः (धिपः) ।
लक्ष्मीनाथाभिधस्तीर्थपादोमुदमवापसः ॥ १० ॥

स्वग्रामांत प्राप्त झालेल्या या गुरुवर्यां चें वर्तमान ऐकून, तेथील कर्नाटक देशस्थ श्री व्यासराज मठप्रवर्तक श्रीलक्ष्मी नाथतीर्थस्वामी फार संतुष्ट झाले ॥ १० ॥

Having heard of the arrival of this swamy, Lakshmi Natha Swami of Vyasaraja mut was very glad

समागम्याचुरेनेषां लक्ष्मीनाथयतिस्तदा ॥
आहूयामासवेङ्कप्पत्रामीणं परमादरात् ॥ ११ ॥

त्यांनी श्रीविजयरामचंद्रतीर्थांची भेट घेण्याच्या इच्छेनें गौडसारस्वत ब्राह्मणांतर्गत वेङ्कप्पायांस आपल्या मठांत बोलून आणिलें ॥ ११ ॥

Here after he Lakshmi natha Theertha Swami of Vyasaraja mut) arranged with un Venkappa

a gowda Saraswat Brahmin for meeting their Swami

अथ यतिवराज्ञया तेगुरुवर्यस्य सके मरे हूनौ ॥
कर्मणियन्ता वेङ्कट कृष्णाचार्यादयस्तदायन्ताः ॥१५५॥

व्यासराजमठस्वामी यांच्या आज्ञेनें त्यांना आपल्या मठांत
आणण्याकरितां त्यामठाचे पारपत्यगार(कारभारी) वेंकट कृष्णा
चार्य वइतर कर्णाटकी ब्राह्मणसमुदाय त्यांजकडे गेले ॥१५५॥
Then the Karbhari (or Parapatyagar)
Venkata Krishnacharya and other
Brahmins of Vyasaraj Mut went to
the Gowda Saraswat Guroo under the
orders of Vyasaraja Mut Guroo Etc Etc.

Enclosure E.

A BRIEF HISTORY OF VYASARAJA,

and his predecessors and successors

from the well-known Vyasavijaya by Vyasaraja's disciple and successor Sreenivasa Theertha's (and inscriptions mentioned in Epigraphica Carnataka, and Epigraphica Indica, and the Gazetteer of Mysore, etc.)

[Inscriptions of Bangalore 153 & of Shimoga 85 etc., etc.]

It is well-known that:—

(*a*) RAJENDRA THEERTHA the VIII from Madhwacharya in Madhwacharya's original Mut was *first* ordained *to succeed* VIDYADHIRAJA the VII in that Mut and this Rajendra Theertha who was on tour could not come and succeed to Madhwacharya's Mut during the last moments of his guroo Vidyadhi Raja Theertha.

So Vidyadhi Raja Theertha *next* ordained KAVEENDRA Theertha who actually succeeded him in the Madhwacharya's Mut as the VIII guroo.

Please *vide* Encl. D2 portions marked * and G. pages 2, 6 and 7. D 3 p3 #4.

(*b*) Thereafter Rajendra Theertha established a *new branch* Mut called *at first* Rajendra's Mut and *subsequently* Vyasaraja's Mut, etc., just as other Muts also are called by different names at different *times*.

This Rajendra Mut was the first or senior branch from Madhwacharya's Main Mut while Kavindra Theertha's branch or junior branch was (or continued to be) called Uttaradi Mut. Encl. G. pages 2, 6 and 7.

Jayadhwaja Theertha, Purushottama Theertha and Brahmanya Theertha were the II, III and IV successors (guroos) in this senior branch Mut or the IX, X and XI from Madhwacharya, respectively. Encl. A. Sloka 34 and G. p. 2 and 6.

(*c*) Both the III and IV guroos of the senior branch, lived and died close to and in *Abbur* (*near Channapatna*).

(*d*) But Brahmanya Theertha the IV became famous through his acts and through his only disciple and successor Vyasaraja, as brieffy described below.

(*e*) When this Brahmanya Theertha was living in Abbur, a rich couple halted there *en route* to Benarese. The husband died (of fever). The wife wanted to innolate herself as Sati.

To obtain (according to custom) permission and blessings of the elderly and holy persons in the place, *she* came finally to Brahmanya Theertha. Strangely enough, Brahmanya Theertha blessed her by saying, "Long live yourself with your husband!! You will also have two sons, give *me* the eldest son, as soon as born" without allowing him to touch the ground—(for making him the future Vyasaraja.) Encl. A Sl. 37 and 38. C. and D. portions marked. * *

The husband revived. The first son was in due time born and given also to Brahmanya Theertha. Encl. A Slokas 39, 40. B. Sl. 2, C, D-1, F-1 and F-2, portions marked. * * *

Brahmin Theosophy

(*f*) Brahmanya Theerthanursed the babe in his Guroo's cave at Abbur got it invested with the sacred thread at the age of 5 taught before his 6th year all priliminary sastras, ordained this babe in its 7th year as a sanyasi in Channapatna itself, for becoming his only desciple and successor, *and* called the babe sanyasi by the name of Vyasa Theertha. Enclosure A. Slokas 42, 43, 44, 46, B. Sloka 3 and Encl. C, D-1, D-2, F-1 and F-2 portions marked. †

(*g*) The babe-sanyasi Vyasa Theertha was sent away immediately after ordination to the *younger* Sreepadaraja of Mulbagal (Brahmanya Theertha's maternal aunt's son in Purva Asrama) *for studying.* Vide encl. A. Sl, 48, 49, B. Sl. 3, C. D. portion marked † † and F-1 (7) F-2 (8)



(*h*) Vyasatheertha completed his studies, and wrote rough sketches also of several monumental critical works, on what he studied even before his 19th year. Encl. A. Sl. 49.

(*i*) Vyasa Theertha with his two guroos went to Pandarapur and on their dreaming of the exact spot as shown in the sketch plan annexed where the Satyabhama and Arjuna worshipped idol of Rugmini. of Satyabhama *sameta* Venugopala Krishna was burried, in the bed of Bhimarathi, and after getting the box exhumed gave the box itself to Sreepadaraja. Encl. A. Slokas 51, 52, C, D, marked. §

(*j*) [The box could not be opened and was kept in Puja for some time.]

(*k*) One day, when Sreepadaraja, on reaching Mulbagal, wanted to bathe in oil, and ordered Vyasa Theertha to perform the pooja of all his mut idols, Vyasa Theertha prayed with eyes shut to God Krishna and the lid of the box flew open and the idol of Sree Venu Gopala Krishna jumped up and began to play, upon the flute and also dance to the tune of Vysaraja's prayer songs, (especially his Krishna Mangalashtaka,) etc. Encl. A. Sl. 53, 54, 55, 56, 57 & 58.

(*l*) Sreepadaraja who was told of all these events rushed from his bath to a window and saw all this to be true. Encl. A. Sl. 61-C, and D-1, page 5, line 10.

(*m*) Vyasa Theertha prayed to Sree Krishna to stand in a unique, Silpasastra Virudha position, with his left leg over the right in order to commemorate the events of this special favour shown to him and the idol *did comply with* this request. Vide Encls. A Sl. 59, 60 and P-1, P-2 and C marked, † † † †

(*n*) Sreepadaraja shortly after this gave this idol to Vyasa Theertha himself. Vide Encl. A. Sl. 62.

(*o*) Brahmanya Theertha also gave away all his idols by crowning Vyasa Theertha in his Mut (and passed away shortly afterwards.) Vide Encl. A. Sl. 62, 63. and 65.

(*p*) When Vyasa Theertha was *staying at Channapatna*, the world renowned Canarese devotional poet Purandar Doss met him and became his disciple. Enclosure F-1.

(*q*) Purandar Doss built a small Kattay and the small slab-walled Sanctum for his guroo Vyasa Theertha's bathing and Puja in Channapatna. Vide Encl. A A and M 1.

(*r*) This small sanctum became the first and the only substantial nucleus of the Mut of Vyasa Theertha, who was the first among the Maadhwa Sanyasees,

to begin living in a princely style, giving up the practice of living on *Bhikshanna* and in *sheds, tabernacles*, and caves, etc.

(*s*) Vyasa Theertha himself made additions to this small sanctum and got his own figure cut upon a stone pillar so as to be facing the sanctum and the god idols when puja boxes were placed there, and he was performing japa.

(*t*) Shortly after this, Vyasa Theertha started on a tour in the North and met Kanaka Doss also, and honored him more than any body else. When in Benarese, Vyasaraja met several opponents. He won victories over 108 pandits such as Gadadhar Misra, Paksha Dhara Misra, Vaajipeya Narasimha Yogi and Linga Misra of Benarese, etc., and earned also 108 Jayapatrikas. Vide Encl. F-1. marked 108.

(*u*) Vyasa Theertha earned also the Mohammadan royal insignia from the then Mohammadan Emperor of Delhi in 915 Hizri, s. s. 1422 or 1500 A. D. Vide Encl. B. Sloka 6 and C portions marked * * * * and the subsequent Rahadaree of 1211 Hizri mentioned in Encl. (c c).

(*v*) Vyasa Theertha visited Sreerangam, with all his paraphernalia and settled disputes of Vaishnava and Saiva limits there in the boyish way of holding his breath and running. Vide Encl. A. Sl. 71, 72, 74 and 75.

By this time Vijayendra ordained by Vyasaraja himself but given in adoption to Surendra's Mut and Vadiraja of Sode Mut(both of whom became very famous commentators shortly afterwards)—had been studying under Vyasaraja.

(*w*) Vyasa Theertha built a tank called *Vyasasamudra* in *Kandakur* at the Kadapa—Mysore frontier, across the river Papaghni. Encl. A. Sl. 90, 96 and Mysore Gazetteer.

(*x*) Vyasa Theertha performed for 12 years the puja of Venkateswar in the Tirupati Temple and made an offering of all his *Jaya patrikas.* Vide Encl. A. Sl. 88.

(*y*) When Vyasa Theertha in his tours sat, during 1520 A. D. on the throne (now inherited by Mysore) and saved the Maharaja Krishnaraja of the then very extensive Karnataka kingdom of Vijaya (Vidya) nagar, from ***Kuhayoga*** calamity, Vyasatheertha came to be called VYASARAJA, and the King requested this Vyasaraja to remain in the capital Anegondi itself as a guardian angel to his family and court. Please vide Encl. A. Slokas 98, 114 to 119 and 133 and also B. Slokas 6 and 7 and Encl. C. D, and H. portions marked + + + +.

(*z*) Vyasaraja seems to have been a contemporary of Krishna Chaitanya (1485–1533 A.D.) and Vallabhacharya (1479–1531 A.D.) of Bengal and Guzerat respectively and to have presided over a disputation in Krishnaraja's Court at Anegoddi when Vallabhacharya was engaged with and defeated some Adwaitees in Anegondi—during the latter's Southern tours.

(*Z*) Shortly before the death of Vyasaraja, he asked, KANAKA DOSS, who knew the past, the present and the future, to state how many more births each one of the three friends *viz.*, Vyasaraja, Kanaka Doss and Purandar Doss has to take. Kanaka Doss replied to Vyasaraja " you have to take three, Purandar Doss has to take two and I have (this dog has) to take one only." Some traditions diminish these numbers by one for each * * *

(*aa*) Vyasaraja and even (1) his successor Sreenivasa Theertha and Sreenivasa Theerthas successor Rama Theertha also lived and died in Anegondi itself. The death scene of Vyasaraja is described by Purandar Doss—an eye-witness. The Vrundavanas of these three guroos have therefore been constructed close to one another in an island of the Thungabhadra called *Nava Vrundavana* within Anegondi territory itself Vide Encl. J & N-1 N-2.

(*bb*) Some forty years after Vyasaraja's death (and after Sreenivasa Theertha and his successor Rama Theertha also died), a bidi or non-pontifical sanyasi desciple (*i. e.*, a sanyasi desciple not ordained for succeeding in any Mut), who was called Lakshmi Kanta Theertha and who had taken asrama for the sake of merely renouncing the world from Sreenivasa Theertha as a bidi sanyasi of Kumbakonam and who first studied under Sreenivasa Theertha as a co-student of Rama Theertha and then also under Sreenivasa Theertha's successor Rama Theertha, started about 300 years ago a new branch Mut under the title of Vyasaraja's (imaginary and figurative) throne of learning, or Vidyasimhasana Mut which title was assumed by the originator of this new branch Mut, in as much as this originator studied under the guroos of the (original and true) Vyasaraja Mut *viz.*, under Sreenivasa Theertha and was thus connected "*by learning or Vidya*" with *Vyasaraja and his suceessors*, and therefore justifying the assumption of the title of "*the throne of learning*" of Vyasaraja or Vyasaraja's—Vidyasimhasana *in contra distinction* to the *real Simhasana or true throne of the true Vidyanagar kingdom* (now inherited by Mysore) which title the original Vyasaraja's *direct descendants* of Channapatna Kundapur Vyasaraja Mut do still retain. Vide Encls. (the two nirupas or rayasa forms of the respective Muts) P. Q. p. & G.

(*cc*) Raghupathi Theertha the 4th descendent of Vysaraja in the direct line of Channapatna Kundapur Vyasaraja Mut (and the 2nd gooroo of this Mut after the Sosali branch had shot off) who earned the inams *in Kundapur, while yet in Anegondi* and called therefore Anegondi Raghupathi Theertha in the Silasasana granting him Kundapur (Kotadivasa) inam, has been admitted even by the High Court of Madras as belonging to the direct Vyasaraja Mut called Channapatna Kundapur Vyasaraja Mut. *Vide Enc. K.*

(*dd*) Raghupathi Theertha's successors who earned some more inams of Sode, Hulikal, Savanur, Gadag, etc., in the North and Boodinatta, Pacharlapalli, etc. in the south have been regarded as direct descendents of Vyasaraja by the Rajas of Dombal, etc., in the north and Sulagiri and other Rajas in the south. Encls. H. L. R-2 S. T, U. and (g)(1).

